# ಈ ವರೆಗಿನ ಹೇಳತೇನ ಕೇಳ: ಹೇಳತೇನ ಕೇಳ:

## ಚಕ್ರವ್ಯೂಹ

೧

ಮೂಡಣದ ಹಕ್ಕೆಯಲಿ ಇರುಳು ಕಂದಾಹಾಕಿ
ರಕ್ತ ಚಲ್ಲಾಪಿಲ್ಲಿ ರಟ್ಟರಾಡಿ.
ತಡವಾಯಿತೆಂದು ಅದೆ ಎಚ್ಚತ್ತ ಮುದಿಹುಂಜ,
ಉಸಿರಿಲ್ಲ ಗಿಡಗಂಟಿ ಕೊರಳಿನಲ್ಲಿ.

ಹೊಗೆ ಹಿಡಿದ ಕಂದೀಲ-ಬಿಸಿಲು ಬಿಸಿಯಿಲ್ಲದೆಯೆ
ಇಂಬು ಇದ್ದಲ್ಲೆಲ್ಲ ಮೈಚಾಚಿತು.
ಇದೆ ಈಗ ಎಚ್ಚತ್ತ ಬೀದಿ, ಮೈ ಪರಚುತಿದೆ
ಕಾರು ಟಾಂಗಾ ಗಾಡಿ, – ಹುರುಕಿನುರುಪು.

ಹೂವ ಹೆಣಗಳನೆಲ್ಲ ಹಸಿರ ಮೇಲಿರಿಸಿದರು,
ಹರೆಯು ಸೋರಿದ ಭ್ರಮರ ಹರಿದಾಡಿತು.
ಮರಡಿಯೇ ಎರೆಯಾಗಿ, ಕಸಪೈರು ಹುಲುಸಾಗಿ,
ಬೆಳ್ಳಿ ಬಟ್ಟಲ ಹಾಲು ಹಳ್ಳವಾಯ್ತು.

ಆಗಲು ಹಜಾಮ ಅಂಗಡಿ ತೆರೆದು ಬೋಳಿಸಿದ
ಬೆಳೆದ ತಲೆ, ಬೆಳೆಗುದುರು, ಚುಟ್ಟಸೇದಿ.
ಹಾಲ ತದ್ಭವಿಸಿ ಮಾರುವ ಗೌಳಿ, ಕರುವಿನ –
ಪ್ರತಿಮ ಪ್ರತಿಮೆಯ ನೆಕ್ಕುತಿರುವ ಎಮ್ಮೆ.

ಬರಿಯ ವ್ಯಂಜನಗಳಲಿ ಕವನ ಕಟ್ಟಲುಬಹುದು,
ಇದಕೆ ಸಾಕ್ಷೀ ನಮ್ಮ ಭೀಮೂಕವಿ.
ಸೂರ್ಯೋದಯದ ಅವನ ಹಾಡು ಶಾಲೆಗಳಲ್ಲಿ,
ಇನ್ನೂ ಅನೇಕ ಕಡೆ ಹೆಸರಾಗಿದೆ.

ಚಷ್ಮ ಹಾಕಿದ ಗೆಳೆಯ ಬೀದಿಯಲೆ ಬೀರಿದನು:
ಈ ವಿಶ್ವವೆಲ್ಲವೂ ಬೂದಿಬಣ್ಣ.
ಜನರು ನಕ್ಕರು, ಅಥವಾ ಮತ್ತೆ ತಲೆದೂಗಿದರು;
ಕಂಡ ಈ ಹೊಸತತ್ವ ಏನು ಚೆನ್ನ!

೨

ಇಲ್ಲಿ ಕುಳಿತಿದ್ದೇನೆ, ಸುತ್ತ ವರ್ತುಳ ಕೊರೆದು
ಒಳಗು ಹೊರಗುಗಳನ್ನು ಹೊರತು ಪಡಿಸಿ;
ಎಂದೊ ತಿಂದದ್ದನ್ನು ಮತ್ತೆ ಬಾಯಿಗೆ ತಂದು
ಬರಿಯ ಮೆಲುಕಾಡಿಸುವೆ, ಜೊಲ್ಲು ಸುರಿಸಿ:

ನೀರ ತೆರೆಗಳ ಮೇಲೆ ಲೀಲೆಯಾಡುವ ಬಿಸಿಲು,
ಗಿಡದ ಬುಡದಲಿ ಬೆಳಕ ಹೆಣೆವ ನೆರಳು,
ಎಲೆಯ ಹಸುರಿನ ತುಂಬು ಚಿತ್ರ ಬಿಡಿಸಿದ ಹೂವು;
ಸುಡುಗಾಡಿನಲ್ಲೆಂಥ ನಂದನವನ!

ಕೆಂಪೇನು, ಹಸುರೇನು, ಹಳದಿ ನೀಲಿಗಳೇನು!
ಬಿಸಿಲಿಗೊಡ್ಡಿದ ತೊಗಲಿಗೆಂಥಾ ಸುಖ!
ಹರೆಯಲುಬ್ಬಿದ ತರುಣ ಅಜ್ಜಿಯನು ಕೇಳಿದ್ದ:
ಹೀಗು ಆಗುವುದುಂಟೆ ಹೆಣ್ಣಿನ ಮುಖ?

ಅದು ಏನು, ಇದು ಏನು, ಗದ್ಯದಲೆ, ಪದ್ಯದಲೆ?
ಉಪಮೆ ರೂಪಕ ಪ್ರತಿಮೆ ಸಮಯ, – ಭ್ರಾಂತಿ.
ಸಾವ ಪ್ರಶ್ನಿಸಿ ನಕ್ಕ ಹಸುಳೆ ಹಾಲಿನ ಕೆನ್ನೆ –
ಗಾವ ಕಾಣಿಕೆಯನ್ನು ಹೊತ್ತು ತರಲಿ?

ಅಯ್ಯೋ ಸಾಯುತ್ತಿರುವೆ ಅಭಿಮನ್ಯುವ್ಯೂಹದಲಿ
ಕೊರೆದ ಗೆರೆಗಳ ಹರಿಯದಂಥ ಧೀರ;
ಉತ್ತರೆಯ ಗರ್ಭದಲಿ ಬೀಜ ಬಿತ್ತಲೆ ಇಲ್ಲ, –
ಹೇ ಕೃಷ್ಣ, ಪಾಲಿಸೋ ನಿನ್ನ ಹಗಲ.

೧೯೬೧

# ಹೋರಿ

೧

ಕಟ್ಟಿರುವ ಕಣ್ಣಿ ಹರಕೊಂಡು, ಥುರಕೀ ಹೊಡೆದು,
ಹಿಡಿಯ ಬಂದಣ್ಣಗಳ ಕೊಸರಿ, ಕೈಮಿರಿ,
ಉದ್ಗಾರ ಕೊರೆ ಬೇಲಿ ಹಾರಿ ಹೋಹೋ
ಬಂತು ಹಂಡ ಹೋರಿ.
ಮುಸಮುಸನೆ ಮುಸಮುಸನೆ ತೇಗುವುದು;
ಕಿಸಮೂಗಿಂದ ಬಸಿಯುವುದು ಸೊಕ್ಕು, ಹುಣ್ಣಿಮೆಯ
ಜೇನು ಹುಟ್ಟಿನ ತೊಟಕು ತೊಟಕು.

ಮಡುಗೊಂಡ ಗಾಳಿಯನು ಬೀಸು ಕಿವಿಗಳ ಚಾಚಿ
ಎದುರು ಈಸುವ ಹಮ್ಮು.
ಮುಂದೆ ಬಂದವರ ತುಟಿ ಕಂಟಕ್ಕೆ ಬಾಯಿಕ್ಕಿ
ಇಡಿಯ ಕೊಡವನ್ನೆಲ್ಲ ಬರಿದು ಮಾಡುವ ಆಸೆ.
ಬೆಂಕಿ ಮೈ, ಮೈತುಂಬ ಬಾಯಿ; ಸಿಕ್ಕಷ್ಟನ್ನು,
ಸಿಕ್ಕಲ್ಲಿ ಗಪಗಪಾ ತಿಂಬಾಸೆ
ದೃಷ್ಟಿ ಕಡೆಗೋಲಿಂದ ದಿಕ್ಕ ಕಡೆಯುವ ಮೋಡಿ.
ಕರಣಗಳ ಕಳವಳಕೆ ಕಾಲ ಕೆದರುತ್ತಲಿದೆ
ಎದ್ದ ಧೂಳಲಿ ನಾನು ನೀನು ಯಾರೋ!
ಇನಿಯಲುಗಿ ಬೆನ್ನ ಹುರಿಯುಬ್ಬಿನಲಿ ಒಡಮುರಿತ;
ಒಳಗೆ ಗಲ್ಭಸ್ವೀಮು, ತಿರುಗಣಿಯ ಮಡುಸುತ್ತಿ
ತೊಡೆಯ ನಾಡಿಯ ಬೇರ ಕೀಳಲೆಳಸುವದು.
ಮತ ಮತ್ತ ಬೆರಳ ತುದಿಯಲ್ಲಿ ಮುಡಿಯನು ಮುಟ್ಟಿ
ಸಲಕೊಮ್ಮೆ ಒಡಪನಾಡುವ ಎಲಗ ಏ ಬಾಲಿ,
ಮುನ್ನೋಡೆ ಸರಿ ಅತ್ತ; ಇಲದಿರಕ
ತುಟಿ ಕೆನ್ನೆಯಲಿ ಬೆಳೆದ ಚೆಂಗುಲಾಬಿಗಳನ್ನು
ಜತನವಾಗಿಟ್ಟುಕೋ ಜ್ವಾಕಿ!

೨
ಒಂದೆ ಬಿಳಿಯಲ್ಲೀಗ ಏಳು ಬಣ್ಣದ ಸೃಷ್ಟಿ.
ಹಳೆ ಹಸಿರು ಪಡಕಿಯನು ಹಚ್ಚಿಕೊಂಡಿದೆ ಬಿಡೊ ಭೂಮಿ,
ಹರಕಿನಲಿ ಕಂಡದ್ದು ಬಿಳಿಯ ತೋಗಲು!
ಆಕಾಶಕಾದರೂ ಎಂಥ ಕೆಂಪು!
ಘಟ್ಟದಲ್ಲಿನ ಭಟ್ಟಿಸೆರೆ ಹರವಿ ತೂತಾಗಿ
ಸೋರಿ, ಒಸರುತ್ತಲಿದೆ ಹೊಳೆಯಾಗಿ; ದಂಡೆಯಲಿ
ತೆರೆ ನಿರಿಯನೊದ್ದಾಡಿ ದೀಡಿಯಾಡುವ ಮುರುಕ.
ಈ ಗಾಳಿ, ಹೂವ ಹುಡಿಯಲ್ಲಿ ಹುಡದಿಯನಾಡಿ,
ಬಿದಿರ ಹರೆ ಹದಿನೆಂಟರಲ್ಲಿ ಕಚಗುಳಿಯಿಟ್ಟು,
ಹಾಕುವುದು ಗವಿಯೊಳಗೆ ಸಿಳ್ಳು – ತುಡುಗು ಸಂಕೇತ.
ಯಾಸಿ ಕಣ್ಣಿನ ಹಾಗೆ ಬೇಲಿಯಲಿ ಹೂ ಚಿಗುರು.
ಮಗ್ಗಿ ತಗಿಸಿದ ಕುಬಸ ಬಳ್ಳಿ.
ಕಂಡ ಹೆಣ್ಣಿನ ಕತೆಗೆ ನಾನೆ ನಾಯಕನೀಗ.
ಸೀರೆಯುಟ್ಟದ್ದೆಲ್ಲ ಜೀವಂತ ಉದ್ರೇಕ.
ಹಸಿರು ಐಸಿರಿಯಿಂದ ಮೂರ್ಛೆ ಹೋಗುವ ಹಳದಿ
ಹೇಳು 'ಚೆಲುವನು ಸಿಕ್ಕಿ
ನನಗೆ ಮದುವೆಯೆಂದು?'

೩

ಬಿಸಿಯೆಂಬುದುಂಟೆಂದು ನನಗೆ ಗೊತ್ತಾದದ್ದೆ ಈಗ,
ಇದೆ ಮೊದಲ ಸಲ.
ಸಸಿಯ ಒಳಗಡೆ ಹೂತ ಚಿಗುರು,
ಚೈತ್ರಗಳ ಆರೈಕೆಯಲ್ಲಿ ಆಗಲೆ ಬೆಳೆದು,
ಹೊಳೆಯ ದಂಡೆಯ ಕರಿಕಿಯಾಗಿ ಆವರಿಸಿತೋ
ಇದ್ದ ಬಿದ್ದಿರುವೆಲ್ಲ ಅವಕಾಶವ.
ಮೀಸಲದ ಬಯಕೆಯಲಿ ಬಾಯಿ ಬಿಟ್ಟಿದೆ ಭೂಮಿ.
ತನ್ನ ಅಸ್ತಿತ್ವಕ್ಕೆ ಸಾರ್ಥಕತೆ ಬರುವ ಕ್ಷಣ
ಮೋಡ ತೊಡೆಯಾಳದಲಿ ಮಿಂಚಿನಾಟ.
ಸಾವುಗಳ ಸತ್ತ ಬೆರಗಿನಲಿ ಹಸುರಿನನಂತ,
ಲೀಲೆಯಿದು, ಹುಡುಗಿ ಬಾ ಒಡೆದೆನೊಡಪ!

೧೯೨೧

# ಅಗಲುವಾಗ

ಗೆಳೆಯಾ ಬರತೀನಿ ಮನದಾಗಿಡೊ ನೆನಪ ||ಪ||
ನಾ ನೀ ಯಾರೋ ಏನೋ ಎಂತೊ
ಅಂತು| ಪೋಣಿಸಿತು ಕಾಣsದ ತಂತು
ಇದು ಹೌದು ಹಾದಿ ಗೆಳಿತಾನ
ಇದ್ದ| ರಿದ್ದೀತು ಹಳಿಯ ಒಗತಾನ
ಮರೆತು ನೆನಪಿಸಿಧಾಂಗ
ಬೆಸದಾವೊ ನಮ ಮನ
ಕಡಿತನಕ ಸ್ನೇಹ ಬಂಧನ ||

ಹರಿನೀರು ಹರೀತೊ ಬೆಳವಲಕ
ಒಡಮುರಿ| ಧಾಂಗಾತೊ ಹಸಿರು ಎಡಬಲಕ
ತೆನೆಹಾಯ್ದು ನವಿರೆದ್ದು ತೂಗಿ
ತುಂಬಿ| ಬಂದೀತೊ ಈ ವರುಷ ಸುಗ್ಗಿ
ತೂರಿಕೊಳ್ಳುದರೊಳಗೆ
ಗಾಳಿ ಅಡಮಳಿದಾಳಿ
ಕೈಗಿತ್ತು ಬಾಯ್ಗಿಲ್ಲ ಮಾಗಿ ||

ಮೈಯಾಗ ಬಂಧಾಂಗ ಚೈತ್ರ
ಮೈತ್ರಿ| ಕುಣಿಸೀತು ನಮ ನಿಮ್ಮ ನಿರತ
ಹೊಸೆದುಸಿರು ಹುರಿಬಿತ್ತೊ ಬಿಗತ

ಕುಣಿಕಿ| ಬಿಚ್ಚಿಲ್ಲ ಬರಿ ವ್ಯರ್ಥ ಎಳೆತ
ದಿನವೊಂದು ಕ್ಷಣಧಾಂಗ
ದಿನವೆಲ್ಲ ಧಾಂಗಧೀಂಗ
ಹರೆ ಬಂತೊ ಪಿರಿತೀಗಿ ತುರತ ||

ಕಣ್ಣಾಗ ತುಂಬೇತಿ ಒರತಿ
ಇರಲಿ| ಇದs ನಮನಿ ಕಡೀತನಕ ಪಿರತಿ
ಬೆಳೆದು ದೊಡ್ಡವನಾಗೊ ಗೆಳೆಯಾ
ಹರಿಸೊ| ನಾಡೊಳಗ ಬೆಳಕೀನ ಝರಿಯ
ಅಭಿಮಾನ ತುಂಬಲೆನ್ನೆದೆಯ
ಅಲ್ಲೆ| ಕೂಗಲಿ ಇವ ನನ್ನ ಗೆಳೆಯ
ಚಂದ್ರಶೇಖರನೆದೆಯ
ಹರಕೆ ನಿನಗಿದೊ ಧಾರೆ
ಇರಲೀದು ಕಡಿತನಕ ನೆನಪ ||

೧೯೭೦

# ನೀನು – ನಾನು

ಆಣೆಯಲಿ ಮಾತಾಡಿ ಭರವಸೆಯನುಸಿರಾಡಿ
ತೆಕ್ಕೆಗೆಟುಕದ ತೆರೆಯ ನೆರಳು ನೀನು;
ನಂಬಿರುವ ಬರಿ ತೋಳ ಹುಂಬ ನಾನು.
ಗೀಸಿ ಅಗಲಿಸಿದ ತುಟಿ, ಅದರೊಳಚ್ಚೇರು ಬೆಳ-
ದಿಂಗಳನು ಸುರಿವ ಹುಸಿನಗೆಯು ನೀನು;
ಎರಡು ಕಣ್ಣುಳ್ಳ ಬಿಕನೇಸಿ ನಾನು.
ಮಲೆನಾಡ ಸಿರಿಮೈಗೆ ಹಸಿರೊರಸಿ, ಹೂ ಮೆತ್ತಿ
ಮುದ್ದಿಡುವ ಮನ್ಸೂನ ಮಳೆಯು ನೀನು;
ಬೆಳೆವಲದ ಉಸುಬಿನ ಮಸಾರಿ ನಾನು.
ಬ್ರಹ್ಮ ಮಗುವಿದ್ದಾಗ ಥೇಟು ಹೆಣ್ಣಿನ ಹಾಗೆ
ಪಾಟಿಯಲಿ ಬರೆದ ಹುಸಿ ಚಿತ್ರ ನೀನು;
ಅಂಕಲಿಪಿ ಓದಿರುವ ಜ್ಞಾನಿ ನಾನು.
ಇದ್ದಿಲ್ಲ, ಈಗಿಲ್ಲ , ಹಗಲೆಲ್ಲ ವರ್ಣಿಸಿದ
ಹಳೆಯ ಕಾವ್ಯಗಳ ಕವಿ ಸಮಯ ನೀನು;
ಏನೆ ಆದರು ಹೌದು ರಸಿಕ ನಾನು.
ಈಗಿದ್ದ ನದಿ ಮತ್ತೆ ಇನ್ನೊಂದು ಕ್ಷಣಕುಂಟೆ?
ಓ ಅದರ ಜೀವಂತ ವ್ಯಾಖ್ಯೆ ನೀನು;
ಅದ ಬರೆದ ಇಷ್ಟಗಲ ಹಾಳೆ ನಾನು.

ತುಟಿನೀಡಿ, ಮೈಸವರಿ, ನವಿರು ನವಿರಿಗೆ ಹೊಸೆದು,
ಮಾತಾಡಿ, ಮಟಾಮಾಯ – ಕನಸು ನೀನು;
ತುಟಿನೆಕ್ಕಿ ತುರುಸುತಿಹ ಪ್ರಾಯ ನಾನು.
ನೀ ಯಾರೊ, ಎಂತೊ, ಹೆಸರೇನೊ, ಸರಿ ಇತ್ತೀಚೆ
ನಾನೂನು ಅರಿತೆ; ಮೃತ ಸ್ಮರಣೆ ನೀನು;
ಅದ ಹುಗಿದು ಕಟ್ಟಿರುವ ಗೋರಿ ನಾನು.

೧೯೫೯

# ಕಳ್ಳಸಂತೆ

ಸರಿಪಡಿಸಿದಳು ಜೋತ ತೊಗಲ ತೆರೆ, ಅಲ್ಲಲ್ಲಿ, –
ಆಯ್ತು ಮುದುಡಿದ ಕೌದಿ ಉದ್ದ ಅಗಲ.
ಪ್ಯಾರಿಸಿನ ರಂಗು ತೇಪೆಯ ಹಚ್ಚಿ ಮೆತ್ತಿದಳು,
ಕೆನ್ನೆ ತುಟಿಗಳ ಹರಕು ಬಿರುಕನೆಲ್ಲ.
ಹುಸಿನಗೆಯ ಖೊಟ್ಟಿ ನೂರರ ನೋಟು ಛಾಪಿಸುವ
ಹಳೆ ಯಂತ್ರ ಹೇರಿದಳು ತುಟಿಯಮೇಲೆ
ಉಸಿರಿಡುವ ಹುತ್ತವನು ತೀಡಿ ತೀಡಿ
ಮಾಡಿದಳು ನಿಡಿದಾದ ನೀಟಾದ ಮಿದು ಸಂಪಗೆಯೆಸಳ.
ಕಣ್ಣಿನೆವೆಗಳ ಸಾಣೆ ಹಿಡಿದು ಚೂಪಾಗಿಸುತ
ಕೊನೆಗೆ ಹುದುಗಿದಳೆರಡು ಹರಿತ ಬ್ಲೇಡ.
ನಿಜವ ಸಾರುವುದಕ್ಕೆ ತಲೆಯನೇರಿದ ಶುಭ್ರ –
ಖಾದಿಯೆಳೆ ಮುಚ್ಚಿದಳು ಇರುಳಿನಿಂದ.
ಪೇಟೆಯೊಳಗಿನ ಎರಡು ಗೌರಿಶಂಕರ ತಂದು
ಜೋತುಬಿಟ್ಟಳು ಎದೆಗೆ ಮೋಜಿನಿಂದ.
ಹರೆಯುಕ್ಕಿ ಮಹಾಪೂರ ಬಂದು, ಸಿಕ್ಕಾಪಟ್ಟೆ ತುಂಬಿ ಹರಿದು,
ಮನೆಮುರಿದು, ಕೆಡವಿ, ಮಾಡಿದ ವಿಕಾರವನೆಲ್ಲ
ಹೊಚ್ಚಿದಳು ನೈಲಾನು ಸಿಲ್ಕಿನಿಂದ!
ಫಿಲ್ಮು ತಾರೆಯರಿಂದ ಕಲಿತ ಹದಿನಾರನ್ನು
ಸಿಂಪಡಿಸಿದಳು ಅಲ್ಲಿ ಇಲ್ಲಿ ಉಲ್ಲಿ.
ಇಳಿದಳೋ ದಾರಿಯಲ್ಲಿ –
ಭೋಪರಾಕ್! ಏನಂದಿ?
ನನ್ನೆಡೆಗೆ ನಗುಬೀರಿ ಬಳುಕುತಿಹಳೆ?
ನನಗೆ ಗೊತ್ತಿಲ್ಲವೇ ಇದು ಕಳ್ಳಸಂತೆಯೆಂದು?

೧೯೫೯

# ಮಾಂಸದ ಬೆಳಕು

ಏನು ಹೇಳುತ್ತಿ ಆ ಸೂರ್ಯಾಂದು, ಚಂದ್ರ್ಯಾಂದು?
ಕ್ಯಾಲೆಂಡರಿನ ಎರಡು ಅಚ್ಚಿನ ಮೊಳೆ.
ದೀಡುಕಾಲಿನ ಕುಂಟ ಕಾಲ, ಕಂಪೋಜಿಟರು;
ಇರುಳರಿಯದನಿಮಿಷರು, ಹುಚ್ಚೀ ಬಿಡು.

ತಿರುಗಿ ನೀ ಕೇಳಿದರೆ ಅವರೆಮ್ಮ ಪಹರೆ ಜನ;
ನಮ್ಮ ಮಾಂಸದ ಬೆಳಕು ಏನು ಕಮ್ಮಿ?
ಟುಕ್ಕಿಡುವ ನಾಯಕಿವಿ ಹಿಂಡುತ್ತ ಕೇಳು; 'ಮಾಂ-
ಸಕೆ ಹಸಿವು ನಿದ್ರೆಯಿವೆ, ನಿನಗೇನಿದೆ?'

೧೯೬೧

# ಉಮರ ಮೈಯಲ್ಲಿ ಬಂದಾಗ

ಬದಿಯ ಹಸಿ ಗೋರಿಯನು ಹರಿಯದಿರು, ಗೀಸದಿರು
ಹಲ್ಕಿರಿದು ಬಂದೀತು ಅಳಿದ ಭೂತ.
ವರ್ತಮಾನದ ತೋಳಿನೊಳಗಾನು ಪರಮಸುಖಿ;
ಇರಲಿ ಎಂಥದೆ, ಎಷ್ಟೆ ಅನಿರೀಕ್ಷಿತ.
ಪೂರ್ವಪಶ್ಚಿಮಗಳನು ಇಕ್ಕು, ಅಗಳಿಯ ಹಾಕು,
ಆ ಸೂರ್ಯ ಕ್ರೂರ ಶಶಿ ಇಣಕಿಯಾರು.
ನಾಲ್ಕು ಮೂಲೆಗು ನಾಲ್ಕು ಅಮವಾಸೆಗಳ ಹಚ್ಚು,
ಬರಲಿ ಕಿರಣಿಸಿ ಕರಿಯ ಕಪ್ಪು ಬೆಳಕು.
ಬಾಗಿಲಿನ ಆ ಈ ಬದಿಗೆ ಕಾವಲಿಗಿರಲಿ
ಫಾಲ್ಗುಣ ಚೈತ್ರ ಮಾತ್ರ!

ಇದು ನೋಡು ಹಂಗಾಮು!
ನಿನ್ನ ಬತ್ತಲೆಯಿಂದ ಈ ಎದೆಯ ಹದಗೊಳಿಸು
ಒತ್ತಿ ಉತ್ತು.
(ಕೋಗೊಲೆಯ ಕಂಠದಲಿ ಕುಳಿತ ಬೆಸಗೆಯೊಮ್ಮೆ
ನಿಟ್ಟುಸಿರ ಬಿಕ್ಕುತ್ತ, ತುಸು ನೆರಳಿತು.)
ನವಿರಸಾಲಿನಗುಂಟ ಸುಖದ ಮುಂಗಾರಿ ಬೀಜಗಳ ಬಿತ್ತು
(ಹೊಡೆ ಹಾಯ್ದ ಶ್ರಾವಣದ ನವಿರು ಜೋಲಿಯ ಹೊಡೆದು
ಹಾಗು ಹೀಗೂ ತೂಗಿ ತುಸು ನಕ್ಕಿತು!)
೧೯೫೯

# ಕೋಡಂಗಿ ಹೇಳಿದ್ದು

೧

ಖರೆ ಖೊಟ್ಟಿ ಏನ ಹೇಳಿದರೂನು ಕೇಳುತ್ತಿ;
ನನ್ನಾಣಿ, ನಿನ್ನಾಣಿ, ಕೆಟ್ಟ ದೇವರ ಆಣಿ –
ಬಿರಿ ಬಿರೀ ಬಿರಿ ಬಿರೀ, –
ನೆನೆದರೀಗಲು ಅಬ್ಬ, ಮೈಗೆ ಮುಳ್ಳುಗಳೆದ್ದು
ಹರಿಯುವುದು ತೊಟ್ಟಂಗಿ ಟರ್‍ರನೆಂದು!
ಆಗ ಆಗಿರಬಹುದು ಗಂಟೆ ಏಳೋ ಎಂಟೊ,
ಮಗುವಿನಿಸ್ಸಿಯ ಹಾಗೆ ಮಾಡಣವು ರಟ್ಟಾಗಿ
ಪಿಚ್ಚಗಣ್ಣಿನ ಸೂರ್ಯ ಮೂಡಿ ಬಂದ.
ನಾನಿಲ್ಲೆ ಕುಳಿತಿದ್ದೆ, ಇದೆ ಹಾಸಿಗೆಯ ಮೇಲೆ,
ಈ ಕಡೆಗೆ, ಹೀಗೆ ಮುಖ, ಹೀಗೆ ಭಂಗಿ.
ಅಥವಾ, ಇಲ್ಲವೆ, ಮತ್ತೆ, ಸರಿ, – ಪಶ್ಚಿಮಕೆ ಈ ಕಿಡಕಿ,
ಬಿಳಿ ಹೊಳಪಿನೆಳೆಬಿಸಿಲ – ಕೋಲು ಮೆತ್ತಗೆ ತೂರಿ,
ತಪ್ಪು ಮಾಡಿದ ನಾಯಿ ಹೀಗೆ ಬಿತ್ತು.
ಹೊರಗೆ ಹಸುರಿನ ಹರಕಿನಲ್ಲಿ ಹತ್ತೋ ಎಂಟೊ
ತೆರಕೊಂಡು ಅಲುಗಲುಗಿ ಬಿಸಿಲ ಕಾಸುವ ಹೂವು.
ಬಿರಿ ಬಿರೀ ಬಿರಿ ಬಿರೀ, – ಟ್ರೇನು,
ಅದರಲ್ಲೂನು ಎಕ್ಸ್‌ಪ್ರೆಸ್ಸು, –
ನೆನೆದರೀಗಲು ಆಹಾ!
ಹುರುಕಿನುರುಪಿನ ಮೇಲೆ ಕಿರಬೆರಳ ತುದಿಯಿಂದ
ತುರಿಸಿದಂತೆ!
ಅಥವಾ ದೋಸೆಯವಾಸನೆ ಮೂಗಿನಂಚಿನಮಟಾ ತುಂಬಿ
ಹೊಟ್ಟೆಯತನಕ ಸೋರಿದಂತೆ!
ಬಿರಿ ಬಿರೀ ಬಿರಿ ಬಿರೀ, –
ಹೊಡೆವ ನನ್ನೆದೆಯ ತಾಳಕ್ಕೆ ಅನುಗುಣವಾಗಿ,
ತುಂಬು ಕಳಚಿದ ಹಣ್ಣು ಕೆಳಗೆ ಉರುಳುವ ಹಾಗೆ,
ಉರುಳಿ ಬೀಳುವ ಹಾಗೆ, ಬಿದ್ದು ಉರುಳುವ ಹಾಗೆ,
ಬಿದ್ದೇ ಬಿಡುವ ಹಾಗೆ, –
ಬಂದಳು!

೨

ಉದ್ದವಾಯಿತು ಹೌದ ಪ್ರಸ್ತಾವನೆ?
ನುಡಿಯ ಮಾಪನು ಬಳಸಿ ಎದೆಯಾಳದನುಭವವ
ಅಳೆದಾಗುಮಾಡುವುದೆ ಕಷ್ಟನೋಡು. ಆದರೂ,

ಒಂದನಾಡಲು ಹೋಗಿ ಒಂಬತ್ತನಾಡುವರ
ಕಂಡರಾಗದು ನನಗೆ. ನಿನಗೆ?
ಬಿರಿ ಬಿರೀ ಬಿರಿ ಬಿರೀ ಬಂದಳಷ್ಟೆ,
ಥೇಟು ಕ್ಯಾಲೆಂಡರಿನ ನಟಿಯ ಹಾಗೇ ಕಣೋ ರೂಪ!
ಅವೆ, ಕಣ್ಣು, ಅದೆ ಮಸಡಿ, ತುಟಿಯ ಅಣೆಕಟ್ಟಿನಲಿ
ಮಡಗೊಂಡ ಮುಗುಳು ನಗೆ.
ಬಳಿಬಂದಳಿನ್ನಷ್ಟು, ಕಣ್ಣುಗಳನೋಡಿದಳು.
ಗವಿಯ ಕಿವಿಯಲ್ಲೀಗ ಗಾಳಿ ಪಿಸುಗುಡಲಿಲ್ಲ.
ಬಿಸಿಲು ಬೆಂಕಿಯ ನಕ್ಕು ತೆಕ್ಕೆ ಹಾಯುತ್ತಿತ್ತು.
ರಸ್ತೆ ಮನೆ ಕಲ್ಲುಕಟ್ಟೆಗೆ ಎಲ್ಲ ಎಲ್ಲವನು,
ಎಂಥ ಬಿಸಿಯಿಂದವಳು ಪ್ರೀತಿಸಿದಳಂತೀಯ!
ಹುರಿದ ಬೀಜದ ಹಾಗೆ ಅವಳೆದುರು ನಿಂತಾಗ,
ಎರಿ ಜವಾರಿಯ ಕಬ್ಬ ಸುಲುಸುಲಿದು ತಿಂಬಾಗ
ಕಬ್ಬಿಗೆಂತೋ ಅಂತೆ ನನಗಾಯಿತು.
ಸಿನೆಮ ನಾಯಕರಂತೆ
ಬಾಯ್ಪಾಠ ಮಾಡಿದ್ದ ಹಾವಭಾವಗಳನ್ನು ತೋರಿಸಿದೆನೆ?
ಇಲ್ಲ.
ಅಥವಾ ಪ್ರಾಕೃತರಂತೆ
ನಯವಿನಯ ನಮ್ರತೆಯ ಸಂಯಮಿಸಲಾರದೆಯೆ ಮಿತಿ ಬಿಟ್ಟೆನೆ?
ಇಲ್ಲ.
ಅಥವಾ ಪಶುವಿನ ಹಾಗೆ,
ಉದಾ: ಕೋಣನ ಹಾಗೆ ಬೆದೆ ಮಣಕ ಕಂಡಂತೆ ಬಾಯ್ ಕಿಸಿದೆನೆ?
ಇಲ್ಲ.
ಅವಳ ದೇಹದ ಏರು ಇಳಿವುಗಳನಭ್ಯಸಿಸಿ
ಈ ವಹಿಯ ತುಂಬ, ಅದು ಆಧಾರ ಸಹಿತಾಗಿ
ಟಪ್ಪಣಿಯ ತೆಗೆದುಕೊಂಡೆ!
ಹೇಳು ಈ ಸಾಹಸಕೆ ಏನೆನ್ನುವಿ?

೧೯೬೩

# ನಾಯಕ ಅಥವಾ ಡೊಳ್ಳಿನ ಹಾಡು

ಸ್ವಾಮಿ ನಮ್ಮಯ್ ದೇವರ ಬಂದಾವ ಬನ್ನಿರೇ
ಸ್ವಾಮಿ ನಮ್ಮಯ್ ದೇವರ ಬಂದಾವ ಬನ್ನಿರೇ ||ಪ||

ದೇವ ದೇವರ ನಮ್ಮವನಯ್ಯಾ
ಹಾಡಿಗೆ ಮೊದಲೋ ನಮ್ಮಯ್ ನೋ |

ಶುಂಭ ನಿಶುಂಭರ ತಿಂದ ಸಾಂಬಗುರು
ಮೇಲನಾಡಿನಿಂದ ಬಂದವನೋ ||

ದಡ್ಡ್ಯಾಗ ನಮದೇವ ದೊಡ್ಡವನಯ್ಯಾ
ಕುರ್ಯ್ಯಾಗ ಹಿರಿಯಾಂವ ನಮ್ಮಯನೋ |
ಬೆಳಿಗೋಳ ಕೀಲ ಬಲ್ಲವನಯ್ಯಾ
ಮಳೆಯ ಸೂತರಾ ತಿಳಿದವನೋ ||

ಹುಲಿಮೀಸಿ, ಮೈತುಂಬ ಬಂಡಾರ ಬಡಕೊಂಡ
ಹಸುವಿನ ಹೆಜ್ಜ್ಯಾಗ ನಡೆದವನೋ |
ಬೀಸಿದ ಹೊಸಗಾಳಿಗೊಂದೊಂದ ಪರಿಯಾಗಿ
ಸೂಸುವ ನಗಿಗಳ ತುಟಿಯವನೋ ||

ಬಿಳಿಯ ಗೊಂಗಡಿಯ ಬಗಲ ಚೀಲದ
ಹಗಲದೀಪದ ನಾಯಕನೋ
ಚಿನ್ನದ ಕಡೆಯಿಂದ ಚೆನ್ನಾದ ಕೈಗsಳ
ಇಕ್ಕಳಧಾಂಗ ಮುಗಿದವನೋ ||

ಇಂಥಾ ಸ್ವಾಮಿಯ ಹಂತ್ಯಾಕಪ್ಪಾ
ದುಡುದುಡು ಓಡ್ಯಾವ ಕುರಿಗೋಳ
ಕುರಿಗೋಳಂದರ ಕುರಿಗೋಳಪ್ಪಾ
ಮಾತನಾಡುವ ಕುರಿಗೋಳ ||

ಸುತ್ತುಗಟ್ಟಿ ಮುಕ್ಕಟ್ಟ ಕಟ್ಟಿದಾವ
ಜಯ ಜಯವೆಂದಾವ ಕುರಿಗೋಳ |
ಅಂದ ಆಡದ್ದಕೆಲ್ಲ ಹೌದ್ಹೌದೆನ್ನುತ
ಕಣ್ಣೀರ ಕರದಾವ ಕುರಿಗೋಳಾ ||

ಮೇಲನಾಡಿನ ಚೆಲುವ ನಾಯಕಾ
ತಾವೊಂದ ಏನ ಮಾಡಿದನೋ |
ಹೊಕ್ಕ ಹೊರಗ ಬರಧಾಂಗ ಕಟ್ಟಿದಾನ
ತೋಳಿನ ಬೇಲಿಯ ಒಳಹೊರಗೊ ||

ಗಾಣದೆತ್ತಿನ್ಹಾಂಗ ಕಣ್ಣ ಕಟ್ಟಿಸಿಕೊಂಡು
ಕಾಶಿಗೆ ಬಂದೇವಂದಾವ |
ಬತಗೆಟ್ಟ ಕುರಿಗೋಳ ಬಲ್ಲಾಂಗ ಕುಣದಾವ
ಸ್ವರ್ಗಕ ಕಣ್ಣ ಕಿಸದಾವ ||

ನೆತ್ತ್ಯಾಗ ಕಣ್ಣ ನದರ ಮುಗಿಲಿನಲಿ
ತ್ರಿಪುರ ಕನಸುಗಳ ತೋರ್ಯಾನ |
ಮಾತಿನ ಏಣಿಯ ಗಟ್ಟಿಮುಟ್ಟ ಅಂಟಿಸಿ
ತೋರುದಕೇರೇರಿ ಇಳದಾನ ||

* * *

ಬಾರೊ ಬಾರೊ ನಮ್ಮಯ್ಯಾ ಎದಿ
ಕದಗೋಳ ತೆರೆದೇವ ಕರದೇವ |
ಹಾಲದ ಬಳ್ಳಿ ಹಾದಿಗುಂಟ ಹಬ್ಬಿಸೇವ
ಬಾಡಧಾಂಗ ಬಾ ಸ್ವಾಮಿ ಅಂತೇವ ||

ಹೆಜ್ಜಿಗಿ ಏಳೇಳ ಎಳಿ ದೀಪ ಹಚ್ಚೇವ
ಕಳೀಧಂಗ ಬಾ ಸ್ವಾಮಿ ಮೆಲ್ಲಕರೆ |
ನಂಬುಗೆಯೆಂಬೋ ರತ್ನಗಂಬಳಿ
ಗದ್ದಿಗಿ ಮಾಡೇವ ಕುಂಡ್ರಾಕರೆ ||

ಕುಡಗೋಲ ನಿಂದೋ ಕುಂಬಳ ನಿಂದೋ
ಹೆಂಗರೆ ಹೆರಚಂತಂದೇವ|
ಘೋಡಗೇರಿ ಹುಡುಗರು ಡೊಳ್ಳಿನ ಮ್ಯಾಳದವರು
ಬಾಗಿ ನಮೋ ನಮೋ ಅಂದೇವ ||

೧೯೭೪

# ಹೇಳತೇನ ಕೇಳ

೧

ಮೊದಲೀಗೆ ಅಲ್ಲಮ ಪ್ರಭುವಿಗೆ ಶರಣಾರ್ಥಿ
ಕೂಡಿ ಕುಂತ ಜನಕೆಲ್ಲ ನಮ್ಮ ನಮನಾ.
ಕಲಿಯುಗದೊಳಗಿನ ಕತೆಯ ವಿಸ್ತಾರವ
ತಿಳಿಸಿ ಹೇಳುವೆ ಕೇಳಬೇಕ್ರಿ ಜನಾ.

ಕೂಡಿಕುಂತ ದೈವಕ್ಕ ಕೈಮುಗದ ಹೇಳತೇನು,
ಮರೆಯೀರಿ ಮುಂದಬಂದ್ರ ಚೂರ ಕಸರಾ.
ಯಪ್ಪಾ ಸ್ವಾಮಿ ಗುರುದೇವ ತಪ್ಪಮರತ ಒಪ್ಪಕೊಡ
ನೆಪ್ಪಿನ್ಯಾಗ ಇಡುವಾಂಗ ಸರ್ವರಾ.

ಏ ಎವ್ವಾ ಸರಸೋತಿ 'ತಾಳಕ್ಕ ನಲಿವಾಕಿ'
ನಾಲೀಗಕ್ಷರ ಕಲಿಸ ಐದರಾ.
ಹಿರಿಯರ ಪಿರತೀಗಿ ಸರಿದೊರೆ ಸಮನಿಲ್ಲ;
ಕೇಳಾವರ ನ್ಯಾಲಿರಲಿ ನಿರಂತರಾ.

ಜಂಬೂದ್ವೀಪದ ಪೈಕಿ ಮ್ಯಾಗಡೆ ಮಲೆನಾಡ
ಸೂಸಿ ಹರಿದಾಳಲ್ಲಿ ಘಟಪ್ರಭಾ.
ಆ ದಂಡಿ ಆರ್ಯಾಣ, ಈ ದಂಡಿ ಶಿವಪೂರ,
ಕೆಂಪು ಹಂಚಿನ ಊರು ಬಲು ಶೋಭಾ.

ಗೌಡ ಶ್ರೀ ಭರತೇಶ, ಗೌಡ್ತಿ ಲಕ್ಷ್ಮೀ ದೇವಿ,
ಎಳಕ ವಯಾದೊಬ್ಬ ಗಂಡ ಮಗಾ.
ತೂಗು ತೊಟ್ಟಿಲವಾಗಿ, ಬೆಳ್ಳಿ ಬಟ್ಟಲವಾಗಿ,
ಕೈಕಾಲ ಮುರದ ಬಿದ್ದ ಲಕ್ಷ್ಮೀ ಜಾಗ.

ಕತಿ | ಹೇಳತೀವ್ರಿ ಮುಂದಿಂದಾ
ಇರು | ಗುರುವೆ ನಾಲಗೆಯ ಹಿಂದಾ
ಆಗ | ದಿರಲಿ ಒಂದು ಸಹ ಕುಂದಾ
ನಾ | ನಿಮ್ಮ ಕರುಣದ ಕಂದಾ

ಗೌಡ್ತಿ ಬ್ಯಾನೀ ತಿಂದ ಗಂಡ ಹಡದ, ಗಂಗಾಳ ಹೊಡದ,
ಐದೇರೆಲ್ಲ ಜೋ ಅಂದ ಕತಿ ನಿವಳಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೧

ಊರಾಗೂರ ಅದರಾಗ ಇನ್ಯಾವೂರ
ಚಂದ, ಶಿವಪೂರ ರಾಜೇಕ.
ಮಳೆಯಾದ ಎರಿಯೊಳಗ ಬೆಳೆದ ಕರಿಕಿ ಹಾಂಗ
ಊರು ಹಬ್ಯಽದ ಮೂಡಪಡುವಣಕ

ಹಸರುಶಾಂತಿ ಪಸರೀಸಿ ಮೈಚಾಚಿ ಮಲಗ್ಯಽದ
ನದಿಯ ಎದೆಯಾಗುನು ಅದೆ ನೆರಳಾ.
ಹೊಳೆಯ ದಂಡೆಯ ಆಲ ನೂರಾರು ಪಾರಂಬಿ,
ಬುಡದಾಗ ಕರ್ರೆವ್ವ ಊರ್ಯಾಳ್ತಳಾ.

ನೂರು ಬಂಡಿಗೆ ಇಂಬುಗೊಡುವಷ್ಟು ನೆರಳಿತ್ತು;
ಯಾರ್ಯಾರು ಸುಳಿದಿಲ್ಲ ಬಡ್ಡೀತನಕ.

ಉದಯಾಸ್ತಗಳ ನಡಕ, ಹೊಳಿಗುಡ್ಡ ಎಡಬಲಕ,
ಜಗದಾಗಿಂಥಾದಿಲ್ಲ ಬಹುತೇಕ.

ಊರ ದನಗಳನೆಲ್ಲ ಇಲ್ಲಿ ಹಾರಸತಾರ,
ಕೂಡತಾರ ಹಿರಿಯರು ಯಾವಾಗರೆ.
ಈ ನೆರಳ ತಂಪನ್ನ ಅದಕಿದಕು ಬಳಸುವರು
ಎಳಿಗೂಸು ನಗುವುದು ಅದರಾಗರೆ.

ನದಿಯ ತೆರೆಗಳ ಮ್ಯಾಲೆ ಬಿಸಲಿಂದ ಬರಬರದ
ಈ ತಂಪ ಕಳಿಸ್ಯಾರು ದಿಗ್ದೇಶಕ.
ಪೂಜಾರಿಗಳ ಬಿಟ್ಟು ಇನ್ಯಾರು ನೋಡಿಲ್ಲ
ಊರ ಕರ್‍ರೆವ್ವನ ಕರೀಮಕಾ.

ಮಾ | ಡಿದನು ಹರಿಯಿಲ್ಲಿ ಬೋಧಾ
ಬೆಳೆ | ದಾರು ಇಲ್ಲೆ ವೇದಾ
ಈ | ನೆರಳ ತಂಪಿನ ಹಸಾದಾ
ಕೊನೆ | ಕೊನೆಗೆ ಬುದ್ಧ ಏನಾದ?

ಈ ತಂಪು ಸತ್ಯದಲಿ ಈ ಬದುಕ ಬಣ್ಣಿಸಿದ
ಚೆನ್ನಽರ ನೆನಿ ತಮ್ಮ ದಿನಾದಿನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂಡ್ರ ಹೀಂಗ ತೆರೆದ ಮನಾ ||ಗೀ||

೨

ಹುಡಿಗೇರ ಹುಸಿ ಸಿಟ್ಟಿನ್ಹಾಂಗ ಓಣಿಯ ತಿರುವು,
ತೆರೆದ ಕಣ್ಣುಗಳಣ್ಣ ಮನಿಬಾಗಿಲಾ;
ಮಣ್ಣಾಗ ಆಡೂವ ಚೆಣ್ಣರ ಗಿಣಿ ಹಿಂಡ
ಯಾವತ್ತು ಊರಾಗ ಕಲಲಲಲಾ.

ಸೂರ್ಯಾ ಕರಗಿ ನೀರಾಗಿ ನಾದಿ ಒಳಗ ಹರಿದಾನು
ಎಳಿ ಹರೆ ಬಂದಾಗ ಹುಡಗೋರಿಗಿ
ಜೋಡೆಮ್ಮಿ ಹಾಲಕುಡದ ಸೆಡ್ಡುಹೊಡೆದ, ಕುಸ್ತಿಹಿಡಿದ,
ಗರಡಿಮನೆ ಕಾಣಸ್ತೈತಿ ಓಣಿ ತುದಿಗಿ.

ಚಿಗುರು ಮೊಲೆಗಳ ಕಂಡು ಚಿಗುರು ಚಿಗುರಲೆ ಇಲ್ಲ
ಒಮ್ಮಿಗಿಲೆ ಎಲೆಯಾಯ್ತು ಗಿಡಗಿಡಕ;
ಚೈತ್ರ ಫಾಲ್ಗುಣಗಳನು ಎದೆಯಾಗ ಹಿಡಿದಾರು
ಹೂವಾಗಿ ಸೋರೀತ ತಟತಟಕ.

ಯಾರೇನ ಆಡಿದರು ಗಾದಿ ನಾಣ್ಣುಡಿಯಾಗಿ
ವಾಡಿಕೆಯಾದಾವು ನಾಡೊಳಗ
ಕರಿಯಜ್ಜ ಹಾಕೀದ ಗೆರಿಗೋಳ ಯಾರ್ಯಾರು
ದಾಟಿಲ್ಲ ಹದಿನಾಕು ಹಳ್ಳಿಯೊಳಗ.

ಬೇಡಿ ಬಂದಾನ ಗೌಡ ಪಡದ ಬಂದಾರ ಜನಾ
ಕೊರತಿಲ್ಲ ಹೊಗಳುವ ಕವಿಜನಕ.
ಮನಿಮನಿಗಿ ನಡುವಡ್ಡ ಗೆರೆಯಿಲ್ಲ, ಎರಡಿಲ್ಲ,
ಕಾಣಿ ತಕ್ಕಡಿಗಿಲ್ಲ, ಸಮತೂಕ.

ಮರ | ತಾನ ಕೊಟ್ಟ ಭಗವಾನಾ
ಕಡಿ | ಮಿಲ್ಲ ಅಬರಿಗೇನೇನಾ
ಹೊಲ | ದಾಗ ಕಾಳ ಭರಪೂರಾ
ದರ | ದಾಗ ಇಲ್ಲ ಹೇರಪೇರಾ

ಪಾರಂಬಿ ಕರ್ರೆವ್ವ ಗುಡ್ಡದ ನಿರವಾಣಿ
ಈ ಊರ ಕಡೆಗಿರಲಿ ನಿಮ್ಮ ಧ್ಯಾನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರೆದ ಮನಾ ||ಗೀ||

೪

ಇನ್ನ ಮುಂದಿನ ಕತಿ ಹ್ಯಾಂಗಾರೆ ಹೇಳಲಿ?
ಎದಿಯಾಗ ಆಗತದ ಕಸವೀಸಿ.
ಯೋಳಪಟ್ಟಿ ಹುಲಿಬಂದು ಯೋಳೆಂಟು ದನತಿಂದು
ಸುದ್ದಿ ಕೇಳಿ ಗೌಡ ಹೊಂಟಾ ಬ್ಯಾಟೀಗಿ.

ಗೌಡ್ತಿ ಲಕ್ಷ್ಮೀ ದೇವಿ ಸೆರಗೊಡ್ಡಿ ಬೇಡತಾಳ
ಹೋಗಬ್ಯಾಡ್ರಿ ಬಿದ್ದೀತೆನಗ ಕೆಟ್ಟಕನಸಾ, –
ಖುಶೀಲಿಂದ ಸರಸವಾಡಿ, ಗೌಡಾ ನೀವು ಮಲಗಿದಾಗ,
ಮಂಚದ ಕಾಲ ಮುರಧಾಂಗಾತ ಧಸಕ್ಕನ.

ಅಬಲೆ ಅಂಜಿದಳೆಂದು ದಾದುಮಾಡದೆ ಹೊಂಟ;
ವಾದ್ಯದ ದನಿ ತುಂಬಿ ದಿಕ್ಕದಿಶಾ,
ಬೆಲ್ಲದ ಬೇಂಟೀಗಿ ಇರುವಿ ಮುತ್ತಿದ ಹಾಂಗ
ಜನಸೇರಿ ಹರಸ್ಯಾರು ತುಂಬಿ ಮನಸಾ.

ಇದೆ ಕೊನೆಯ ಸಲದಂತೆ ಮಳಮಳ ಮಕನೋಡಿ
ಎದಿಯಾಗ ಹಿಡಿದಾರು ಆ ರೂಪವ.

ಹತ್ತು ದೇವರಿಗೆಲ್ಲ ಹರಕೀಯ ಹೊತ್ತಾರು,
ತೇರ ಎಳಸತೇವ ಕಾಯೆ ಕರ್ರೆವ್ವ.

ಬ್ಯಾಟಿಗಾರರ ಕುದರಿ ರಥದ ಧೂಳಿನೊಳಗ
ಮುಳುಗಿ ಹೋದಾನ ಗೌಡ ಮುಂದಮುಂದಕ.
ಹುಬ್ಬಗೈಯ ಹಚ್ಚಿಕೊಂಡು ಏರನೇರಿ ನೋಡತಾರ
ಬೆಂಕಿ ಹೊತ್ತಿಸಿಧಾಂಗ ಬಿಸಲ ಬಿದ್ದೀತ.

ಹೊಳಿ | ಯಾಗ ತೆರಿಗಳಿರಲಿಲ್ಲ
ಆ | ಲsದ ಗಿಡಕ ತಂಪಿಲ್ಲ
ಓ | ಣ್ಯಾಗ ಎಲ್ಲ ಬಣ ಬಣಾ
ಸುಡ | ಗಾಡಧಾಂಗ ರಣರಣಾ

ಗುಡ್ಡದ ಕಡ್ಡಕ ಬೆಂಕಿ ಹಚ್ಚಿದರ್ಯಾರೊ,
ಹೊಗಿ ತುಂಬಿ ನೋಡ್ಯಾರು ಎಲ್ಲಾ ಜನಾ,
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೫

ಪಡುವಣದ ಮೂಗಿನ ಮುತ್ತುದುರಿ ಸಂಜ್ಯಾಯ್ತು,
ಹಿಂದಿರುಗಿ ಬಂದಾವು ದನಾ ಕರಾ.
ಈದೊಡನೆ ಕರುಸತ್ತು ಎಮ್ಮಿ ಕೆರೆಯೊಳಗೊದರಿ
ಕ್ಷಿತಿಜ ಬಾನಿನ ತುಂಬ ಹಸಿನೆತ್ತರಾ.

ಕಂಡ ಹಗಲಿನ ಸತ್ಯ ಸಂಶಯವಾದೀತು
ಸಂಧಿಪ್ರಕಾಶದ ಸಂಧಿನೊಳಗ.
ಕನಸಿನ ಕರಿಯ ಚೋರನ ಹಾಂಗ ಗೌಡ ಬಂದ,
ಊದಿ ಬಾರಿಸಿ ಏನೇನಿಲ್ಲ ಬ್ಯಾಟಿ ಬಳಗ.

ಸಿಡ್ಲ ಹೊಡೆದು ಹಾಳಬಿದ್ದ ಬಾವೀತನಕ ತಾನs ಹೋಗಿ
ಏನೋ ಚೆಲ್ಲಿ ತಿರುಗಿ ಬಂದಾ ನಗನಗತ.
ತೊಟ್ಟಿಲೊಳಗಿನ ಕೂಸು ಚಿಟ್ಟಂತ ಚೀರೀತ –
ಊದು ಹಾಕಿದ ಹೊಗಿ ಓಣಿ ತುಂಬೀತ.

ಊದ ಹಾಕಿ ಐದೇರು ಆರತಿಯ ಬೆಳಗ್ಯಾರು
ಖುಶಿ ಬಾಳ ಗೌಡ್ತೀಗಿ ಒಳಗೊಳಗ.
ಮಗ ಬಂದು ಕೇಳ್ಯಾನು: ಹುಲಿ ಎಲ್ಲಿ? – ಸತ್ತೀತ?
ಇನ್ನ ಮ್ಯಾಲ ಚಿಂತಿಲ್ಲ ಏಟು ನಮಗ.

ಪರಭಾರೆ ಹಾಸ್ಗಿ ಒಳಗ ಮುಟ್ಟಿಬಿಟ್ಟು ಹೇಳ್ತಾನ:
ನಿನ್ನ ತಾಳಿ ಗಟ್ಟಿಮುಟ್ಟ ಉಳಿದು ಬಂದೇನ.
ಹುಲಿಯಲ್ಲ ಅಂವ ದೊಡ್ಡ ರಾಕ್ಷೇಸ, ಮಾಯಾವಿ,
ಕೊಂದ ಹಾಳ ಬಾಂವಿ ತಳಾ ಕಾಣ್ಸಿ ಬಂದೇನ

ಹಣಕಿ | ಹಾಕಬಾರ್ದು ಯಾರ್ಯಾರಾ
ಹಾ | ಕಿದರ ಗೋರಿ ತಯ್ಯಾರಾ
ಊ | ರಾಗ ಹೊಡಸ ಡಂಗೂರಾ
ಯಾ | ವತ್ತು ಇರಲಿ ಖಬರಾ

ನಿನ್ನ ಮಗ ಹಣಿಕಿ ಹಾಕಿದಂದು ನಾನು ಹಲಿಗಿ ಹೊಡಿಸಿ
ಹಾದೀ ಹಿಡಿದೀನಂತ ಗಟ್ಟಿ ತಿಳಕೊ ರಮಣಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೬

ಬೀಸು ಜ್ವಾಳ ಆದಾವು, ನವ ಹಾಡು ಮುಗಿದಾವು.
ಹಕ್ಕಿ ಚಿಲಿಪಿಲಿ ಚೀರಿ ಬೆಳಗಾಯಿತ.
ಝುಮು ಝುಮು ನಸಕಿನ್ಯಾಗ ಆಲsದ ಬಡ್ಯಾಗ
ಕರಿಯಜ್ಜ ಕೂತಾನ ಕೆಮ್ಮಿ ಕೋತ.

ಗೊಂಡೀಯ ಲಂಗೋಟಿ, ಕಸಿಯಂಗಿ ತೊಟ್ಟಾನ,
ಮುದಿಸೂಳಿ ಬಂದಾಳ ಹೊಳಿನೀರಿಗಿ.
ಕೈಬೀಸಿ ಕುಂಡಿ ಹೊಳಿಸಿ ಕಣ್ಣ ಹಾರ್ಸಿ ನಡದಾಳ
ನೆನನೆನದ ನಗತಾನ ತಿರುತಿರುಗಿ.

ಇಳಿದ ಪಾರಂಬೀಗಿ ಗೊಡ್ಡೆಮ್ಮಿ ಮೈತಿಕ್ಕಿ
ಸೆಗಣಿ ಹಾಕಿದ ನಾತ ಗೊಮ್ಮೆಂದಿತ.
ದಿನಧಾಂಗ ರಾಮಗೊಂಡ ಚರಿಗಿ ಹಿಡಿದ ಬಂದಾನು,
ಕೂಡ್ರತಾನು ಮುದುಕನ ಹಂತ್ಯಾಕ.

ನಾತಕ್ಕ ಹೇಸಿ ತುಸು ಮುಂದ ಕೂಡ್ರೂನಂದ;
ಅಜ್ಜ ಕೀಳಲೆ ಇಲ್ಲ ತನ್ನ ತಳ.
ಎಣ್ಣೆ ಇಲ್ಲದೆ ಉರಿದ ತನ್ನ ದಿನಮಾನಗಳ
ಹೇಳತಾನ, ಕ್ವಾರಿಮೀಸಿ ಕೊರಕೊರದ.

ಅಷ್ಟರಾಗ ಸಮಗಾರ ಬಸ್ಸಿ ಕೂಸನು ತಂದು
ಕರ್ರೆವ್ವಗಿದಿರಾಗಿ ಇಟ್ಟಾಳಡ್ಡ:

ರಾತ್ರಿ ಚಿಟ್ಟನೆ ಚೀರಿ ಮಲಿಮರತ ಮಲಗೇತಿ
ತಾಯಿ ನಿನ್ನ ವರ್ಮಬ್ಯಾಡ ನಮಗೂಡ.

ಕೇಳಿ | ಬಂತ ಹೊಡೆದ ಡಂಗೂರಾ
ಹಾಳ | ಬಾಂಢ್ಗಿ ಹೋಗಬ್ಯಾಡ್ರಿ ಯಾರಾ
ಹಣಿಕಿ | ಹಾಕಬಾರ್ದು ಯಾರ್ಯಾರಾ
ಯಾ | ವತ್ತು ಇರಲಿ ಖಬರಾ.

ತಪ್ಪಿಗಿಪ್ಪಿ ಹಣಿಕಿದರ ದಂಡಾಶಿಕ್ಷಾ ಮಾಡತಾರು
ನೆಪ್ಪಿನ್ಯಾಗ ಇಟಗೊಳ್ರಿ ಎಲ್ಲಾ ಜನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರೆದ ಮನಾ ||ಗೀ||

೭

ಹೋರೀಯ ಕೊಂಬಿನ್ಹಾಂಗ ಮಕ ಮೀಸಿ ಮೂಡ್ಯಾವ
ಎಳಕ ಯೌವನ ಬಂದು ರಾಮಗೊಂಡಗ.
ಹಿಂಡ ದನಗೋಳೋಳಗ ದ್ಯಾಮವ್ವ ಕ್ವಾಣಧಾಂಗ
ಅವನಿದ್ದ ವಾರಿಗಿಯವರೊಳಗ.

ಅವನ ಕೆನ್ನಿಯ ಒಳಗ ಸೂರ್ಯದೇವ ಹೊಳದಾನು
ಕಣ್ಣಾಗ ಹುಣ್ಣೀಮಿ ಚಂದ್ರಮರಾ
ಒಗರೇನು, ಹೊಗರೇನು, ಹರೆಯ ಗರುವಿಕಿಯೇನು
ಬಾಯಿ ಬಾಯಿ ಬಿಡತಾವ ಹುಡಿಗೇರಾ.

ಹಸನಾದ ಬಾಲೇರು ಹಂತೇಲಿ ಬಂದ ಬಂದ,
ಒಡಪ ಹೇಳಿ ಓಡತಾರ ನಗನಗತ,
ಸರಿಸರಿ ಸಖಿಯರು ಮಾರೀಗಿ ನೀರಗೊಜ್ಜಿ
ಕಾದತಾರ ಪರಿ ಪರಿ ಅಡ್ಡನಿಂತಾ.

ತುಂಬೀದ ಹೊಳೆಯಾಗ ತೆರಿ ಹೊಡದ ಈ ಸಾಂವಾ,
ಗುಡಿಯ ಮುಂದಿನ ಗುಂಡ ಹೊತ್ತ ಒಗದಾಂವಾ.
ಮನ್ನಿ ಶಿವರಾತ್ರ್ಯಾಗ ಹತ್ತು ಮಂದಿಯ ಕೂಡ
ಕುಸ್ತಿ ಹಿಡಿದ, ಎರಿ ಮಣ್ಣ ಮುಕ್ಕಿಸಿದಾಂವಾ.

ಊರೀನ ಹುಡುಗೋರು ದೊಡ್ಡಾಟ ಬಿಟಕೊಟ್ಟು
ನಾಟಕವಾಡ್ಯಾರು ಪಟ್ಟಪೈಲೇಕ,
ಹುಳಮೇದ ಬನಧಾಂಗ ಒಣಗ್ಯಾವ ಕುಣಿದಾವ;
ನೋಡಲಿಲ್ಲ ರಾಮಗೊಂಡ, ಕರಿಮುದಕ.

ಅವನ | ಮ್ಯಾಲೆ ಮುದುಕ ಭಾಳ ಪ್ರೀತಿ
ಕ | ಣ್ಣಾಗ ತುಂಬಿ ಅಕ್ಕರತಿ
ನೀ | ನಮ್ಮ ಊರ ಸರದಾರಾ
ನನ | ಗಿಲ್ಲ ಎದರ ದರಕಾರಾ

ಊರ ಹೊರಗ ಹೋಗುವಾಗ ತಿರುಗಿ ನೋಡ್ಯಾನ ಗೌಡ
ಹಾವಿನ ಹುತ್ತಿನ್ಹಾಂಗ ಮೂಗ ಮುರದಾನ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತೆಯೊಂದ
ನನಮುಂದ ಕುಂಡ್ರ ಹಿಂಗ ತೆರದ ಮನಾ ||ಗೀ|

೮

ಚಂದ್ರsನ ಮುರಿದ್ಯಾರೊ ನೀರಿಗೆ ಎಸೆದಾರು
ಚೂರು ಚೂರು ಚೀರ್ಯಾವ ನದಿಯೊಳಗ
ಬಸರಿಯರ ಕನಸಿನಲಿ ತಲೆಬುರುಡೆ ಹಲ್ಕಿರಿದು
ಹೂ ಹೆರುವ ಗಿಡಬಳ್ಳಿ ಒಣಗ್ಯಾವ

ಹೋರಿಗಳು ಎತ್ತಾಗಿ ನೊಗ ಎತ್ತಲಾರದೆ
ಗದ್ದೆಯಲಿ ಬಿದ್ದಾವ ಬಾಲ ಮುದುರಿ
ಪಾರಂಬಿಕರ್ರೆವ್ವನ ಕೈಭಿನ್ನವಾದಾವು
ಮಾಯವಾಗದ ಗಾಯವಾದಾವರಿ.

ಹೊತ್ತೇರಿ ಎದ್ದ ಗೌಡ ಬಡ್ಡೀಗಿ ಹಣ ಕೊಟ್ಟು
ಕೂಡ್ಸ್ಯಾನ ಚಾವಡ್ಯಾಗ ದೊಡ್ಡಸಭಾ.
ಹಸಮಕ್ಕ ಸಲುವಾಗಿ ಗರಡೀಯ ಮನಿ ಕೆಡಿವಿ
ಹೊಸ ಸಾಲಿ ಕಟ್ಟಿಸೋಣ, – ಬಲೆ ಶೋಭಾ

ಊರಂತ ಊರೆಲ್ಲಹೌದಂತ ತಲಿದೂಗಿ
ಬಾಯಿತುಂಬ ಹೊಗಳ್ಯಾರ ಗೌಡಪ್ಪನ
ಮನೆಗೊಂದು ಹೆಣ್ಣಾಳು ಗಂಡಾಳು ಬಂದಾವು,
ಲಗುಮಾಡ ಮುಗೀಬೇಕ, ಮೂರsದಿನಾ.

ಶುಕ್ರಾರ ಸುರವಾಗಿ ಆಯ್ತಾರ ತಯ್ಯಾರ
ಬಿರದೀತ ಸ್ವಾಮಾರ ಬಡ್ಯಾಗನ.
ಆಲsದ ಬೇರ ಬಂದು ತೊಡರ್ಯಾವು ತೊಡಕ್ಯಾವು;
ಮೊದಲದನ ಎಲ್ಲಾರು ಕಡಿಯೋಣ.

ಚಾಲಿ | ವರದ ಮುದುಕ ಬೇಡಿಕೊಂಡಾ
ಕೈ | ಮುಗಿದು ಅಡ್ಡ ನಿಂತಕೊಂಡಾ

ಸರಿ | ಸರಿಸಿ ಮರವ ಕಡಿದಾರ
ಸಾ | ಲೀಯ ಪೂಜಿ ಮಾಡ್ಯಾರ

ತಾಸೇ ಹಲಗಿ ಡೊಳ್ಳ ಗದ್ದೀಲೆ ಬಾರಿಸ್ಯಾರ;
ಕರಿಯಜ್ಜ ತೀರಿಕೊಂಡ ಅದಽದಿನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೬

ಬಾಂದದ ಮ್ಯಾಗಿನ ಕೆಂದ ಗೋವಿನ ಕರಾ
ಬಿಸಲೀಗಿ ಬಾಯಿ ಬಾಯಿ ಬಿಡತಽದರಿ.
ಬಿಸಲ ಹಳದಿಯ ನಡುವ ಕರಿ ನೆರಳ ಚೆಲ್ಲೂವ
ಹಸರ ನಂಬಿಗೆಯನ್ನು ಕಡದಾರರಿ.

ರಾಮ ಮುದುಕನ ನೆನೆದು ಹಾಡಿ ಅಳಬೇಕಂದ್ರ
ಹನಿ ನೀರ ಬರಲಿಲ್ಲ ಕಣ್ಣೊಳಗ.
ಹಡೆದವನ ಬಯ್ಯುದಕ ಬಾಯಽರೆ ತಗದಾನ
ಅಕ್ಷರ ಹಿಡೀಲಿಲ್ಲ ಶಬ್ದದೊಳಗ.

ಕೋಲೇ ಬಾಗಿಲ ಮುಚ್ಚಿ ಕುಂತ ಧ್ಯಾನಿಸತಾನ,
ಉಸುರರೆ ಹಾಕತಾನ ಮೈಲುದ್ದ.
ಕತ್ತಲೆಯ ಗವಿಯೊಳಗ ಕೇಂದ್ರ ತಪ್ಪಿದ ಭ್ರಾಂತಿ
ಉರಳ್ಯಾವ ಇಳಕಲಕಡ್ಡಬಿದ್ದಾ.

ಅದನಿದನು ಬ್ಯಾರೇ ಮಾಡಿ ವರ್ಣಿಸುವ ವಿವರಿಸುವ
ಬೆಳಕಿಲ್ಲ, ಬಲ್ಲಿರೇನ ನೀವ್ಯಾರರೇ?
ದೀವೀಗಿ ತರಲಾಕ ದೇವರ ಮನಿ ಹೊಕ್ಕ,
ಮನದಾಗ ಖುಶಿಯಾಗಿ ಕುಂತಾನರಿ.

ಅವರಪ್ಪ ಬಂದವನು ‘ಭಕ್ತಿ ನಾಟಕ ಸಾಕು’
ಹಿಂಗಂದು ಚೆಂಡೀಯ ಚಿವುಟ್ಯಾನರಿ
ನಾಚಿ ಕೋಲೆಗೆ ಬಂದು ನೋಡತಾನು, – ಕರಿಯಜ್ಜ
ಮೀಸ್ಯಾಗ ಮುಸಿಮುಸಿ ನಗತಾನರಿ.

ಚಿ | ಟ್ಟಂತ ಚೀರಿ ಬಿದ್ದಾನು
ಬೇ | ಖಬರ ಆಗಿ ಅಂದಾನು
ಪಾ | ರಂಬಿ ಅಂತ ಕೂಗ್ಯಾನು
ಹಡೆ | ದವನ ಬಳಿಗೆ ಕರದಾನು

ಕರ್ರೆವ್ವನಾಣಿ ನೀನಲ್ಲ – ಇನ್ನೇನೇನೊ
ಬಡಬಡಿಸಿ, ಹೊಸ್ತಿಲಕ ತಲಿ ಹೊಡೆದಾನ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂಡ್ರು ಹೀಂಗ ತೆರದ ಮನಾ ||ಗೀ||

೧೦

ಕರಿಯ ಅಜ್ಜನ ಭೂತ ರಾಮಗೊಂಡನ ಹಿಡಿದ
ಸುದ್ದಿ ಹಬ್ಬಿತು ಊರ ಕಡೀತನಕ;
ಹೊರಕಡಿಗೆ ಹೋದ ಹೆಣ್ಣಿಗೆ ತಿಳಿದು ಹೊಳಿಮ್ಯಾಗ
ಬರ ಬರದ ಕಳಿಸ್ಯಾಳು ದಿಗ್ದೇಶಕ.

ಬಾಗೀಲ ಹಾಕ್ಯಾನು, ಅಗಳೀಯ ಜಡಿದಾನು,
ಕಳಕೊಂಡು ಹುಡಿಕ್ಯಾನು ಒಳಹೊರಗ.
ಉಗುರು ತಾಕಿದ ಹೇನಿನಂತೆ ಅಡಗುವ ಹೆಣ್ಣು,
ಮರ ಮರಾ ಮರಿಗ್ಯಾವ ಮನದೊಳಗ.

ಏಸೋ ಅಮಾಸೆಗಳ ಪುರಮಾಸೆ ಸಾಕ್ಯಾನ
ಸುರದಾನ ಅಳದಾನ ನಿಟ್ಟುಸಿರ
ಮುಗಿಲ ನೀಲಿಯ ಕೆಳಗ ಟೊಂಗಿ ತೂಗ್ಯಾಡ್ಯಾವ
ಎಲಿ ಉದುರಿ ಅದರ್ಯಾವ ತೆರಿನೀರ.

ಈ ಊರಿಗೆರವಾಗಿ ಬ್ಯಾರೆ ಕಡೆ ಹೋಗುದಕ –
ಕಾಲಕಿತ್ತ ಆದಾನ ತಯ್ಯಾರಾ
ಹಡದಪ್ಪ ಬ್ಯಾಡಂತ ಅನಲಿಲ್ಲ, ಹಡದವ್ವ
ಹಾಕಿದ್ದ ಗೆರಿದಾಟಿ ನಡೀಲಾರ.

ಕಣ್ಣಾಗ ಸೊನ್ನೀಯನಿಂಬುಗೊಂಡಾನಣ್ಣ
ಹಳಿ ನಿಮಿಷ ಹಾಸ್ಯಾನ ಮಲಗ್ಯಾನರಿ
ಬೂದಿ ಬೆಳದಿಂಗಳಲಿ ಹುದುಗಿ ಹೊಳೆದವು ಕೆಂಡ
ಮೈ ಸುಟ್ಟು ಛಟ್ಟನೆ ಎದ್ದಾನರಿ.

ಮೈ | ನಡುಕ ಹುಟ್ಟಿ ಎದ್ದಾನ
ದಿ | ಕ್ಕೀಗ ಕೈಯ ಮುಗದಾನ
ಹಡ | ದಾಕಿ ಬಳಿಗೆ ಬಂದಾನ
ಹೇ | ಳುದಕ ಬಾಯಿ ತಗದಾನ

ತಾಯಿ ಕುಲು ಕುಲು ನಕ್ಕು ಏನಂತ ಅಂದಾಳ:
ತೃಪ್ತಿ ಮಾಡೊ ಬಸರಿನ ಬಯಕಿಯನಾ

ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರೆದ ಮನಾ ||ಗೀ||

೧೧

ಅವಳ ಬಸುರಿನ ಸುದ್ದಿ ನಾ ಕೇಳಿ ನೀ ಕೇಳಿ
ಕೇಳಿ ಊರಂತೂರ ನಕ್ಕಾರರಿ,
ಹಸರ ಕುಪ್ಪಸ ತೊಟ್ಟು ಬಿಸಲೀಗೆ ತಲಿಬಿಟ್ಟು
ಹೊಳೆಸಾಲ ದನಧಾಂಗ ನಿಂತಾಳರಿ.

ಕೆನ್ನೆ ಮಿರಿ ಮಿರಿ ಮಿಂಚಿ ಬಣ್ಣಗಳು ಉರಿದಾವು,
ಕಣ್ಣಾಗ ತೋರ್ಯಾವು ಎಳಿ ಚಿಗರ.
ಭೈರವಿಯ ವಂಕ ತೆರಿಗಳ ಹಾಂಗ ಅಂಗಾಂಗ
ಮುರಿದೆದ್ದು ಧರಿಸ್ಯಾವು ಹೊಸ ಹೊಗರಾ.

ಚಂದ್ರಕಾಳಿಯ ಸೀರಿ ಚಂದsಕ ನೇಸ್ಯಾಳ
ಸೆರಗಿನ್ಯಾಗ ತಗಸ್ಯಾಳ ಗಿಣಿಹಿಂಡಾ
ಆಲsದ ಎಲಿಗೋಳ ದಂಡಿಕಟ್ಟ ಬಿಗಿಸ್ಯಾಳ
ಹುಡಿಗೇರ ನಾಚ್ಯಾರ ಇದ ಕಂಡಾ.

ಒಂದಂಬು ತಿಂಗಳಿಗೆ ಒಂದೇನ ಬಯಸ್ಯಾಳ
ತುಂಬು ಹುಣ್ಣಿಮಿ ರಾತ್ರಿ ಬೆಳದಿಂಗಳಾ;
ಇಂಬಾದ ಮಂಚದಲಿ ದಿಂಬೀಗೆ ಒರಗ್ಯಾಳು
ಕುಡಿವುದಕ ಕೇಳ್ಯಾಳ ಹುಲಿಹಾಲಾ.

ಮಗ ಬಂದು ಅಂತಾನ: ಬಂಕಿ ಬಂಕೀ ಒಳಗ
ಅಲ್ಲ ಸಲ್ಲದ ಬಂಕಿ ಅಲ್ಲತಗಿ.
ಸಿಡಿಮಿಡಿಗುಟ್ಯಾಳ ಮುಡಿಯನಲ್ಲಾಡ್ಯಾಳ
ಬಿದ್ದಾವ ಎಡವಿದರೆಂಟಮನಿ.

ಬರ | ಲಿಲ್ಲ ಏಟು ಕಕಲಾತಿ
ಮರ | ತಾಳ ರೀತಿ ಮತ್ತ ನಡತಿ
ಮರಿ | ಗ್ಯಾರ ಮಂದಿ ಮರಮರಾ
ಬದ | ಲಾಗಿದಾನ ಗೌಡ ಪೂರಾ

ಕುಂದನಾದಿದಳೆಂದು ಅಂದ ಮಾತಿಗೆ ನೊಂದು
ಹೋಗುದಕ ತಯ್ಯಾರಿ ಮಾಡ್ಯಾನ
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೧೧

ಸಿಂಗಾರ ಉಟ್ಟಾನ, ಸಿಂಗಾರ ತೊಟ್ಟಾನ,
ಸಿಂಗಾರ ಆದಾನ ತಲೀತನಕ.
ಜರ ತಗದ ರುಂಬಾಲ ದುಂಡಾಗಿ ಸುತ್ತ್ಯಾನ,
ಶಮನಾಸ ಬಿಟ್ಟಾನ ಹಿಂಬಡಕ.

ಅಂಗ್ಯಾ ಉಡುಗೋ ಹೊತ್ತು, ಗಂಗಾಳ ಬೆಳಗೋ ಹೊತ್ತು
ಬಂದಾನ ಜೋಡೆತ್ತ ಹೊಡಕೊಂಡ.
ಬಂಡೀಗಾಲಿಯ ಅಚ್ಚು ಸರಿದಿತ್ತು, ಹೆದರದ
ಹೊಂಟಾನ ಕುಡುಗೋಲ ಹಿಡಕೊಂಡಾ.

ಪಟ್ಟೇದ ಕುದರೀಯ ಏರ್ಯಾನ ರಾಮಗೊಂಡ
ಬೆನ್ನ ಚಪ್ಪರಿಸ್ಯಾನ ಮೆಲ್ಲsಕ
ಹಾದಿ ಹರಸುವರಿಲ್ಲ, ನೋಡಿ ಮರುಗುವರಿಲ್ಲ,
ಹಿಂದ ಮುಂದ ಯಾರಿಲ್ಲ ಎಡಬಲಕ.

ಅಗಸೀ ಹೊರಗ ಬಂದ, ಏನಂದ ರಾಮಗೊಂಡ?
ಪಾರಂಬಿ ಕರ್ರೆವ್ವ ನಮ ಶರಣಾ;
ತಿರುಗಿ ಬಂದರ ನಾವು ಆರ ಸೊಲಗಿಯ ಹುಗ್ಗಿ
ಹಾಕ್ಸೇವ, ಕೊಟ್ಟೇವ ಸೀರೀಖಣಾ.

ಹಳ್ಳದ ಹಂತೇಲಿ ಬಂದೇನ ಅಂದಾನ
ಗುಡ್ಡದ ನಿರವಾಣಿ ನಮ ಶರಣಾ;
ತಿರುಗಿ ಬಂದರ ನಾವು ದೀಡ ನಮಸ್ಕಾರ
ಹಾಕೇವ, ಕೊಟ್ಟೇವ ಬೆಳ್ಳೀಕಣ್ಣಾ.

ಬಂ|ದಾವ ಇದಿರು ಬರಿ ಬುಟ್ಟಿ
ಹೊಡೆ|ದಾನ ಕುದರಿಯನು ಮೆಟ್ಟಿ
ಹಿರಿ|ಯರ ಪುಣ್ಯ ನಮ ಮ್ಯಾಲಾ
ಸುರಿ|ತಿರಲಿ ಹರಿಯೆ ಅನುಗಾಲಾ

ಪಾರಂಬಿ ಕರ್ರೆವ್ವ, ಗುಡ್ಡದ ನಿರವಾಣಿ
ಈ ಊರ ಕಡೆಗಿರಲಿ ನಿಮದ್ಯಾನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೧೨

ಕಾ ಅಂಬೋ ಕಾಗಿಲ್ಲ, ಗೂ ಅಂಬೋ ಗೂಗಿಲ್ಲ,
ಯಾರ್ಯಾರ ಸುಳಿವಿಲ್ಲ ಅಡಿವ್ಯಾಗ.

ಏರ್ಯಾನ, ಇಳದಾನ ಇದ್ದ ಬಿದ್ದ ತಗ್ಗಾದಿನ್ನಿ;
ಹುಲ್ಲ ಹೊಡೆದ ಹುಡಕ್ಯಾನ ಗವಿಯೊಳಗ.

ಹೊತ್ತು ನೆತ್ತಿಗೆ ಏರಿ, ಹುಳಹುಪಡಿ ಹುರಪಳಿಸಿ
ತಳುವ್ಯಾನ ಗವಿಯೊಳಗ ತುಸು ಹೊತ್ತ.
ಚುಚ್ಚಿದರ ಬೆರಳು ಸಿಗಬೀಳುವಂಥಾ ತಂಪು,
ಮೈಗೆ ಮನಸಿಗೆ ಅಹ ಎಂಥಾ ಸುಖ!

ಮನ್ನಿ ರಾತ್ರೀ ಶ್ಯಾರಿ ಕದ್ದಮುಚ್ಚಿ ಬಂದವಳು;
ಆಗಿತ್ತು ಇದ ನಮನಿ ಹ್ವಾದಮ್ಯಾಲ.
ಬೆಳಕೀನ ಬಿಳಿಸುಟ್ಟು ಬೂದಿಬಣ್ಣಕ್ಕೆ ತಿರುಗಿ,
ನೆರಳೆಲ್ಲ ಕರಕಾಗಿ ಗಾಲಮೇಲಾ

ದೂರ ತಾರೆಯ ಹಾಂಗ ಮಿಣಕ್ಯಾವೆರಡು ಕೆಂಡ,
ಬರಬರತ ಹೊಳೆದಾವು ಬೆಂಕೀ ಕೊಳ್ಳಿ.
ಮನ ಸುಟ್ಟು ಛಟ್ಟನೆ ಎದ್ದಾನ; ಬಿಗಿಯಾಗಿ
ಹಿಡಿದಾನ ಕುಡುಗೋಲ ಬೆಳ್ಳೀಹಿಡಿ.

ಯೋಳ ಪಟ್ಟಿಯ ಹೆಣ್ಣಹುಲಿ ಬಂದು ನಿಂತೀತ;
ಧೈರ್ಯದಿಂದ ಕೇಳ್ಯಾನ: ಕೊಡ ಹಾಲ.
ಹುಲಿಯು ತಾಲಿಯ ತುಂಬ ಮಲಿಹಾಲ ಕೊಟ್ಟೀತ,
ನೆನ ನೆನದ ನಗತಽದ ಕಲಲಲಲಾ!

ಕೊ | ಟ್ಟೇರಿ ಹಾಲ ಭರಪೂರಾ
ಮಾ | ಡಿದಿರಿ ನಮಗ ಉಪಕಾರಾ
ನಗ | ತೇರಿ ಯಾಕ ಕಲಕಲಾ
ಆ | ತೇನು ನಿಮಗ ಖುಶಿ ಬಾಳಾ

ಹೊಟ್ಟಿತುಂಬಾ ಉಂಡು ಹನ್ನೆರಡು ವರುಷಾತು,
ಈಗ ಬಂದಿ ಬಾಳಾ ಕೂಡಿ ಬಂತ ದಿನಾ!
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೧೪

ಕಣ್ಣಾಗ ಕತ್ತಲಿ ಕೂಡಿ ಬಿದ್ಧಾಂಗಾಗಿ
ಕೋಲ್ಮಿಂಚ ಕುಡಗೋಲ ಝಳಪಿಸಿದಾ.
ಬೆನ್ನಾಗ ಸಿಗಬಿದ್ದು ಹುಲಿ ಒದರಿ, ದವಡಾಸಿ,
ಹಿಂದ ಹಿಂದ ಅಟ್ಯಾನ ಬೆನ್ನಿಗಿ ಬಿದ್ದಾ.

ಹೊಕ್ಕಲ್ಲಿ ಹೊಕ್ಕಾನ, ಜಿಗಿದಲ್ಲಿ ಜಿಗಿದಾನ,
ಹಾರಿದಲ್ಲಿಗೆ ಹಾರಿ ಗಾಳೀಹಾಂಗ,
ಮೆಳಿಯೊಳಗೆ ಸರಬುರುಕ, ಹೊದರೊಳಗ ಸರಬುರುಕ,
ಜೋಡ ಸರಬುರುಕಣ್ಣ ಹುಲ್ಲಾಗ.

ಮಾಡsದ ಚಿಮಣಿ ಮ್ಯಾಗ ಕಾಡೀಗಿ ಕಡಕೊಂಡ
ಬಿದ್ಧಾಂಗ ಹೊತ್ತಾರಿ ಕತ್ತಲಿಸಿತ.
ಹುಲಿ ಗಪ್ಪಗಾರಾಗಿ, ಕುದರಿ ಮಟಾಮಾಯಾಗಿ;
ತಾಲಿಹಿಡದ ಹೊಂಟಾನ ಊರತ್ತ.

ಮುಂದಮುಂದ ಬಂದಾನ ಸರಿರಾತ್ರಿ, ಉಲುವಿಲ್ಲ;
ಇದಿರೀಗಿ ಕಂಡಾನ ವಿಚಿತ್ತರಾ.
ಜಕ್ಕಜಲದೇರ ಜೋಡಿ ಜತ್ತಾಗಿ ಹೊಂಟೀತ
ಮೆತ್ತsಗ ಆಡಗ್ಯಾನ ಬಯಂಕರಾ.

ನೀರಹನಿ ಹೆಣೆಧಾಂಗ ಮೈತುಂಬ ಆಭರಣ;
ಹನಿಗೊಂದು ತಾರಕ್ಕಿ ಚಂದ್ರಮರಾ.
ಮಿಂಚ ಕರಗಿಸಿ ಎರಕ ಹೊಯ್ದಾಂಗ ಮೈಹೊಗರ,
ಬಾಯೊಳಗ ಕಂಡಾವು ಮುತ್ತಿನ ಸರಾ.

ನಡ | ದಾವ ಭಾಳ ಗಂಭೀರಾ
ಬಿಡಿ | ಬಿಡಿಸಿ ಒಡಪನಾಡ್ಯಾವ
ಬಿ | ದ್ದಾವ  ಹುಬ್ಬ ಅಗ್ಗಂಟಾ
ಮಾ | ತೊಂದ ಚಿಂತಿ ಯೋಳಂಟ

ಗಣದ ಮಾತ್ರೆಯ ಹಾಂಗ ದಿನಗೋಳ ಎಣಿಸ್ಯಾವ:
ಹನ್ನೆರಡು ವರುಷಾತ ಈ ಹೊತ್ತನs.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರೆದ ಮನಾ ||ಗೀ||

೧೫

ಏನ ಕಾಣಲು ಬಂದು ಇನ್ನೇನ ಕಂಡೇವ!
ಹೆಣ್ಣೀಗಿ ದಿನಮಾನ ಅನುವಾದಾವ.
ಹಬ್ಬೀದ ಹಸರಾಗ ಹೆಬ್ಬುಲಿ ಒದರ್ಯಾವು,
ತಬ್ಬಲಿ ಮಗ ಅತ್ತ ಕರೆದಾವ.

ಅಮ್ಮಾ ಎಂದವನನ್ನು ಗುಮ್ಮ್ಯಾಡಿ ಕೊಂದಾಳು,
ಹುಲಿಯೇರಿ ಎದ್ದಾಳು ಗುದ್ಯಾಡಲು.

ಹುಯ್ಯಾಲ ಬೊಬ್ಬೆಯೊ ಜಗವೆಲ್ಲ ತುಂಬಿದರು
ಒದರ್ಯಾಟ ಕೇಳಿಲ್ಲ ಯಾರ್ಯಾರಿಗು.

ಮರಿಯಾನಿ ಕರತಂದ ಕ್ವಾರಿಹಲ್ಲ ಕೊರೆಕೊರೆದ
ಬಲಗೈಗೆ ಯೋಳ ಬಳಿ ಏನ ನಿವಳಾ!
ಹಚ್ಚೇ ಬಟ್ಟಚುಚ್ಚುದಕ ಹಸರ ಸಾಕಾಗಿಲ್ಲ,
ಚಿಗರೀಗಿ ಮಿದುಕೈಯ ಚಾಚ್ಯಾಳ.

ಬಣ್ಣದ ಅರಮನಿ ನಡುಗಂಬ ಬಿದ್ದೀತ;
ಬಣ್ಣಗಳ ಸುಟ್ವಾಳ ಕೆನ್ನೀ ಒಳಗ.
ಯಾತ ತಿರುಗಿಸುವಂತ ಭೂತ ದೇವರನೆಲ್ಲ
ಹುಗದಾಳ ಹಾಳಾದ ಬಾಂವ್ಯಾಗ.

ಇಷ್ಟಕೇಳಿ ರಾಮಗೊಂಡ ಹೊಟ್ಟೀ ಒಳಗ ಕಷ್ಟವಾಗಿ
ಬಂದ ನಿಂತ ಕಟ್ಯಾನ ಮುಕ್ಕಟ್ಟ.
ಹೆಜ್ಜಿಯಿಡ ಒಡಪಾ ಒಡದ ಬಿಡಾಂವಲ್ಲ ದೇವೀ ನಿಮಗ
ಚಾಲಿವರದ ಕಾಡಿ ಬೇಡಿ ಎಲ್ಲಾ ಕಟ್ಟಾ.

ಹೌ | ಹಾರಿ ನೋಡ್ಯಾವ ಇಂವsನಾ
ಹಿಡ | ದಾವ ಗುರುತ ಖೂನ
ಇಂವ | ಇಂವs ಹೌದು ಅಂದಾವ
ದಿಕ್ಕು | ತಪ್ಪಿ ಓಡಿ ಹೋದಾವ

ನಿಮ್ಮ ಕೈ ಬಳಿಯಾಣಿ ರಾಮಗೊಂಡ ಕೇಳತೇನು
ಒಡದ ಹೋಗರಿ ನಿಮ್ಮ ಒಗಟಾನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೧೬

ಬೆಳದಿಂಗಳೊಗಿನ ತಿಳಿನೀರ ಝರಿ ಹಾಂಗ
ಭರಭರ ಹರಿದಾವ ಮುಂದ ಮುಂದಕ.
ಗುಡ್ಡsದ ಮ್ಯಾಗೀನ ಘಡಿ ಉರುಳಿ ಬಿದ್ಹಾಂಗ
ಕೂಗ ಹೊಡದ ಓಡ್ಯಾನ ಹಿಂದ ಹಿಂದಕ.

ವಂಕ ದಾರೀ ಒಳಗ ಮಿಂಚ್ಯಾವ ಮರಕಂಟಿ,
ಕಲ್ಲಾಗ ಹಾರಗಾಲ ಬಿದ್ದಾವ.
ಕೆಟ್ಟದೇವರ ಆಣಿ ಹೆಜ್ಜೇಯನಿಟ್ಟೇರಿ
ಕೊಟ್ಟಹೋಗರಿ ನಮಗುತ್ತರವ.

ಸೊಂಡಿ ಸುಟ್ಟ ಬೆಕ್ಕಿನ್ಹಾಂಗ ಖಬರತಪ್ಪಿ ಓಡ್ಯಾವ
ಬಂದಾವ ಹಾಳಬಾಂವಿ ಸಮೀಪಕ.
ಅಮವಾಸಿ ದಿನ ಉಲ್ಕಿ ಉರುಳು ಬಿದ್ಧಾಂಗಾಗಿ
ಜಿಗದಾವ ಜೋಡಾಗಿ ಬಾಂವಿಯೊಳೀಕ.

ಮ್ಯಾಲಹಾರಿದ ಮೀನ ನೀರಿನೊಳು ಜರಿಧಾಂಗ
ಸೇರಿ ಒಂದಾದಾವ ನೀರ ನೀರಿಗಿ.
ತೆರೆಸುತ್ತಿ ಆಗಾಗ ತಾರಕ್ಕಿನಗೆ ನಕ್ಕು
ದಂಡೀಯನಡರ್ಯಾವು ತಿರುತಿರುಗಿ.

ಹಸುಗೂಸು ಎಳಿಎಳೀ ಕಳಲು ಅತ್ಹಂಗಾತು
ತೆರಿಗೋಳ ಸಪ್ಪಳ ದಂಡ್ಯಾಗ.
ಕರಿಯ ಭ್ರಾಂತಿಯ ಮುದ್ದಿ, ಕಣ್ಣುಮೂಗುಗಳಿಲ್ಲ
ಮೆತ್ಯಾವ ಮೂಲ್ಯಾಗ ಮೂಲ್ಯಾಗ.

ತಿದಿ | ತೇಗಿ ಬಂದಾನ ರಾಮಾ
ಮೂ | ಡ್ಯಾನ ಆಗ ಚಂದ್ರಾಮ
ಒಳ | ಒಳಗ ಹಣಿಕಿ ಹಾಕ್ಯಾನ
ಪ್ರತಿ | ಬಿಂಬ ಕಂಡ ಸರದಾನ

ಅಡ್ಡಮಳಿ ಗುಡ್ಡಮೋಡ ತಿಕ್ಕಿ ಗರ್ಜಿಸಿಧಾಂಗ
ಹಾಳಬಾಂವಿ ನಕ್ಕೀತ ಒಂದಸವನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೧೭

ಕಿವಿಯೊಳಗ ಘಜ್ಜಂತ ಗೂಟ ಜಡಿಧಾಂಗಾಗಿ
ಎಲ್ಲಿ ತೆಂಕಣ ಮೂಡ ಬಡಗಣಾ?
ತಾನೆಲ್ಲಿ ತನ್ನ ದೇಹಕ್ಕ ನೆರಳಿದೆ ಇಲ್ಲೊ?
ಕಾಲು ಊರಿವೆ ಹೌದು ನೆಲದಾಗನ.

ತನ್ನ ಒಳಗಿನ ರಾಮ ಚಪ್ಪಾಳಿ ಹೊಡಧಾಂಗ,
ಖೊಕ್ಕಂತ ನಕ್ಕಾಂಗ ಬಿಳೀನಗಿ.
ನಕ್ಕ ರಾಮನನೊಮ್ಮೆ ತೆಕ್ಕೆ ಹಾಯಲೆ ಓಡಿ?
ನಡುವಿನಂತರ ನೂರ ಹರದಾರಿ!

ತೆರಿಯೊಳಗ ಪ್ರತಿಬಿಂಬ ಕೊರಕೊರದ ಹಂಚೀತ
ತೆರಿನಿಂತ ಹೊರತಿಲ್ಲ ಆಕಾರವು.

ತೆರೆಯ ತಣ್ಣನೆ ಸರ್ಪ ಮೈಸುತ್ತಿ ಬಿಗಿಧಾಂಗ
ಮುದುಡಿ, ಹಿಗ್ಗೀ, ನಡುಗಿ ಮಿಡಿಕ್ಯಾಟವು.

ನೋಡ ನೋಡ್ತ ಇದರೀಗೆ ದೊಡ್ಡ ಧಾಂಡಿಗ ಮೂರ್ತಿ
ನಡೆದು ಬಂತೋ ಥೇಟು ಹಿಮಾಲಯಾ.
ಚಿಕ್ಕ ಮಕ್ಕಳ ಚೊಕ್ಕ ನಗಿಯ ಬೆಳದಿಂಗಳಿಗಿ
ಕೈಕಾಲು ಒಡದಾವೋ, ಏನಭಾಯಾ!

ಆಡೇನೆಂದರ ನಾಲಿಗಿಲ್ಲ, ಓಡುದಕಿಲ್ಲ,
ಮೈಮುಳ್ಳ ಎದ್ದಾವ ಕೊರಿ ಬೇಲಿ.
ದಳದಳ ಸುರಿದಾವ ಬೆವರಹೊಳಿ; ನಿಂತಾನ
ಚಿತ್ರದ ಒಳಗಿನ ಗೊಂಬೀ ನಮನಿ.

ಸಾರಿ | ಸಾರಿ ಬಂತ ಹಂತ್ಯಾಕ
ಎ | ತ್ತೀತ ಹಸ್ತ ಹರಸುದಕ
ಖೂನ | ಗುರ್ತ ಹತ್ತಿ ಕಾಣುದಕ
ಬಿ | ದ್ದಾನ ಮತ್ತ ಹಣಗಲಕ

ಮರೆತಿ ಏನೋ ಮಗನ ಹರಕೀ ಹೊತ್ತ ಹಡೆದವನ
ನಶೀಬಿಲ್ದ ಹಾಳ ಬಾಂವಿ ಹಿಡಿದವನಾ?
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೧೮

ಬಾರಾ ವರ್ಷದ ಮಾತು ನೀ ಗೇಣ ಚೋಟಿದ್ದಿ,
ಯೋಳ ಪಟ್ಟಿ ಹುಲಿ ಬಂತ ಅಡವೀಗೆ.
ಹಿಂದ ಮುಂದ ಹಳಬರು ಎಡಬಲಕ ಬ್ಯಾಟಿಗಾರು
ಗೌಡ್ತಿ ಮಾತ ಮೀರಿ ಹೊಂಟೆ ಬ್ಯಾಟೀಗಿ.

ಹುಲಿಯಲ್ಲ ಅಂವ ದೊಡ್ಡ ರಾಕ್ಷೇಸ, ಮಾಯಾವಿ
ಮಳ್ಳ ಮಾಡಿ ಮಂದಿ ಒಯ್ದಾ ಸಂದರ್ಯಾಗ.
ಮಟಾ ಮಟಾ ಮದ್ದೀನ ಮೈ ಮ್ಯಾಲ ಬಿದ್ದಾನ
ಕೊಂದಾನ ಸಂಶಯ ಬರಧಾಂಗ.

ನನ್ನ ಚರ್ಮ ಸುಲಿದು ಮೈಮ್ಯಾಲ ಹೊದ್ದಾನ
ಕಡಿದು ಬುಟ್ಟೀ ತುಂಬಿ ಹೊತ್ತ ತಂದಾನ.
ಹಾಳಬಾಂವಿಯ ಹಾಳಿನೊಳಗೆ ಹೂಳ್ಯಾನಯ್ಯೊ
ಪಾರಮಾಡೊ ನಿನ್ನ ಕೆಟ್ಟ ತಂದೀಯನಾ.

ಭಾವಿಸಿದ್ದುದನೆಲ್ಲ ಬಿಚ್ಚಿಟ್ಟ ಶಬ್ದಧಾಂಗ
ಹೇಳತಿಷ್ಟು ಬಾಯಿಬಿಟ್ಟು ಆಕಾಶಕ.
ದಂಗಬಡದ ರಾಮಗೊಂಡ ದಿಕ್ಕ ಮರತ ನಿಂತಾನ
ಸುರದ ಸೋಸಿ ನೆನೆದಾನ ತಳತನಕ.

ಕತ್ತಲ ನಿರಾಕಾರ ಸರಿದು ಚಂದಿರ ಏರಿ
ಸಾಕಾರವಾಯಿತೊ ಸರ್ವಜಗಾ.
ನಿನ್ನ ಪಡೆವುದಕೆ ನಾವಿನ್ನೇನ ಮಾಡೋಣ
ಹೇಳೆಂದ ಕಾಲೂರಿ, ಕೈಮುಗದ.

ದಿಕ್ಕಿ | ನ್ಯಾಗ ದಿಕ್ಕ ಮೂಡಽಣಾ
ಅಲ್ಲಿ | ಒಬ್ಬ ಸಾಧು ಶರಣಾ
ಕೊಡ | ತಾನ ಮಂತ್ರಿಸಿದ ನೀರಾ
ಸಿಂ | ಪಡಿಸ ರಾಕ್ಷಸಗ ಪೂರಾ

ಜ್ವಾಕಿ ಬಾಳಾ ಅಲ್ಲಿ ತಿರಗತಾವ ರಾಕ್ಷೇಸ
ನೇಮಿಸಿದ ಹಿಂಡ ಹಿಂಡ ಸೈತಾನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂಡ್ರ ಹೀಂಗ ತೆರದ ಮನಾ ||ಗೀ||

೧೯

ಇನ್ನೊಮ್ಮೆ ಅಲ್ಲಮ ಪ್ರಭುವಿಗೆ ಶರಣಾರ್ಥಿ
ಕೂಡಿ ಕುಂತ ಜನಕೆಲ್ಲ ನಮ್ಮ ನಮನಾ.
ಕಲಿಯುಗದೊಳಗಿನ ಕಥೆಯ ವಿಸ್ತಾರವ
ತಿಳಿಸಿ ಹೇಳುವೆ ಕೇಳಬೇಕ್ರಿ ಜನಾ.

ಕೂಡಿ ಕುಂತ ದೈಂವಕ್ಕ ಕೈಮುಗದ ಹೇಳತೇನು,
ಹೊಟ್ಯಾಗ್ಹಾಕ್ರಿ ಉಳಿದಿದ್ರ ಚೂರ ಕಸರಾ.
ಯಪ್ಪಾ ಸ್ವಾಮಿ ಗುರುದೇವ ತಪ್ಪ ಮರತ ಒಪ್ಪಕೊಡ
ನೆಪ್ಪಿನ್ಯಾಗ ಇಡುವಾಂಗ ಸರ್ವರಾ.

ನೇಸರಿಗು ಬಿಸಲೀಗು ಬಿಗಿದಿಟ್ಟ ಒಗತಾನ;
ಅಂತೆ ಅನುಭವ ಮಾತು ಎರಡಕ್ಕುನು.
ಅನುಭವದ ಐಸಿರಿಯ ಆಗುಮಾಡುವ ಮಾತಿ
ಗೋತು ನಮೋನಮೋ ಎನ್ನುವೆನು.

ಘೋಡಗೇರಿ ಬಸ್ಸಪ್ಪ ಅವರ ಮಗ ಚಂದ್ರಪ್ಪ
ಪದಾ ಮಾಡಿದಾರ ಭಾಳ ನಿವಳಾ

ಗೌದ್ತಿ ಬ್ಯಾನೀ ತಿಂದ ಗಂಡ ಹಡದ ಗಂಗಾಳ ಹೊಡೆದ
ಐದೇರೆಲ್ಲ ಜೋ ಅಂದ ಕತಿ ನಿವಳಾ

ಹಿರಿಯರ ಪಿರತೀಗಿ ಸರಿದೊರೆ ಸಮನಿಲ್ಲ
ಕೇಳಾವರ ಮ್ಯಾಲಿರಲಿ ನಿರಂತರಾ.
ಏ ಎವ್ವಾ ಸರಸೋತಿ ತಾಳಕ್ಕ ನಲಿವಾಕಿ
ನಾಲೀಗಕ್ಷರ ಕಲಿಸ ಇನ್ನೆರಡಾ

ಕತಿ | ಹೇಳತೇವ್ರಿ ಮುಂದಿಂದಾ
ಆಗ | ಧಾಂಗ ಒಂದು ಸಹ ಕಂದಾ
ಇರು | ಗುರುವೆ ನಾಲಗೆಯ ಹಿಂದಾ
ನಾ | ನಿಮ್ಮ ಕರುಣದ ಕಂದಾ

ಬೆನ್ನಾಗ ನೆತ್ತರ ಕಣ್ಣಾಗ ಕಣ್ಣೀರ
ಗೌಡಪ್ಪ ಕರಸತಾನ ಗೌದ್ತಿಯನಾ.
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂದ್ರ ಹೀಂಗ ತೆರದ ಮನಾ ||ಗೀ||

೧೦

ಕಾಳ ತುಂಬಿದ ಜ್ವಾಳ ಗಾಳಿಗಲುಗಿದ ಹಾಂಗ
ತೂಗಿ ತೂಗಿ ಬಂದಾಳ ಮೈವಜನಾ.
ಚಳ್ಳಪಳ್ಳ ಗೆಜ್ಜೀನಾದ ಹೆಜ್ಜೀಯ ಚೆಲ್ಲತಾಳ
ನಾಜೂಕ ನಗಿ ನಕ್ಕ, ಏನ ಹಗಣಾ!

ಹಾಸ್ಯಾಗ ಗುಜುಗುಜು ಆಡತಾರ, ಹಾಕತಾರ
ಲೆಕ್ಕ ಗುಣಿಸಿ ಭಾಗಾಕಾರ ಪರಭಾರೆ:
ಯೋಳಕ್ಕ ಗೋಳಾತ ಎಂಟಕ್ಕ ಗಂಟಬಿತ್ತ
ಸರಿ ಬೆಸ, ಹಿಡಿದಹ್ವಾರೆ ಗಂಡಽ ಖರೆ.

ಯೋಳ ಗಾದಿಯ ಮ್ಯಾಲ ಹೋಳಾಗಿ ಮಲಗ್ಯಾಳ
ಅಂತಾಳ; ಕರತರ್ರೆ ರಾಮಗೊಂಡಗ.
ಕೈಯಾಗ ಹಾಲತಾಲಿ ಕಣ್ಣತಾಮ್ರದ ತಾಲಿ
ಕಂಡಾನ ಖರಖರೆ ಯಮನ್ಹಾಂಗ!

ಒಲಿಯ ಮ್ಯಾಲಿನ ಅಕ್ಕಿ ಉಕ್ಕುಕ್ಕಿ ಕುದ್ಧಾಂಗ
ಸಿಟ್ಟಾಗಿ ಕಿಸಿದಾಳ ಕಿಸಮೂಗನಾ.
ಬಲಾ ಇಲ್ಲದವನ ನೆಲಾ ಎದ್ದು ಬಡಿಧಾಂಗ
ಕರದಾಳ, ಮುಂದಕ ಬಾ ಚೆಲುವಾ.

ತುಸು ಆಡಿ ಹಲ್ಲsರೆ ಕಿಸಕಿಸದ ನಕ್ಕಾಳ,
ಜೊಲ್ಲಬಿತ್ತು ಗದಿಮ್ಯಾಲ ನಾಕ ಹನಿ.
ಏನೋ ಆಡಲು ಹೋಗಿ ಇನ್ನಷ್ಟ ನಕ್ಕಾಳ,
ಥೂ ಅಂತ ಉಗುಳ್ಯಾನ, ಅಲ್ಲತಗೀ.

ಬರ | ಲಿಲ್ಲ ಏಟು ಕಕಲಾತಿ
ಮರ | ತಾಳ ರೀತಿ ಮತ್ತು ನಡತಿ
ದಾ | ಸೇರು ಮರುಗಿ ಮರಮರಾ |
ಬದ | ಲಾಗಿದಾನ ಗೌಡ ಪೂರಾ

ಎರಡಂಬು ತಿಂಗಳಿಗೆ ಎರಡೇನು ಬಯಸ್ಯಾಳ?
ತಿನ್ನಲು ಕೊಡು ನಿನ್ನ ಹೃದಯವನಾ!
ಹೇಳತೇನ ಕೇಳ ಗೆಳೆಯಾ ನಿನಮುಂದ ಕತಿಯೊಂದ
ನನಮುಂದ ಕುಂಡ್ರ ಹೀಂಗ ತೆರದ ಮನಾ ||ಗೀ||

೨೧

ಮೂರಂಬು ತಿಂಗಳಿಗೆ ಮೂಗೀನ ಸಿರಕೋದ
ಮೂಸ್ಯಾಳ ಕಿಸಮೂಗ ತುಂಬೂಮಟಾ!
ನಾಕಂಬು ತಿಂಗಳಿಗೆ ಅಂಡ್ಯಾಳ ಆಡುದಕ
ಕಣ್ಣಗುಡ್ಡಿ ಬಯಸ್ಯಾಳ ಕೊಡ ಲಗುಟಾ

ಐದಂಬು ತಿಂಗಳಿಗೆ ಐದೇನ ಬಯಸ್ಯಾಳ?
ಕಿವಿಯ ಗಂಟೆಯ ಕೊಡು ನಾದಕ್ಕ.
ಆರಂಬು ತಿಂಗಳಿಗೆ ನಾಲೀಗಿ ಹೆರಚೇರಿ
ಸಾಂಬಾರ ಮಾಡಿರಿ ನಂಜೂದಕ!

ಏಳಂಬು ತಿಂಗಳಿಗೆ ಸಾಕಂಬುತನ ಬೇಕ
ತೊಗಲ ಹೆಚ್ಚಿರಿ ಪಚಡಿ ಮಾಡುದಕ!
ಎಂಟಂಬು ತಿಂಗಳಿಗೆ ಹೊಟ್ಟೀಯ ಹೊಸದಾಳ
ಗಾಂಧಾರಿ ಹಡೆದಾಳ ಗಂಡ ಮಗಾ!

ಐದೇರು ಬಂದಾರು ಗುಗ್ಗರಿ ತಿಂದಾರು
ಕುರ್ರಂತ ಕೂಗ್ಯಾರು ಹೆಸರಿಟ್ಟಾ!
ಊರ ತುಂಬ ಸಕ್ರಿ ಹಂಚಿ ಸಿಹಿ ಬಾಯಿ ಮಾಡ್ಯಾರ
ನಿಮ್ಮ ಮನಸೂ ಹೀಂಗs ಇರಲಿ ಸಿಹಿಕಟ್ಟಾ.

ಝಳ ತಾಗಿ ಬಾಡೀದ ಚಿವುಟಿದ್ದ ಚಿಗುರೆಲಿ
ರಾಮಗೊಂಡ ನಿಂತಾನ ಬಾಡಿ ಮುಖಾ

ಬಂದs ಬರ್ತsದಂತ ಆ ದಿನ ಕಾದಾನ
ಕಣ್ಣಿರದs ಕಂಡಾನ ಸೂರ್ಯದಿಕ್ಕಾ.

ದಿಕ್ಕಿ | ನ್ಯಾಗ ದಿಕ್ಕ ಮೂಡsಣಾ
ಅಲ್ಲಿ | ಒಬ್ಬ ಸಾಧು ಶರಣಾ
ಕೊಡ | ತಾನ ಮಂತ್ರಿಸಿದ ನೀರಾ
ಸಿಂ | ಪಡಿಸ ರಾಕ್ಷಸಗ ಪೂರಾ

ಹೇಳಾಕ ಹೆಸರ ಚಂದ ಕೇಳಾಕ ಕತಿ ಚಂದ
ನಿಮಗಾಗ್ಲಿ ಹತ್ತೆಂಟು ಮರಿಮಕ್ಕಳಾ
ಅವರಲ್ಲಿ ನಾವಿಲ್ಲಿ ಮಗಹುಟ್ಟಿ ಶುಭವಾಗಿ
ಅಂತಿಂತು ಬೆಳಗಾಯ್ತು ನಮ ಶರಣಾ.

೧೯೬೩

# ಶ್ರಾವಣದ ಒಂದು ದಿನ

ಮುಗಿಲ ಮುತ್ತುಗಳನ್ನು ಕರಿಮೋಡ ಚಾಣಿಸಿತು,
ನೆಲದ ಚಿಪ್ಪೊಳು ಬಿತ್ತು, ಅಲ್ಲಿ ಇಲ್ಲಿ.
ಧರೆಯೆದ್ದು ಹಸಿರ ಕಣ್ಣರಳಿಸಿತು ಬಯಲಿನಲಿ,
ಬೀಳು, ಅ ಈ ಕಂಟಿ, ಟೊಂಗೆಗಳಲಿ

ಮನೆಯ ಕೈತೋಟದಲಿ ನಂದನವು ತೊದಲಿತೋ
ಮಳೆಬಿಲ್ಲು ಅರಳಿದವು ಬೇಲಿಯಲ್ಲಿ.
ಹಸಿರೆಲೆಯ ತುದಿಗೆ ಹೂಬಣ್ಣ , ಬತ್ತಿಯ ಬೆಳಕು;
ಜೋಕಾಲಿ ಜೀಕಿತೋ ದೀಪಾವಳಿ

ತೊಯ್ದು ಗದ್ದೆಯ ತೆಲೆಯ ಬಾಚಿ ಹೆಣೆಯಿತು ಗಾಳಿ,
ಕುಣಿದಾಡಿತೋ ಬಿದಿರ ಮೈಯ ತುಂಬಿ.
ಹರೆಬಂತು ಝುರಿತೊರೆಗು, ಹರಿಗೂ, ಚರಂಡಿಗೂ,
ಬಿಳಿಮೋಡ ನಕ್ಕವೋ ಬುರುಗು ತುಂಬಿ.

ಗುಳ್ಳವ್ವ ಉರುಳಾಡಿ ಊರೊಳಗೆ ಬಂದಳೋ:
ಹುಲುಸು ಕನವರಿಸಿಹುದು ಹೊಲವ ತೂಗಿ.
ಒರಟು ಮೂಗನು ತಿರುವಿ ರಂಗೋಲಿ ಬಿಡಿಸಿತೋ
ಚದುರಂಗಿ ಅಲ್ಲಲ್ಲಿ ಕೆಂಪು ಹಳದಿ.

ಬದಿಯ ಗುಡಿಸಿಲಿನಲ್ಲಿ ಅಳುವ ತೊಟ್ಟಿಲವೇಕೊ
ಚಿಗುರುನಗೆ ನಕ್ಕು ಚಿಲಿಪಿಲಿಸಿತಂದ.
ಮೊಲೆಯೂಡಿ ಅಂಗಾಲ ತೊಳೆದ ತಾಯೆದೆಯೊಲವು
ಜೋಗುಳವ ಹಾಡಿತ್ತು: ಕುಡಿಯೊ ಕಂದ!

೧೯೬೦

# ೧೯೯೪ ರಿಂದ ಈಚಿನ ಕವಿತೆಗಳು ಮತ್ತು ‘ಮುಗುಳು’ ಸಂಗ್ರಹದ ಕೆಲವು ಪದ್ಯಗಳು (೧೯೫೮): ಬೆಂಕಿ

ಚಕಮಕಿ ಬೆಂಕಿ ಶಾಶ್ವತವಲ್ಲವಯ್ಯಾ.
ಅದ ಹಿಡಿದು ಹತ್ತಿಯಲಿಟ್ಟು ತೊಟ್ಟಿಲ ತೂಗಿ
ಸಾಕಬೇಕು ಮಗುವಿನಂತ.
ಗಾಳಿಯ ಹಾಕಿ ಮಾಡಬೇಕು ಪಾಲನೆ ಪೋಷಣೆ.
ವರುಷದ ಬೆಳವಣಿಗೆಯ ಒಂದೇ ನಿಮಿಷದಲ್ಲಿ ಬೆಳೆದು
ಎದುರೆದುರೆ ಎದ್ದು ನಿಲ್ಲುತ್ತದೆ ನೋಡು –
ಅಗೊ ಅಗೊ ಈಗ ನೀನೆ ಮಗು ಅವನಿಗೆ!
ಮಗು ನಿನ್ನ ಹಡೆದವನನ್ನ ಚೆನ್ನಾಗಿ
ಅವನ ಮೈಕೈ ಸುಡದ ಹಾಗೆ ನೋಡಿಕೋಪ್ಪಾ!

# ೧೯೯೪ ರಿಂದ ಈಚಿನ ಕವಿತೆಗಳು ಮತ್ತು ‘ಮುಗುಳು’ ಸಂಗ್ರಹದ ಕೆಲವು ಪದ್ಯಗಳು (೧೯೫೮): ಚಂದ್ರ

ಸಣ್ಣವನಿದ್ದಾಗ ನನಗೂ ಬೇಕೆನಿಸಿದ್ದ ಚಂದ್ರ
ಅವನು ನನ್ನ ಕಡೆ ನೋಡಿದ್ದೆ ತಡ
ಗಕ್ಕನೆ ಹಿಡಿದು ಕಣ್ಣ ಕನ್ನಡಿಯೊಳಗೆ
ಬಂಧಿಸಿಟ್ಟೆ.

ಕಣ್ಣು ಪಂಜರ
ಅದರಲ್ಲಿ ಚಂದಿರ

ಅವನೊಂದು ಪಕ್ಷಿ
ನಾ ಅದಕೆ ಸಾಕ್ಷಿ.

ಪಟಪಟ ರೆಕ್ಕೆಯ ಬಡಿದು
ಕನ್ನಡಿಯ ಮನೆಯಲ್ಲಿ ಹೆಂಗಿರಲಿ
ರಾಮ ರಾಮಾ ಅಂದ.

ಕೂಗಬೇಡ ಚಿನ್ನಾ
ನೀನೆ ನನ್ನ ಪ್ರಾಣ.
ರೆಕ್ಕೆ ಪುಕ್ಕ ನೊಂದರೆ
ನನ್ನ ಕಣ್ಣಿಗೆ ತೊಂದರೆ.

# ೧೯೯೪ ರಿಂದ ಈಚಿನ ಕವಿತೆಗಳು ಮತ್ತು 'ಮುಗುಳು' ಸಂಗ್ರಹದ ಕೆಲವು ಪದ್ಯಗಳು (೧೯೫೮): ದೇಶಭಕ್ತನ ಗಾಂಧೀಗೀತೆ

ಅಯ್ಯಾ ಗೋಡ್ಸೆ
ಎದ್ದೇಳಯ್ಯಾ, ಬೇಗ ಸಿದ್ಧನಾಗು
ಜನವರಿ ಮೂವತ್ತಲ್ಲವೆ ಇವತ್ತು?

ಕೊಲ್ಲ ಬಂದವರೆದುರು ಚೆಲ್ಲಿ ಮುಗುಳು ನಗುವ
ಮೈಮರೆಸುವ ಗಾಂದೀಟ್ರಿಕ್ಕು ಗೊತ್ತಲ್ಲ ನಿನಗು?
ಗಾಂಧಿಗೂ ಗೊತ್ತಿದೆ ಅವನ ಬೊಚ್ಚುನಗೆ
ಎಲ್ಲ ಪ್ರಶ್ನೆಗಳಿಗೆ ಉತ್ತರವಲ್ಲವೆಂದು.
ಆದರೂ ಒಡೆಯಲಾರದ ಒಗಟು ಗಾಂಧೀನಗು.
ನಮಗೋ ಸಮಯವೆಲ್ಲಿದೆ ಒಗಟು ಒಡೆಯಲು?
ನಾವು ಪೇಟಂಟ್ ಮಾಡಿದ ಗಾಂಧಿಗೂ ಸಂಸ್ಕೃತಿಗೂ
ಬೆಲೆ ಕುಸಿದು ಕಂಪನಿ ದಿವಾಳಿ.
ಅದಕ್ಕೇ ಗಾಂಧೀಜಿಯ ನಗೆ ನಮಗೆ ಹಗೆ.

ನಿನಗೂ ಗೊತ್ತು ಇವತ್ತಲ್ಲ ಜನವರಿ ಮೂವತ್ತು
ಆದರೂ ದಿನಾ ಆಚರಿಸಬೇಕಲ್ಲ
ಗಾಂಧಿಯ ಕೊಂದ ಕಥೆಯ
ಹಾಯ್ ರಾಮಾ ವ್ಯಥೆಯ!

ದಿನಕ್ಕೊಬ್ಬ ಗಾಂಧಿ, ದಿನಕೊಬ್ಬ ಗೋಡ್ಸೆಯ ಹುಡುಕಿ
ಸಿಕ್ಕದಿದ್ದಲ್ಲಿ ನಾನೊ ಇಲ್ಲವೆ ನೀನೊ
ಗೋಡ್ಸೆಗಳಾಗಿ ಗುಂಡು ಹಾರಿಸಬೇಕು.
ಹಾರಿಸಿದರೆ ಧಗಧಗಿಸುವ ದಿಗಂತ…..
ಹೊಗೆಯಾಡುವ ರಸ್ತೆ…...
ದಿನಾ ಸಾಯುವ ಕರ್ಮ ಗಾಂಧಿಗೆ
ಕೊಲ್ಲುವ ಕರ್ಮ ನಮಗೆ – ತಪ್ಪಿದ್ದಲ್ಲ
ದೇಶಕ್ಕಾಗಿ ಇದು ಹೆಚ್ಚಲ್ಲ.

ಆಮೇಲೊಂದು ಶ್ರದ್ಧಾಂಜಲಿ ಒದರುವುದು – ಅದೂ ನಿತ್ಯದ್ದೆ!
“ಸತ್ತು ಹೋದರು ಗಾಂಧಿ
ಆಕಾಶಕ್ಕೆ ಹೊಗೆಯಾಗಿ, ಬೂಮಿಗೆ ಬೂದಿಯಾಗಿ!
ಕಲ್ಯಾಣದ ಬೆಳಕೆಲ್ಲಿ ಹೋಯಿತು ರಾಮ ರಾಮಾ!”
ಈಗ ಜನಗಣ ಹಾಡಿ ಮನೆಗೆ ನಡೆ.

ತಕರಾರು ಬರಬಹುದು ಸ್ವರ್ಗದ ಗಾಂಧೀ ಕಡೆಯಿಂದ
ಇನ್ನೇನಂತೆ ಆ ಮುದಿಯನಿಗೆ?
ಶಾಲೆ ಕಾಲೇಜುಗಳಿಗೆ ರಜ ಹಾಕಿ
ಮಾಡುವುದಿಲ್ಲವೆ ಅವನ ತಿಥಿ ಜಯಂತಿ?
ಅವನ ಹೆಸರಿಟ್ಟಲ್ಲವೆ ಬೀದಿ ಭವನಗಳಿಗೆ
ಬೇಕಾದರೆ ವಿಧಾನಸೌಧವೇ ತನ್ನ ಸಮಾಧಿ ಎಂದುಕೊಳ್ಳಲಿ.
ನಮಗೇನಂತೆ?
ನೇರನುಡಿಯಲ್ಲಿ ನುಡಿಯುವುದುಚಿತ:
“ನೋಡಿ ಗಾಂಧೀಸಾಹೇಬರೇ
ನೀವು ಸತ್ತದ್ದಕ್ಕೆ
ಭೂಗೋಳದ ಕಿರುನಗೆಯೂ ಮಾಸಿಲ್ಲ ಸ್ವಾಮಿ.
ಕ್ರಾಂತಿಯೆಂದದ್ದೆಲ್ಲ ಕಸವಾಗಿ ತಿಪ್ಪೆಯಾಗಿದೆ ದೇಶ!
ಕಾಣದೆ?”

ದೇಶಪ್ರೇಮ ಈಗೀಗ ಭಾರೀ ದುಬಾರಿಯಪ್ಪ

# ೧೯೯೪ ರಿಂದ ಈಚಿನ ಕವಿತೆಗಳು ಮತ್ತು ‘ಮುಗುಳು’ ಸಂಗ್ರಹದ ಕೆಲವು ಪದ್ಯಗಳು (೧೯೫೮): ಕವಿತೆ

ಮೊನ್ನೆ ತಾಯಿಯ ಹೆಸರು ಮರೆತೆ
ನಿನ್ನೆ ತಂದೆಯ ಹೆಸರು ಮರೆತೆ
ಈದಿನ ನನ್ನ ಹೇಸರೇ ಮರೆವಾಗಿ
ಹೀಗೆ ಒಂದೊಂದೇ ಮರೆಯುತ್ತ –
ಇಚೆಂಚು ಇಲ್ಲವಾಗುತ್ತ
ಗಾಳಿಯಾಗುತ್ತ ಬಯಲು ತುಂಬಿದಂತೆನಿಸಿ
ನನ್ನ ಕವಿತೆಗೆ ಕಣ್ಣು ಬಂದು
ನನ್ನ ನೋಡಿದಂತೆನಿಸಿ
ನಾಚಿಕೊಂಡೆ.

# ೧೯೯೪ ರಿಂದ ಈಚಿನ ಕವಿತೆಗಳು ಮತ್ತು ‘ಮುಗುಳು’ ಸಂಗ್ರಹದ ಕೆಲವು ಪದ್ಯಗಳು (೧೯೫೮): ಹಿತ್ತಲ ಗುಲಾಬಿ

ಹಿತ್ತಲ ಗುಲಾಬಿ ಗಿಡ ಒಂಟಿ ಹೂ ಧರಿಸಿತಹ
ಹರಳಿನುಂಗುರ ಬೆರಳಿಗಿಟ್ಟಹಾಗೆ
ನಾವು ತೊಟ್ಟಾಸೆ ಸುಸ್ಪಷ್ಟ ಸುಂದರ ಕನಸು
ಸಾಕಾರಗೊಂಡು ಹೂವಾದಹಾಗೆ!

ಓ! ಎಂಥ ಚೆಲುವಿಕೆಯು! ಬುಡ ಮಣ್ಣು! ಗಿಡ ಮುಳ್ಳು!
ಹಸಿರೆಲೆಯ ಕೆಸರಿನಿಂದೆದ್ದ ಕಮಲ!
ಎಂಥ ವಿಕೃತಿಯ ಗರ್ಭದಿಂದೆಂಥ ಆಕೃತಿಯು
ಕರಿಮೋಡದಿಂದೊಗೆದ ಕಾಮಬಿಲ್ಲ!

ನವುರನವುರಾದ ಶತಸ್ನಿಗ್ಧ ಕೋಮಲ ಮಧುರ
ದಿಟ್ಟಿಗೂನೂ ಬಾಡುವಂಥ ಪಕಳೆ
ಸಂಜೆ ಮುಗಿಲಿನ ಕೆಂದೆರೆಯ ಮೋಡ ರಂಗವನೆ
ಹುಡಿಮಾಡಿ ಎಸೆದಂತೆ ದಳ – ಮೊಗ ಕಳೆ!

ಹುಡಿಯಾ ಹೊಂಗಿರಣದಲಿ ಮಿಂದು ಮಣಿ ಮಿಂಚಿನೊಲು
ನೀರಹನಿಯೊಂದೆ ಗರ್ಭದಲಿ ಮಿನುಗಿ
ನನ್ನದೆಯ ಸೂರೆಪಾನವ ಸೂರೆಗೊಳ್ಳುತ್ತಿದೆ
ಚಿತ್ತ ಚಂಚಲತೆ ಅಸ್ಥಿರತೆಗೆರಗಿ!

ನನ್ನ ಕನಸಿನ ಹಾಗೆ ರೂಪ! ಕಲ್ಪನೆಯ ಸುಕು –
ಮಾರಾಂಗ! ಶಿವಸುಂದರಕೆ ಮುನ್ನುಡಿ!

ಗಿಡದ ಆಕಾಶವಾಣಿಯ ಕೇಂದ್ರದಿಂದ ಮಧು –
ಮಾಸ ಹಾಡಿದ ಕವನ! ಏನು ಇಮೋಡಿ!

ಇದರುದಯದೊಂದೀಗೇ ನನ್ನೆದೆ ಕುಮುದವರಳಿ
ಬೆದೆ ಮರೆತು ಸೌರಭವ ಸೂಸುತಿಹುದು!
ಮರೆತ ಪಯಣಕ್ಕೊಂದು ಹೊಸಹುರುಪು ಉತ್ಸಾಹ
ಹೊಸ ಬೆಳಕ ಹೊಂಗಿರಣ ತೂರುತಿಹುದು!

ವನ – ತೋಟ – ಪರ್ವತವನುಳಿದೆಮ್ಮ ಹಿತ್ತಲಕೆ
ಬಂದನಿವ ಋತುರಾಜ ಅತಿಥಿಯಾಗಿ!
ಒಂದೆರಡು ದಿನವೇಕೆ? ಇದು ಕೂಡ ನಿಮ್ಮ ಮನೆ
ಇರಲಾಗದೇ ಇಲ್ಲೆ ಅಚಲರಾಗಿ!

# ೧೯೯೪ ರಿಂದ ಈಚಿನ ಕವಿತೆಗಳು ಮತ್ತು ‘ಮುಗುಳು’ ಸಂಗ್ರಹದ ಕೆಲವು ಪದ್ಯಗಳು (೧೯೫೮): ಮಧುರಮಿಲನ

ಇದೆ ಈಗ ಮಳೆ ನಿಂತು ಗಳಿಗೆ ಎರಡಾಗಿಲ್ಲ
ಪಡುವಣಕೆ ರವಿ ಮೋಡ ಸರಿಸಿ ಬಂದ
ಎರಕೊಂಡು ಮೈಯಾರ ಬಿಟ್ಟ ನವ ವಧುವಿನೊಲು
ಕುಳಿತ ಇಳೆಯನು ಕಂಡು ಬೆಚ್ಚಿ ಬಿದ್ದ!

ಮರ್ಯಾದೆಗಾಗಿ ನಸು ಹಸಿರುಡೆಯನುಟ್ಟಿಹಳು
ಮೈತುಂಬ ಮಕರಂದ! ಅಹ ಸುಗಂಧ!
ತಣ್ಬೆಲರು ಕಳ್ಳತನದಿಂದೆ ಮೂಸುತಲಿಹುದು
ಕಂಡ ಕೋಗಿಲೆ ಸಾರುತಿರುವುದಂದ!

ಎದಯಕ್ಕರೆಯು ಉಕ್ಕಿ ಬರೆ ಸ್ವರ್ಣ ಬೆಳಕುಗಳ
ಅವಳ ದೇಹದ ಮೇಲೆ ಚೆಲ್ಲಿ ಚೆಲ್ಲಿ
ಕಿರಣಮೃದುಕರದಿಂದೆ ತಾಕಿದನು ಕೆನ್ನೆಗಳ
ಮೈಯ ಕೊಡಹಿದಳಲಾ ನಗೆಯ ಚೆಲ್ಲಿ!

ಎಂಥ ಮೌನದ ಭಾಷೆ ಆಡಿದರೊ ಹಾಡಿದರೊ
ಮಧುರ ಪ್ರೇಮದ ಗೀತೆ ಹೃದಯದೊಳಗೆ
ರಸಮಧುಸರಸ್ಸಿನಲಿ ಈಜಾಡಿದರೊ ಬೆರಸಿ
ವಿದ್ಯುದಾಲಿಂಗನದಿ ಎದೆಯನೆದೆಗೆ!

ಕೊನೆಗಾಟ ಆಕಾಶದಲ್ಲಿ ಬಣ್ಣದ ಕಾಶಿ
ರಚಿಸಿ ರಮಿಸಿದನೊಂದು ಚಣದವರೆಗೆ
ಕೊನೆಗವಳ ಕ್ಷಿತಿಜ ತುಟಿಗೊತ್ತಿ ಇನಿ ಮುತ್ತೊಂದ
ನಗಿಸಿ ಮರೆಯಾದನಹ ಅಷ್ಟರೊಳಗೆ!
ಬಿಕನೇಸಿ ತಿರುಗಿದೆನು ಇತ್ತ ಕಡೆಗೆ!

## ೧೯೯೪ ರಿಂದ ಈಚಿನ ಕವಿತೆಗಳು ಮತ್ತು ‘ಮುಗುಳು’ ಸಂಗ್ರಹದ ಕೆಲವು ಪದ್ಯಗಳು (೧೯೫೮):

## ಅಜ್ಜ ನೆಟ್ಟಾಲದ ಮರ

ಪ್ರಳಯದ ಬಿರುಗಾಳಿ ಬೀಸಿ
ಮದ್ದಾನೆಯಂಥ ಧೂಳೆಬ್ಬಿಸಿ
ಕ್ಷಿತಿಜಗಳ ಆವರಿಸಿ, ನೆಲಮುಗಿಲಿಗೇಕಾಗಿ
ಮಿಂಚಿನ ಶಲಾಕೆ ಫಳ್ಳನೆ ಹೊಳೆದು
ಸ್ಫೋಟಿಸಿದಾಗ –
ಸಿಡಿಲು ಬಡಿದದ್ದು ಎಲ್ಲಿ ಯಾರಿಗೆ ಎಂದು ತಿಳಿಯಲೆ ಇಲ್ಲ.
ಅರೆಗಳಿಗೆ ನಮ್ಮ ಉದ್ಗಾರ ನಮಗೇ ಕೇಳಿಸದಂಥ
ಸ್ಮಶಾನ ಮೌನ. ಆಮೇಲೆ ಕಂಡಿತು
ಅಂಗಳದ ಆಲದ ಮರ ಬಡಮೇಲಾಗಿ ಬಿದ್ದಿತ್ತು
ನೆತ್ತಿಯ ಸುಳಿಯಿಂದ ಬಡ್ಡಿಬೇರಿನ ತನಕ ಸೀಳಿತ್ತು.

‘ಅಜ್ಜನ ಅಜ್ಜ ಅವನಜ್ಜ ನೆಟ್ಟ ಅನಾದಿಮರವೆಂದು –
ಇದರ ನೆರಳಲ್ಲಿದೆ ಚಂದ್ರಕಾಂತ ಶಿಲೆ,
ಆಯುರ್ವೇದ ಇದರೆಲೆ,
ಹಾಡುವ ಹಕ್ಕಿಗಳ ಹಸಿರುಯ್ಯಾಲೆ,
ಬೆಳ್ದಿಂಗಳಲ್ಲಿ ಯಕ್ಷಿಯರ ನೆಲೆ
ಕಗ್ಗತ್ತಲಲ್ಲಿ ಭೂತಪ್ರೇತ ರಾಕ್ಷಸರ ಯಕ್ಷಗಾನ ಕಲೆ
ಆಹಾ ಇದು ಇರೋದು ನಮ್ಮಂಗಳದಲ್ಲೆ”
ಎಂದು ಉಬ್ಬಿಕೊಬ್ಬಿದ ನಮ್ಮ ಹಿರೀಕರೆ
“ನೋಡುತ್ತಿರಿ ಸಾಮಾನ್ಯವಲ್ಲ, – ಈ ಮರ ಬಿದ್ದದ್ದು
ದಾಕಲಾಗುತ್ತದೆ ಇತಿಹಾಸದಲ್ಲಿ.
ಮಾರಿದರೆ ಎಷ್ಟು ಬಂದೀತು ಮಹಾ! ಆದರೂ
ಅಜ್ಜನೆಟ್ಟ ಆಲದ ಮರ, ಆಶಿರ್ವಾದವೆಂದಾದರೂ
ಪಾಲು ಬರಬೇಕಲ್ಲ” ಎಂದಾಗ ಹುಚ್ಚನೊಬ್ಬ ಹೇಳಿದ:

“ಇತಿಹಾಸದಲ್ಲಿ ದಾಕಲಾಗುತ್ತದೆ, ಬಿದ್ದ ಮರವ ಮಾರಿ
ನೀವು ಕಳ್ಳೆಪುರಿ ತಿಂದದ್ದು ಸಹ!”

# ೧೯೯೪ ರಿಂದ ಈಚಿನ ಕವಿತೆಗಳು ಮತ್ತು ‘ಮುಗುಳು’ ಸಂಗ್ರಹದ ಕೆಲವು ಪದ್ಯಗಳು (೧೯೫೮): ಗಾಂಧೀಜಿ ಸ್ವರ್ಗದಿಂದ ಇಳಿದು ಬಂದಾಗ

೧

ಯಾವ ದೇಶವಿದು?
ನೆಲದಲ್ಲಿ ಹುಲ್ಲು ಹುಟ್ಟಿಲ್ಲ
ಬಾನಲ್ಲಿ ಚಿಕ್ಕೆ ಮೊಳೆತಿಲ್ಲ
ಭೂಮಿ ಆಕಾಶ ಕಲಬೆರಕೆ
ಯಾಗಿವೆ ಹಗಲು ರಾತ್ರಿ!
ಎಷ್ಟೊಂದು ಕೆಂಪು ಚುಕ್ಕೆಗಳು
ಈ ದೇಶದ ನಕಾಶದಲ್ಲಿ!

ಪ್ರಕ್ಷುಬ್ಧವಾಗಿದೆ ವಾಯುಮಂಡಳ
‘ಹೊಸ ನಾತ ಹೊಸ ನಾತ’
ಕೊಟ್ಟಿಗೆಯ ಕರು ಕೊಟ್ಟಿಗೆಯಲ್ಲೇ
ತೊಟ್ಟಿಲ ಹಸುಳೆ ತೊಟ್ಟಿಲಲ್ಲೇ
ಕತ್ತು ಚೆಲ್ಲಿವೆ!
ಹರಿಯದ ನದಿಯ ದಡದಲ್ಲಿ
ಮೀನು ತೇಲಾಡಿವೆ.
ಬಾವಲಿ ನಿಂತಿವೆ ಕಾಲಮೇಲೆ!
ನವಿಲು ನೇತುಬಿದ್ದಿವೆ ಮರಕ್ಕೆ!
ಹೂತು ಹೋಗಿವೆ
ಆದ ಹೋದ ಎಲ್ಲ ಕತೆ!

೨

ಒಬ್ಬನೇ ಅಲೆದಾಡುತ್ತೇನೆ.
ದೇಶದ ತುಂಬ

ಊದಿದರೊಡೆವ ಗುಳ್ಳೆಯ ಥರದ ಜನ
ಹೂಂಕರಿಸಿ ಅಹಂಕಾರಗಳ
ಎರಚಾಡುವ ಭಾರೀ ಭಾರೀ ಜನ.

ಗುರುತು ಹಿಡಿಯೋದಿಲ್ಲ ಯಾರೊಬ್ಬರೂ
ಓಗೊಡುವುದಿಲ್ಲ ನಾನು ಕರೆದರೂ.
ಮುಖ ಎತ್ತಿ ನೋಡುವುದಿಲ್ಲ ಮುಟ್ಟಿದರೆ
ತಡೆಯುವುದಿಲ್ಲ, ಅಡ್ಡಬಂದರೆ
ದಾಟಿ ಹೋಗುತ್ತಾರೆ ಎದುರಿನಲ್ಲೇ
ಕ್ಯಾರೇ ಮಾಡದೆ,
ನಾನಿಲ್ಲಿ ಹುಟ್ಟಲೇ ಇಲ್ಲ ಎಂಬಂತೆ.

ಯಾವ? ದೇಶವಿದು?
**(ನಾಟಕ)**

# ೧೯೯೪ ರಿಂದ ಈಚಿನ ಕವಿತೆಗಳು ಮತ್ತು ‘ಮುಗುಳು’ ಸಂಗ್ರಹದ ಕೆಲವು ಪದ್ಯಗಳು (೧೯೫೮): ಕೋರಿಕೆ

ನಾನೊಬ್ಬನೇಕಾಂಗಿ ಊರ ಹೊರದಾರಿ ಬದಿ
ಕುಳಿತಿದ್ದೆ; ಸಂಜೆಗೆಂಪಳಿಯುತಿರೆ ಆಕಾಶ –
ದಲಿ ಮಲ್ಲಿಗೆಗಳಂತೆ ತಾರಾಳಿ ಹೊಳೆಯೆ ನಿಶೆ –
ಮೆಲ್ಲಮೆಲ್ಲನೆ ಅಡಿಯಿಡುತ ಬರುತಿರೆ ಹಾದಿ –
ಯಲ್ಲಿ ರೈತರ ಗುಂಪು ಹೊಲದ ಕೆಲಸವನುಳಿದು
ಮನೆಗೆ ಐತರುತಿರ್ದರಹ – ತಮತಮಗೆ ಬಂದ
ಹಾಡುಗಳ ಹಾಡುತ್ತೆ! ಏನು ಉತ್ಸಾಹವದು!
ಎಲ್ಲಿದ್ದಿತೇನೊ ಚೈತನ್ಯ ಮೇಣ್ ಆಮೋದ!!

ಮುಂಜಾವಿನಿಂದೆ ಸಂಜೆಯವರೆಗೆ ಬಿಡುವಿರದೆ
ನೆತ್ತರನೆ ಪಣಕಿಟ್ಟು ಬೆಮರ ಹೊಳೆಯೊಳು ಧುಮುಕಿ
ದುಡಿದುಡಿದು ಹಣ್ಣಾಗಿ ನೋವು ಹೊಟ್ಟೆಯುಳಿಕ್ಕಿ
ಹಾಡ ಹಾಡುತಲಿಹರು! ಏನು ನಿಷ್ಠುರ ಎದೆ!
ಅಳು ನುಂಗಿ ನಗುತಿಹರು! ನಾಗರಿಕರಿಂತಿಹರೆ?
ಇಂಥ ಗಂಡೆದೆ ನನ್ನದಾಗಿರಲಿ ಓ ಹರಿಯೆ!

# ೧೯೯೪ ರಿಂದ ಈಚಿನ ಕವಿತೆಗಳು ಮತ್ತು ‘ಮುಗುಳು’ ಸಂಗ್ರಹದ ಕೆಲವು ಪದ್ಯಗಳು (೧೯೫೮): ಕೀಟ್ಸನ ಸಾವನ್ನು ನೆನೆದು

ಮಧ್ಯರಾತ್ರಿ; ತುಸು ಗದ್ದಲಿಲ್ಲ ಸಾಗಿತ್ತು ಜಡದ ದಾಳಿ
ಕಟ್ಟುನಿಟ್ಟುಗಳ ಹಂಗು ಹರಿದು ಹಬ್ಬಿಹಳು ನಿಶೆಯ ಕಾಳಿ
ದಿಕ್ಕು ಕೂಡ ತಮ್ಮಿರವು – ತಾಣಗಳ ಮರೆತು ಕರಗಿ ಹೋಗೆ
ಚಿಕ್ಕೆ ನಿಸೆಯ ಹುರಬುರುಕು ನೆತ್ತಿಯನು ಕುಕ್ಕುತಿಹವು ಬಿಡದೆ

ಕಾಲ ಗಿಡುಗನಾ ಕರಿಯ ರೆಕ್ಕೆಯೊಲು ನಾಲ್ಕು ಗೋಡೆ ಸುತ್ತು
ಆರಲಿರುವ – ಅಳುತಿರುವ ಚಿಮಣಿ ತುಸು ಆಚೆಬದಿಗೆ ಇತ್ತು
ಮೃತ್ಯು ಜಿಹ್ವೆ ಕಡುಗೆಂಪು ಹಾಸಿನಲಿ ‘ಸತ್ತ’ ಸಾಯಲಿರುವ
ಜೀವಿಯೊಂದು ತೂಗಾಡುತಿತ್ತು ಅಚೀಚೆ ಬದುಕು ಸಾವ.

ಲೊಚಗುಡುತಲಿತ್ತು ಕರಿಗಾಲ ಹಲ್ಲಿ ಯಾ ಶಕುನ ಹೇಲುತಿತ್ತೊ!
ಎಬಡ ಗೂಗಿ ಕೂಗಾಡುತಿತ್ತು ಅದಕಾವ ಮೋದವಿತ್ತೊ!
ಬಾನ್ ಬಿಕ್ಕುತಿತ್ತು ತಿರೆ ತಿಣುಕುತಿತ್ತು ಸಳಸಳನೆ ಕುದಿದು ಗಾಳಿ
ಯಮನು ಬರೆದ ‘ಶರಾ’ ಓದುತಿತ್ತು ಮೈ ಹಾಗೆ ಹೀಗೆ ಹೊರಳಿ!

ಗುಳಿಬಿದ್ದ ಕೆನ್ನೆ ಕುಣಿಯಾದ ಕಣ್ಣು – ಸುಡುಗಾಡೊ ಅಬ್ಬ ಹಣೆಯು!
ಹೊಟ್ಟೆ ಬೆನ್ನಿಗಂತರವೆ ಇಲ್ಲ! ಎದೆ – ಅತಿಥಿ ಯಮನ ಮನೆಯು
ಕೇಶ ಮದಿಯ ಕಟ್ಟಡವಿಯಲ್ಲಿ ಸೀರ್ – ಹೇನಿಗನ್ನವಿಲ್ಲ!
ಬಿರುಸು ಹಕಳಿಗೆಟ್ಟಿರುವ ಮೈಯು! ಜಲ ಸ್ನೇಹವಂತು ಇಲ್ಲ.

ಉಸಿರ ಡೊಂಬನೋಡಾಡುತಿದ್ದ ಎದೆ – ಬಾಯ್ಗೆ ಲಾಳಿಯಂತೆ
ಜೀವವಿತ್ತು ನನ್ನಾಣೆ ನನ್ನ ಮಾತನ್ನು ನಂಬು ಮತ್ತೆ!

ಜೀವ ತುಂಬಿದೊಲು ಕಲ್ಲಿಗೊಮ್ಮೆ ಹುಚ್ಚೆದ್ದು ಯಾಕೊ – ಎಂತೊ –
ಅವನೆದ್ದು ಕುಳಿತ ಎಲ್ಲಿದ್ದಿತೇನೊ ಚೈತನ್ಯ ಮತ್ತೆ ಬಂತೊ!

ಸತ್ತ ಕಣ್ಣುಗುಡ್ಡಿಯಲು ಕೂಡ ನೂರ್ ಸೂರ್ಯರೊಮ್ಮೆ ಹೊಳೆಯೆ
ಚಿಮ್ಮಿ ಬಂತು ಎಲ್ಲಿಂದೊ ಕಾಂತಿ! ಏನೆ ಯಾವ ರುದ್ರನಿವಗೆ?

ಗಗನದಗಲ ಕಣ್ಣುಗಳ ತರೆ ಬ್ರಹ್ಮಾಂಡ ನುಂಗುವಂತೆ
ತಪ್ತ ಹೃದಯದಿಂ ಕುದಿವ ಉಸಿರು ಹೊರಬಂದಿತಂಬಿನಂತೆ!

ಮಾತಾಡಲೆಳಸೆ ಧ್ವನಿ ಇಲ್ಲದಾಯ್ತು; ಹಿಸುಕಿತೊ ಕುತ್ತು ಕತ್ತು!
ಹರಿವಾಗ ತಂತಿ ಅಬ್ಬರಿಸುವಂತೆ ಕೊನೆಯುಸಿರು ಹೊರಗೆ ಬಂತು!

ದೇಹ ಸೀಮೆಯನು ದಾಟಿ ಜೀವ ಯಮನಡಿಗೆ ಬಾಗುತಿತ್ತು
ಅವನ ತಪ್ತ ಎದೆಯುಸಿರು ಗಗನ ಗಂಡೆದೆಯ ಸೀಳುತಿತ್ತು!
ನೂರು ನೆರಳುಗಳು ಕೂಗಿ ಕುಣಿದವೋ ಕೈಯ ಕೈಯೊಳಿರಿಸಿ
ಭೂತ ಸಭೆ ಕರೆದು ಹಬ್ಬ ಮಾಡಿದುವು ತಮ್ಮ ಭಾಗ್ಯ ಮೆರೆಸಿ.

* * *

ಪರಿಚಿತರೆ? ಸ್ನೇಹಿತರೆ? ಒಬ್ಬರಿದ್ದರೇ ಬಾಯ್ಗೆ ತೊಟಕು ನೀರ-
ಬಿಡಲಿಕ್ಕೆ? ಕಣ್ಣುಹನಿ – ಅದಕು ಕೂಡ ಬರಗಾಲ! ವಿಧಿಯು ಕ್ರೂರ!
ಬದುಕಿನೆಲ್ಲ ಸಿಹಿಯುಂಡನೇನು? – ಛೀ ಎಳೆವಯಸ್ಸು ಪಾಪ!
ಪ್ರೇಮಪ್ರೀತಿಗಳ ಕಂಡನೇನು? – ಬರಿ ನಟನೆ ಮೋಸಕೂಪ!

ಒಣಗುತಿತ್ತು ಗಿಡ – ತೊಡಕು ನೀರು ಸಹ ಯಾರು ಹನಿಸಲಿಲ್ಲ!
ಸತ್ತಮೇಲೆ ಕಣ್ಣೀರ ಸುರಿಸದರು 'ವಿಧಿಯ ಆಟವೆಲ್ಲ!'

## ತಕರಾರಿನವರು: ನಮ್ಮಜ್ಜ

ಹಸಿರು ಕೈಕೊಟ್ಟ ವಟವೃಕ್ಷ ನಮ್ಮಜ್ಜ
ಮುಂದೆ ಅಂಗಳತುಂಬ, ಹಿಂದೆ ಹಿತ್ತಲತುಂಬ
ಮೈಕೈ ನೆರಳ ಚೆಲ್ಲಿ ಕೂರುತ್ತಾನೆ.

ಬಲಿತ ಗಾಯದ, ರೆಕ್ಕೆ ಬಲಿಯಲಾರದ ಹಕ್ಕಿ
ಅಲ್ಲಿ ಟೊಂಗೆಯ ಮೇಲೆ ಇಲ್ಲಿ ಟಿಸಿಲಿನ ಮೇಲೆ
ಹಾ ನರಳಿ ಕಿರುಚುತ್ತವೆ.

ಏನಿಲ್ಲವೆಂದರೂ ಮೂರು ಬಾಣಂತಿಯರ ಸುಡಬಹುದಾದ
ಟೊಂಗೆ ಟೊಂಗೆಯ ತುಂಬ, ಪಂಚಮಿಯ ಜೋಕಾಲಿ
ತೂಗಿ ನಗಿಯೆಳೆಸೋಗೆ ಕುಕಿಲುತ್ತವೆ.
ಅರ್ಥವಾಗದ ವಿಧಿಯ ಹಾಗೆ ಇವ ನಕ್ಕಾಗ
ಉತ್ತರವೇ ಗೊತ್ತಿರದ ಬೆರಳ ಮೂಗಿನ ಧಡ್ಡ ಮಗು
ತೊದಲುತ್ತದೆ.
ಯಾ ಕೀಟವಾದರೂ ಭ್ರಮರವಾಗದೆ ದಾಟಿ ಬರದ ಬೇಲಿ!

ನಾ ಬಲ್ಲೆ, – ಇವನ ತಿಥಿ ಎಂದೊ ಮಾಡಿದ್ದೇನೆ,
ನೀರು ಬಿಟ್ಟಿದ್ದೇನೆ,

ಹಳೆಗನ್ನಡ ಅಥವಾ ವಿಶ್ವಕೋಶದಲ್ಲಿವನ ಕಂಡಿದ್ದೇನೆ,
ಅದಕ್ಕೇ ನಾನೆಂದೂ ಹೋಗ-
ಲಾರದ ಬಾರದ ಕೂಡದ
ದೇಶದಲ್ಲಿವನಿದ್ದಂತೆ ಕಲ್ಪಿಸಿ ಮನೆ ಹೊಕ್ಕರೆ, ಆರೆ
ಹಿತ್ತಲದ ಹಳೆಬಾವಿಯೊಳಗೆಲ್ಲ ಬೇರುಗಳು
ಕೆಳಗೆ ನೀರಿನ ತುಂಬ ಹಸಿರುಬಿಂಬ!

ಮೈ ತುಂಬಾ ಕೂದಲುಂಟು ಕಪಿಯಲ್ಲದ,
ಕಪ್ಪುಗುಂಟು ಕರಡಿಯಲ್ಲದ,
ಥೇಟು ಮಾನವರಂತೆ – ಖಂಡಿತಾ ನಾ

ನೀ ಅಲ್ಲದ ಪಶುವ ತಂದು
ಥೂ ಉಗುಳಿ, ಛೂಬಿಟ್ಟು,
ಮೋಜು ಮಾಡಿ ಖಖ್ಖಖ್ಖಾ ಖಳ ನಕ್ಕಿದ್ದೇನೆ; ಅಥವಾ
ಹಸುಳೆಗಳ ಬಾಯ್ತುಂಬ ಬಾಂಬು ಘೋಷಣೆ ತುಂಬಿ,
ಬೆಂಕೀ ಹಚ್ಚಿ ಹಸಿರ ಛಟಪಟಿಸಿ ಪಟಾಕಿ ನಗೆ ನಕ್ಕಿದ್ದೇನೆ; ಅಥವಾ
ಸುಳ್ಳೇಕೆ? ಮನೆಯಲ್ಲಿ ಮಾದರಿ ಗೋರಿಯನ್ನಗೆದು
ತರತರದಂಗಿಗಳಿಂದ ಶೃಂಗರಿಸಿ,
ನಾನಾ ನಮೂನೆ ಭಂಗಿಗಳಲ್ಲಿ (ಅವನ ಭಂಗಿಯಲಿ ಸಹ)
ಮಲಗಿ ಅಣಕಿಸಿ ನಕ್ಕಿದ್ದೇನೆ, ಆದರೂ

ಅವನೊಮ್ಮೆಯೂ
ತಪ್ಪಿಯೂ
ಮರೆತು ಸಹ ಕನಿಷ್ಟಪಕ್ಷ ಅಳಲಿಲ್ಲ.
ಕಬ್ಬಿಣದ ಭಾವಬಂಗಿಗಳ ಬದಲಿಸಲಿಲ್ಲ. ಅಥವಾ…..

೧೯೭೭

# ತಕರಾರಿನವರು: ತಕರಾರಿನವರು

ತಕರಾರಿನವರು ಸ್ವಾಮೀ
ನಾವು ತಕರಾರಿನವರು

ಇಬ್ಬರ ತಕರಾರಿಗೆ ಹುಟ್ಟಿ
ಹಲವರ ತಕಾರಾರಿನಲ್ಲಿ
ಬೆಳೆದವರು.

ನಾವು ನಿಮ್ಮಂತೆ, ಹೋಗಲಿ
ಯಾರಂತಾದರೂ ಯಾಕಿಲ್ಲವೆಂದು
ಹಡೆದವರನಂದವರು.

ತಕರಾರನುಟ್ಟು ತಕರಾರ ತೊಟ್ಟು
ಮಸಡಿಗೆ ತೆರೆಗಣ್ಣು, ಕಿಸಬಾಯಿ
ಜೋಡಿಸಿ ನಕ್ಕು,
ಪುರಾಣದ ಹರಾಮತನದ
ಮನುವಿನ ಕಟ್ಟಡದ ಮೈಸಿರಿಗೆ
ಬೆದರಾಗಿ ನಿಂತು
ನಿಮ್ಮ ದೃಷ್ಟಿಗೂ
ತಕರಾರು ತೆಗೆದವರು
ಸ್ವಾಮೀ,
ನಾವು ತಕರಾರಿನವರು.

೧೯೭೮

# ತಕರಾರಿನವರು: ರಾವ್ ಹೇಳಿದ್ದು

೧

ಭೆಟ್ಟಿಯಾದಗೊಮ್ಮೆ ಬರ್ಥ್‌ಸರ್ಟಿಫಿಕೇಟ್ ತೋರಿಸಿದರೇ
ಕಿಸವಾಯಿ ದಾಸಯ್ಯ ಕೈ ಮುಗಿದರೇ
ಸ್ವಾಮಿ, ಶರಣೆಂದರೇ ನಿಜವೆ ಸಾರ್?
ಚಪ್ಪಲಿ ಬಿಟ್ಟು ಬೂಟು ಮೆಟ್ಟಿದ್ದೇನೆ, ಅಷ್ಟೆ, ಅಷ್ಟಕ್ಕೇನೆ
ಹಳೆಸ್ನೇಹ ಮರೆಯೋದೆ? ಕಾ ನೋಡಿ ಹ್ಯಾಗಿವೆ ಬೂಟು?
ತುಟ್ಟೀ ಬಾಟಾ! ಈ ಕರಿಬೂಟಿನ ಮುಂದೆ ನಿಮ್ಮ ಜಪ್ಪಲಿ ಏನೇನಲ್ಲ
ಬಿಡಿ; ಚೆಲ್ಲಿದ ನಿವಾಳಿ. ಪಾಲಿಶ್ ಹಾಕಿ ಹೆಜ್ಜೆ
ಝಳಿಪಿಸಿದರಂತು ನನ್ನಂತರಂಗದಡವಿಯ ಟೆಕ್ನಿಕಲರೆಲ್ಲಾ
ಕರಿ ಬಿಳಿ ಎರಡರಲ್ಲೆ ಕರಗಿ ನೀರಾಗಿ ಬಿಂಬಿಸುತ್ತದೆ.
ನೀವಲ್ಲಿ ನಿಂತು ಕೈಕಾಲು ಕುಣಿಸಿ ಮಾತಾಡಿ
ಇಲ್ಲಿ ಈ ಬೂಟಿನೊಳ್ ನಿಮ್ಮ ಬೃಹದಾಕಾರ ತೃಣ
ವಾಗಿ ಹಾಗೆ ಹೀಗೊಮ್ಮೆ ಹೀಗೆ ಹಾಗೊಮ್ಮೆ ಚಲಿಸಿದಾರಾಯ್ತು;
ಖೇಲ್ ಖಲಾಸ್!

ಮೊದಲಿನ ಅನೇಕದ ಕಥೆಯನೇನು ಹೇಳಲಿ ಸಾರ್?
ಏಳೇಳು ಏಳರ ನೂರೆಂಟು ಬಣ್ಣ, ಒಂದೊಂದಕ್ಕೆ ಅದರದರ ನೆರಳು,
ಆ ನೆರಳಿಗೀ ಬಿಸಿಲು – ಸರಳ ನೆರಳಿಗೇ ೧೮ ಹಾದರ ನಮೂನೆ

ಯೆಂದರೆ ಹೇಗೆ ಹೇಳಿ? ಈಗ ಬೇಕಾದ ರಾಮನ್ ರೇ ಕೂಡಿ, –
ಎರಡಂಕಿಯಲ್ಲೆ ಚಕಪಕ ಬಿಡಿಸಿ ಬೆರಗಿನ ನೇರಕ್ಕೆ
ಎಳೆ ಬಿಡಿಸುತ್ತೇನೆ!

೨

ನೋಡಿದ್ದಿರಲ್ಲ ಮೊದಲಿದ್ದ ಚಪ್ಪಲಿಜೋಡು
ಕಾಲೂರಿದಿರೋ, ಯಾತದ ಹೆಣ್ಣಾಯಿ ಅಲ್ಲಿ ಕುಂಯೋ, ಇಲ್ಲಿ ಕುಂಯೋ!
ಅಡವಿಯ ಮುಳ್ಳು ಹಾದಿಗೆ, ಹಾದಿಯ ಮುಳ್ಳು ಕಾಲಿಗೆ ಮುರಿದು,
ಮುರಿದ ಮುಳ್ಳಿಗೊಂದೊಂದು ಅಣೆ ಬೆಳೆದು
ಎಡಗಾಲಿಗೇಳು ಬಲಗಾಲಿಗೆಂಟು.
ಕೊಯ್ದಿರೋ, ಅಣೆಗೊಂದೊಂದು ಗವಿ
ಗೊಬ್ಬೊಬ್ಬ ಗುಹೇಶ್ವರ.
ಗಾಳಿ ಬೀಸಿದರಂತು ಗವಿಯಾಳದೊಳಗೆ ಹಿಂದು ಅಪಸ್ವರ
ಮಾರಾಯರೇ ಬೆಳತನಕ ನಿದ್ರೆಗೇಡು. ಇಷ್ಟಾದರೂ
ಬಂದುಹೋದದ್ದು ತಿಳಿಯದೆಂದು ಮನೆಯಲ್ಲಿ ಹೆಂಡತಿ, ಆಫೀಸಿನಲ್ಲಿ
ಸಿಪಾಯಿದಂಗೆ. ಕುಂಟುತ್ತಿದ್ದೆ ನಿಜ, ನಡೆದದ್ದು ಸುಳ್ಳೆ
ಈಗ ತಕ್ಕೊಳ್ಳಿಯಪ್ಪ, ಮನೆ ಆಫೀಸಿನಟ್ಟ ಏರುವಾಗೆಲ್ಲ ಡೊಗ್ಗು
ಸಲಾಮು ಚಪ್ಪಾಳೆ ಕೇಕೆ. ಅದಕ್ಕೇ ನಾ ಮಲಗಿದರು ಬೂಟು
ಕಳಚುವುದಿಲ್ಲವಲ್ಲ. ಮೊನ್ನೆ ಏನಾಯ್ತೂಂತ: ಕಾಮಸೂತ್ರದಾರನೇ ಆಸನ
ಹಾಕಿದರೆ ಹೆಂಡತಿಯ ತಾಳಿ ಬೂಟಿಗೆ, ಬೂಟಿನ ಲೇಸು ತಾಳಿಗೆ ಸಿಕ್ಕು
ಹರಿದು ಗೋಳೋಗೋಳು ಕೇಳಬೇಡಿ. ಹಾಗೆಂದು ನಿನ್ನೆ ಕಳಚಿಟ್ಟರೆ
ಬೂಟಿನ ಬದಲು ನನ್ನನ್ನೇ ಮೊಳೆಗೆ ತೂಗುಹಾಗಿ ಬಿಡಬೇಕೆ
ಅರ್ಧಾಂಗಿ?

೩

ಹಾಕಿ ನಡೆದಾಡಿದರೆ ಏನುಸುಖ, ಏನುಸುಕ, ಏನುಸುಖ ಅಂತೀರಿ!
'ಹಾಕಬೇಡೀ ಹಾಕಿದರೆ ಇದೇ ಜೋಡಿ,'
ಬಸಿರಿಯರ ದಿಂಬುಹೊಟ್ಟೆಯ ಮೇಲೆ ಇಂಬಾಗಿ ಕಾಲೂರಿ
ಹೊರವಂಟಂತೆ ಸಾರ್!
ಬಸ್ಸಿನ ಒಂದು ಸಿಸಿಪಸ್‌ವಾರಿಗೆ ಮೂರು ಸಲ ಮುಂಬೈ
ಹಾರಿ ಬರಬಹುದು
ದಂಗೆ ಧಾಂದಲೆ ಸಂಪು ಕುಸ್ತಿಪೇಚುಗಳಿಂದ ಜರ್ರನೇ
ಜಾರಬಹುದು. ಇನ್ನೇನು, ನಡೆವಾಗ ಕೂಸು ಒದ್ದಾಡಿ
ಬಿದ್ದು ಹೊರಳಾಡಿ ಚೀರಿದ್ದು ಕೇಳಿಸುತ್ತದೆ.
ಅದೇನು ಬಿಡಿ, ಕಿರುಚಿದ್ದನ್ನು ಸಂಗೀತವಾಗಿಸುವುದು ನಮ್ಮ
ಕಿವಿಯಲ್ಲಿದೆ.

೪

ಎಲ್ಲಿ ಸಿಕ್ಕಿತಂತೀರಿ? ಸಿಕ್ಕಸಿಕ್ಕವರೆದುರು ಬಾಯಿಬಿಟ್ಟೀರಿ ಸಾರ್,
ಯಾವನೋ ಪಾಪಿ, ಟ್ರೇನಿನ ಕೆಳಗೆ ಸಿಕ್ಕು ಆತ್ಮಹತ್ಯೆ ಮಾಡಿಕೊಂಡದ್ದು
ಪ್ರಜಾವಾಣಿಯಲ್ಲಿತ್ತಲ್ಲಾ, – ಅವನದ್ದು. ಪೋಲಿಸರಿಗಿಂತ
ಮೊದಲೇ ಹೋದೆ. ಕತ್ತರಿಸಿದ ಕಾಲೂ ಹಳಿಯ ಹೊರಗಡೆಯಿದ್ದವು
ಕಳಚಿಕೊಂಡೋಡಿ ಬಂದೆ. ಹ್ಯಾಗಿವೆ ನೋಡಿ, – ಥಳಥಳಾ ಥಳಥಳಾ
ಹೊಳೆಯುತ್ತಿವೆ!

೧೯೬೮

# ತಕರಾರಿನವರು: ವಿರೋಧಾಭಾಸ

ಧಡ್ಡ ನನಮಗಾ ಯಂಕ್ಯಾ
ಕ್ಯಾಲೆಂಡರಿನ ಹೆಣ್ಣಿನರೆಬತ್ತಲೆಯ ಮೇಲೆ
ಶಾನುಭೋಗರ ರಮೆಯ ಮುಖ ಹೇರಿ,
ಬಾಯ್ದಾಠ ಮಾಡಿದ್ದ,
ಕ್ರಮವಾಗಿ ಆಡಬೇಕಾಗಿದ್ದ ಮುದ್ದು
ಮಾತುಗಳ ಸುಡುಗಾಡಸಿದ್ಧ
ಒಂದೊಂದೇ ಪಲ್ಲಪಿಲ್ಲಾರೆಯಲ್ಲಿ ಚೀಲದಿಂದೆಳೆದು,
ಅಕ್ಷರಕ್ಕೊಂದು ಕಿಲೋ ತುಟ್ಟಿ ಸಕ್ಕರೆ ಬಳಿದು,
ಮಳೆಬಿಲ್ಲ ಮಾದರಿಯ ನುಣ್ಣಾನ ಬಣ್ಣಾ
ಹಚ್ಚಿ ಆ ಈ ಕಡೆಗೆ
ಆಡಿದ, –
ಗ್ಲೋಬು ಎದೆಗಳ ಮೇಲೆ,
ಹುಲಿ ಸಿಂಹ ಚಿರತೆ ಚಿತ್ರಗಳಿರುವ ಗವಿಯ ಮೇಲೆ,

ದನಿಯಾಗಿ ಹೊರಬಂದು! ಜೊಲ್ಲಾಗಿ ಸಿಡಿದಾಡಿ
ಉಗುಳಾಗಿ ತಳಬುಡ ಹರದಾಡಿದ
ಮಗಾ | ಹರದಾಡಿದ.

ಕಣ್ಣಾಗಿ ಹುಡಿಕ್ಯಾಡಿ | ಕೈಯಾಗಿ ಮುಟ್ಯಾಡಿ
ಪಾತಾಳ ಗರುಡಾಗಿ ತಡಕಾಡಿದ
ಮಗಾ | ತಡಕಾಡಿದ.

ಅಂಗಿ ಟರ್ರನೆ ಹರಿದು| ಎದೆಯ ಮೇಲ್ಗಡೆ ರಮಾ
ಯಂಕ್ಯಾ ಇದ್ದುದ ನೋಡಿ ಹಿಗ್ಗಾಡಿದ
ಮಗಾ | ಹಿಗ್ಗಾಡಿದ.

ಬರುವಷ್ಟು ಲಿಪಿಯಲ್ಲಿ ರಮಾ – ಯಂಕ್ಯಾ ಬರೆದ,
ಹರಿದ ಟರಪರ, ತುಂಡು ಹೆಸರ ಕೂಡಿಸಬರದೆ
ಕೆಂಪುಮಸಿಯಲ್ಲದ್ದಿ ಅರಲಿಟ್ಟ.

ಎದೆಯೊಡೆದು ಬಸಿದಂತೆ ಎದೆಎದೇ ಬಡಕೊಂಡು
ಸ್ವಂತ ಮೂಗನು ಹಿಡಿದು ಮುಳುಮುಳೂ ಅತ್ತ.
ಕೈಯ ಸಿಂಬಳ ನೋಡಿ ಕುಲುಕುಲೂ ನಕ್ಕ.

೧೯೬೫

# ತಕರಾರಿನವರು: ಗೌತಮ ಕಂಡ ಪ್ರಥಮ ದರ್ಶನ

ಖಾನೇಸುಮಾರಿಯಲ್ಲಿ ಸ್ವಂತ ಹೆಸರುದಶಿಯಿರದ
ಪರದೇಶಿ ಮಗ, ಯಾರ ಶರ್ಟನೋ ತೊಟ್ಟು,
ಯಾರ ಮೆಟ್ಟನೋ ಮೆಟ್ಟಿ, ಯಾರ ರುಂಬಾಲಿಗೋ
ತಲೆ ಬಣ್ಣನಳವಡಿಸಿ, ಗೋಸುಂಬೆನಗೆ ನಕ್ಕು,

ನನ್ನ ಹೆಸರಲ್ಲೇನೆ ಚಾಬೀಡಿ ಅಂಗಡಿಗಳಲ್ಲಿ ಉದ್ರೀ
ಬರೆಸಿ, ಎಲಿ ತಿಂದು ರಂಗಾಗಿ ಕಂಡ ಹೆಂಡಿರ
ಕಿವಿಯ ಪೀಕದಾನಿಗಳಲ್ಲಿ ಪೋಲಿ ಮಾತನ್ನುಗುಳಿ
ಮೋಜು ಮಾಡುವ ಮಗನ ಬಡಿವಾರ

ಆಽ ಎಂದು ಕಟುವಾಯ ಜೊಲ್ಲ ತಟಕ್ಕೆಂದು ಸುರಿಸಿ
ಹೊಗಳುವಿಯಲ್ಲ; ಇದಕ್ಕೇನು ಹೇಳಲಿ? ಮೊನ್ನೆ
ಆದದ್ದಿಷ್ಟು : ಬಾಜಾರಿನಲ್ಲಿ ಸಂಜೆ, – ನಿನಗೆ ಗೊತ್ತಿದೆಯಲ್ಲ
ಕಳಕೊಂಡ ಮೂಕಜನ, ಹೇಗೆ ಕೈಕಾಲೂರಿ

ಇರುವೆಗಳ ಸಾಲಾಗಿ ಹೊತ್ತುಗೊತ್ತಿಲ್ಲದೇ ಹರಿವರೆಂದು?
ಸರಿ, ನಾನೂ ಕೂಡ ನಾಮರೂಪವ ಮರೆತು
ಕರಗಿ ಹೋದೆ. ಬೀದಿ ಕಂಭದ ನೆತ್ತಿ ಭಗ್ಗನೇ ಉರಿ
ಹೊತ್ತಿ ನೆರಳು ಬೀಳುವ ಹಾಗೆ ಬೆಳಕು ಬಿತ್ತು.

ಏಕೆ ಎಲ್ಲಿಗೆ ಹೊರಟೆನೆಂದು ಒಂದೇ ಕ್ಷಣ, ಹೀಗೆ
ಗಕ್ಕನೆ ನಿಂತು, ಹೀಗೆಯೇ ತಲೆ ಕೆರೆದು
ಹಾಗೊಮ್ಮೆ ಹೀಗೊಮ್ಮೆ ಆಜುಬಾಜೂ ನೋಡಿ ಹಲ್ಲ
ಕಿರಿದೇ ಕಿರಿದೇ, – ನಾ ಕಿರಿದರೀ ಇವನ ಗಂಟೇನು

ಹೋಯ್ತು? ಸರಸರಾ ಬಂದವನು ಎದುರುಬದುರಂಗಡಿಯ
ಕನ್ನಡಿಯ ಕೃಷ್ಣಬಾಯಲ್ಲಿ ನೋಡೊ, ಥೇಟು
ನನ್ನಂತೆ ಕೈ, ಥೇಟು ನನ್ನಂತೆ ಮುಖ ಹೋ ಎಂದರೋ
ಎಂದು ಕಿರುಚಿದನೆಲ! ಆ ಅವನನೊಂದು ಸಲ

ಹಿಡಿಯಲೆಂದೇ, ಹಿಡಿದು ಕಡಿಯಲೆಂದೇ, ಕಡಿದು ಕುಡಿ
ಯಲೆಂದೇ ಬೆಳ್ಳಿ ಹಿಡಿಯ ಕುಡುಗೋಲನ್ನು ಮೂರು
ದಿನ ಮಸೆದೆ. ಹಾದಿ ಹೋಗವರನ್ನು ಬೀದಿ ಬರುವವರನ್ನು
ನೀವು ಕಾಣಿರೆ? ಎಂದೆ. ಎಲ್ಲಾರೂ ಚಪ್ಪಾಳೆ ತಟ್ಟಿ

ನಕ್ಕುದ ಕೇಳಿ ಮನೆಗೆ ಬಂದೆ. ಬಾಗಿಲಿಕ್ಕಿತ್ತು. ಒಳಗೆ
ಗುಸುಗುಸು ಸದ್ದು ಕೈ ಬಳೆಗಳುಲುಹು. ಸೆರೆ
ಸಿಕ್ಕನೋ ಶತ್ರುವೆಂದು ಝಾಡಿಸಿ ಒದ್ದು ಭರ್ರನೇ ಬಿರುಗಾಳಿ
ಯೊಳಹೊಕ್ಕೆ. ಹೊಕ್ಕವನೆ ಮನೆಯ ತುದಿತುದಿಯ

ಗದಬಡಿಸಿ, ಗದಬಡಿಸಿದವನೆ ಹುಡುಕಾಡಿ, ಹುಡುಕಾಡಿದವನೆ
ಕೊನೆಗೆ ಹಾಸಿಗೆಗೆ ಬಂದು ನೋಡುತ್ತೇನೆ: ನನ್ನ
ಪಾಲಿನ ಹುಡುಗಿ ಇದಕೆ ಹಾಸುಗೆಯಾಗಿ, ಅರೆಗಣ್ಣ ತುದಿಯ
ಸೂರು ಜತಿಯಗುಂಟ ಸ್ವರ್ಗದುಯ್ಯಾಲೆ ಕಟ್ಟಿದಹಲ್ಯೆ

ಹಿಂದೆ ಹಿಂದಕ್ಕೊಮ್ಮೆ ಮುಂದೆ ಮುಂದಕ್ಕೊಮ್ಮೆ ತೂಗಿ
ದಾಗೊಮ್ಮೆ ಹಾ! ಜೀಕಿದಾಗೊಮ್ಮೆ ಹೋ! ಎಂದು
ಗಳರವಗೈಯ್ದರೇನಾಗಬೇಡ? ಕಣ್ಣಿನ ಕಮಂಡಲದ
ಕುದಿವ ನೆತ್ತರು ತುಳುಕಿ ಸೆಳೆದೆನಾತನ ಮೇಲು

ಹೊದಿಕೆಯನ್ನು, ಚಡ್ಡಿ ಚರ್ಮ ಎಲುಕರುಳು ನರಗಳನ್ನು –
ಹರಿದೊಗೆದು ಹಿಡಿದೆನೆಂಬಾಗೆಲಲ, ಹಿಡಿದವನ
ಮೈತುಂಬ ಗುಲ್ಲುಕೊಟ್ಟು ಹಲ್ಲ ಕಿತ್ತು ಕಡಿವೆನೆಂಬಾ
ಗೆಲಲ, – ಸರ್ಪನಾಲಗೆಯಿಂದ ಅಸಿಧಾರೆ ನೆಕ್ಕುವಂದಗೇಡಿ

ಶುನಕನ ಕಂಡೆ! ಅಲ್ಲಿ ನೆಕ್ಕಿದರಿಲ್ಲಿ ನನ್ನ ನಾಲಗೆ ಸೀಳಿ
ಹಲವಾದುದ ಕಂಡೆ! ನನ್ನ ಹೆಸರಿಂದದನು ಕೂಗಿ ಕರೆದೆ.
ಮತ್ತೆ ಒದ್ದು ಕನ್ನಡಿಗಾಗಿ ತಡಕಾಡಿದೆ!

೧೯೬೫

# ತಕರಾರಿನವರು: ದಿನಪತ್ರಿಕೆಯ ಸುದ್ದಿ, ಹಣೆಬರಹ

ಹಡೆಯಬೇಕಿದ್ದವಳು ಹಲಿವುಳ್ಳ ಸುದ್ದಿ
ಕಾರುಕಾರಿಗೆ ಢಿಕ್ಕಿ ಮಣ್ಣಲಾಡುವ ಸಣ್ಣ ಕಂದನ ಸಾವು
ಜಾಗತೀಕರಣ ಕೇಸರೀಕರಣ.
ಕಲ್ಯಾಣದ ಬೆಳಕೆಲ್ಲಿ ಹೋಯಿತು ಶಿವನೆ?
ಶಸ್ತ್ರಾಸ್ತ್ರ ಪೈಪೋಟಿ ದೀಪಾವಳಿ ಪಟಾಕಿ
ಅಣುಬಾಂಬು ಬೋಫೋರ್ಸು ತೆಹಲ್ಕಾ ಶಿಫಾರ್ಸು
ಮುಳುಗಲಿರುವ ತಲೆಗಳೇ ಏರಲಿರುವ ಬೆಲೆಗಳೇ
ಗೋಡೆಯಿಲ್ಲದೆ ತೆರೆದ ಬಾಗಿಲುಗಳಿಂದಲೇ
ಕಟ್ಟಿದ ಸ್ವದೇಶಿ ಮಾದರಿಯ ಭಾಜಪದ ಮನೆ ಭೋಗ್ಯಕ್ಕಿದೆ,
ಡಾಲರ್ ಕಾಲನಿಯಲ್ಲಿ!
ಕ್ಲಿಂಟನ್ ಕ್ಲಿಂಟನ್ ಮೆಗಾಸ್ಟಾರ್
ಹೌ ಐ ವಂಡರ್ ವಾಟ್ ಯೂ ಆರ್!
ಗೋಕಾಂವಿ ಸಿದನಿಂಗನ ಮಠದಲ್ಲಿ ದೇವರ ಕಳವು
ವಜ್ರದ ಮೂರ್ತಿ ನಾಪತ್ತೆ ಪೂಜಾರಿಯ ಪರಾರಿ
ನಿಮಗೊಪ್ಪುವ ಹೊಸ ಗಡಿಯಾರ ಬೇಕೆ?

ಕಂಬಕ್ಕೆ ಕಟ್ಟಿ ಹದಿನೆಂಟು ಹರಿಜನರ ಕೊಲೆ
ಏಸುವಿನ ಹೊಸಬರವು ಬೈಬಲಿನ ಹೊಸ ಸಹಸ್ರಮಾನದ
ಹೊಸ ಮುದ್ರಣ
ಮನೆಗೆ ಬೆಂಕಿ ಆರ್ವರ ಸಾವು ಹೆಣ ಗುರುತಿಲ್ಲ
ಹೋರಿ ಕಳೆದಿದೆ ಬಕ್ಕತಲೆ ಹಂಡ ಹಣಚಿಕ್ಕು
ತಂದವರಿಗೆ ಬಹುಮಾನ ಸಮೇತ ಗಾಡೀಖರ್ಚು
ಕೊನೆಯಚ್ಚು:
ಆಗಸ್ಟ್ ೧೫ರಿಂದ ಎಲ್ಲರೂ ಗಹಗಹಿಸಿ
ನಗಬೇಕೆಂದು ರಾಷ್ಟ್ರಪತಿಗಳ ಸುಗ್ರೀವಾಜ್ಞೆ
ಸಂಪಾದಕಸ್ವಾಮೀ ನಮ್ಮೂರಲ್ಲಿ ಹುಚ್ಚುನಾಯಿ ಹೆಚ್ಚಾಗಿವೆ
ಯೋಗ್ಯಕ್ರಮ ಕೈಕೊಳ್ಳುವಿರಾ
ಸೂಚನೆ: ಸಂಪಾದಕರು ವೈಕುಂಠವಾಸಿಗಳಾದ್ದರಿಂದ
ಪತ್ರಿಕೆಗೆ ನಾಳೆ ಬಿಡುವು.

೧೯೭೫

# ತಕರಾರಿನವರು: ದೇವರ ಬಂಗಾರದ ಕುದುರೆ

ಯಾಕೆ ಸುಮ್ಮನೆ ಕುಂತಿ? ಮಾತನಾಡೆ. ಅಥವಾ,
ನಾ ಒಂದು ಹೇಳುವೆನು, ನೀ ಒಂದು ಕತೆ ಹೇಳು,
ನಾನೆ ಆರಂಭಿಸಲೆ? ಕೇಳು ಮತ್ತೆ:
ಹೀಗೆ ಉದ್ದೋಉದ್ದ ರಸ್ತೆ ಹೋಗಿದೆ ನೋಡು
ಅಲ್ಲಿ ಗುಹ್ಯಾತ್ ಗುಹ್ಯತರವಾದ ಗಹನಗವಿ!
ಶಿಶಿರದಲ್ಲಿ ಮಂಡೆ ಭೋಳಿಸಿದೊಂದು ಎಳೆಯಮರ.
ಮೂರು ಎಂದರೆ ಮೂರೆ ಟೊಂಗೆಗಳು, ಆರೆ ಎಲೆ.
ಮೂರರಲ್ಲೊಂದಕ್ಕೆ ಭಿಡೆಗೆ ಬಸುರಾದ ಕುಡಿ; ಮಿಡಿಯೆನ್ನಲೂಬಹುದು
ಕಾಯಿಯೆಂದೂ ಕೆಲರ ತರ್ಕವಿದೆ, ಅದು ಬೇರೆ.
ತುಸುಹೆಚ್ಚು ತುಸುಕಮ್ಮಿ ಟೈಮು ಇಷ್ಟೇ ಅನ್ನು
ಇಲ್ಲಿಯೇ ನೋಡು ಆ ಕಥೆಯು ನಡೆದದ್ದೂನು.
ಅವನು ಕಾಲೇಜಿನಲ್ಲಿ ಮೇಷ್ಟ್ರು; ಅವಳೋ ಅವನ ವಿದ್ಯಾರ್ಥಿನಿ.
ಬಹಳೇ ಸರಳ ಪ್ರಶ್ನೆಯಂತೆ ಇದ್ದಳು ಆಕೆ,
ತುದಿ ಹಲ್ಲು ಸುತ್ತಲೂ ಉರಿಯುವ ತುಟಿ.
"ಹೇಳಿ ಸಾರ್, ಅಮೃತಮತಿಗೇನಾಯ್ತು ಆಮೇಲೆ?"
ಉಚ್ಚಾರವೆಲ್ಲ ಬೆದೆ ಒದ್ದೆ
ಘಮಘಮಾ ನಾರಿದಳು ಮೂಗತುಂಬ
"ಆ ಭವಾವಳಿ ಒಟ್ಟಿಗೇಳು – ಒಂದೇ ಎರಡೆ?
ಬೆಳೆದಂತೆ ಭವ ಭವಾ! ಹೊಸ ಹೊಸಾ ಅನುಭವ!
ಹೇಳಿ ಸಾರ್ ಅದ ಹೇಳಿ"
ಗವಿಯ ಒಳಗಡೆಯಿಂದ ಸೀಳುನಾಲಗೆ ಚಾಚಿ
ಬಂತು ಕತ್ತಲೆ! ಉಧೋ
ಬಯಲು ಬಯಲನು ತುಂಬಿ, ಟೊಂಗೆಗಳ ತುದಿ ತಬ್ಬಿ
ಅದನಳಿಸಿ ಇದ ನುಂಗಿ, ತಿರುಗಿ ತಿರುಗಣೆಯಾಗಿ
ಬರಿ ಎರಡನುಳಿಸಿತ್ತು: ಗಂಡು ಹೆಣ್ಣು!
"ಇಲ್ಲೆಲ್ಲು ಲೈಟಿಲ್ಲ"
"ಹೌದು ಪರವಾಯಿಲ್ಲ"
"ಬಲೆ ಕಠಿಣ ಕವಿ ಜನ್ನ! ಆ ಯಶೋಧರ ಚರಿತೆ? –
ನಾರಿಕೇಳದ ಪಾಕ, ಬೆಳ್ಳಗೇಂತಿಟ್ಟುಕೊ, ಕಷ್ಟವೆ, ಏನಂತಿ?
ಒಟ್ಟು ಕಥೆ ನಡೆದದ್ದು ಹೀಗೆ…."
ಕತ್ತಲೆಯ ಕಪ್ಪುತೆರೆ ಗುಹೆಯ ಗುಹ್ಯವ ತೀಡಿ ಹರಿದಾಡಿದಂತೆ!
ಒಳಕ್ಕೊಮ್ಮೆಲೆ ತೂರಿ, ಎದೆಯ ತುದಿಗಳ ತುಂಬಿ
ಕಣ್ಣರೆಪ್ಪೆಯಗುಂಟ ಶೂನ್ಯವಾದಂತೆ, – "ಆಹ!"
(ನಾನು ಬಂಗಾರದ ಕುದುರೆ ನೀ ಬೆಳ್ಳಿದೇವರೊ

ನಿನ್ನನೇರಿಸಿಕೊಂಡು ಓಡಬೇಕು.
ಒಂದು ಎರಡೇಳು ಭವ, ಮುಂದೆ ಹಾಗೇ ಮುಂದೆ
ಈಗ ನಾನಿದ್ದದ್ದು ಎಷ್ಟನೆ ಭವ?)
“ಬೆಳೆದಂತೆ ಭವಭವಾ ಹೊಸಹೊಸ ಅನುಭವಾ!
ಮುಕ್ತಿಗೆನ್ನೆಷ್ಟು ಭವ? ಹೇಳಿ ಸಾರ್, ಅದ ಹೇಳಿ
ಪಾಠ ಪೂರ್ತಿಮಾಡಿ, ಎಷ್ಟನೆ ಭವ?”
“ಬೆಂಕಿಪೊಟ್ಟಣವೆಲ್ಲಿ?”
“ಎಲ್ಲಿ ಮೇಸ್ತ್ರೀ ಎಲ್ಲಿ, ಎಲ್ಲಿ ಅವಿತಿದ್ದೀರಿ?”
ಸಂದಿಗೊಂದಿಯ ತುಂಬ ಕೈತುಡುಕಿ ಹುಡುಕಿದಳು,
‘ದೇಹದಲ್ಲೆ?’
ಬರಹ ಭಾಷಣ ಪಾಠ ನೋಟ್ಸಿನಲಿ ಹುಡುಕಿದಳು –
‘ಮಾತಿನಲ್ಲೆ?’
ಹಲ್ಲ ಚಕಮಕಿ ಕಡೆದು ಕಣ್ಣ ಹೊತ್ತಿಸಿ ಮೇಲು ಮೇಲಕ್ಕೆ ನೋಡಿದಳು:
ಮರವೇರಿ ಮಿಡಿಯಾಗಿ ಮಣ್ಣಕಡೆ ಕಣ್ಣಾಡಿ
ಇರುವ ಆರೂ ಎಲೆಯನಲುಗಾಡಿದ – ……

ಕಾ, ಇಕಾ ಮೈ ನವಿರು! ನಿನಗು ಏಳುವುದಲಾ
ಬೇರನಾರೋ ಅಲುಗಿದಂತೆ ಅನಿಸುವುದಲಾ?
ಅವರಲ್ಲಿ – ನಾವಿಲ್ಲಿ! ಇರಲಿ
ನೀ ಕತೆ ಹೇಳೀಗ
ನಿನ್ನ ಸರದಿ.

೧೯೬೩

# ತಕರಾರಿನವರು: ಆಸ್ಪತ್ರೆಯಲ್ಲಿ ಅರಗೊಡ್ಡಿ

ಗೆಳೆಯಾ,
ಬಲ್ಲೆಯಾ ನಾ ಹೇಳಬಾರದ, ನೀ ಕೇಳಬಾರದ,
ಹೇಳಿಕೇಳಿದರಿಬ್ಬರಿಗೂ ತಿಳಿಯಬಾರದ ಒಂದು ಸಂಗತಿಯ?
ಅದನ್ನೀಗ ಈ ಕ್ಷಣ ಬುದ್ಧಬೋಧಿಯ ಕೆಳಕುಳಿತು
ತಿಳಿದೆಯೆಂದಿಟ್ಟುಕೊ:
ಬಲ್ಲೆಯಾ, –
ಸದಾ ಅರಳಿರುವ ಮುಖಾರವಿಂದದ ನಿನ್ನ ನಗಿ ಮಾಸುವುದ?
ಲೋಕವನ್ನು, ನನ್ನನ್ನು ಕಾಕುಮಾಡಿ ವಕ್ರೀಭವಿಸುವ ನಿನ್ನ
ಚಷ್ಮಾಕಾಂತಿ ಕಳೆಗುಂದುವುದ?
ಅದು ಇರಲಿ, ಬಲ್ಲೆಯಾ
ಹಜಾಮನೆಂದು ಅಗಸನಿಗೆ ನೀ ರೇಗಿದ್ದಕ್ಕೆ,

ಹೆಜ್ಜೆಗೊಂದು ಫೋಜು ಕೊಟ್ಟು ಹಲ್ಲು ಕಿಸಿದದ್ದಕ್ಕೆ,
ಉಗುಳಿದ ಭಾಷಣಕ್ಕೆ, ಕಿರಿಚಿದ ಘೋಷಣೆಗೆ,
ಕಚ್ಚಿ ಕೆರೆದ, ಒತ್ತಿ ಮೆತ್ತಿದ ಮಾಂಸದ ನಂಟಿಗೆ
ಅಂಟಿದರ್ಥ ವ್ಯರ್ಥವಾಗುವುದ?

ಬಲ್ಲೆಯಾ, –
ಬುದ್ಧ ಎಲಿಯಟ್ ಸಾರ್ತ್ ಗಾಂಧಿಗೀಂದಿಗಳೆಲ್ಲ
ಮಾವೋ ಮಾವಾರೆಲ್ಲ
ಮ್ಯೂಸಿಯಮ್ಮಿನ ವಸ್ತು –
ಬೇಡ, ನೀತಿಯ ಬೀಳುನೆಲದ ಬೆದರು ಬೆಚ್ಚು
ಗಳಾಗಿ ಬಿಚ್ಚಿಕೊಳ್ಳುವುದ?

ಏನಲೇ ಬಲ್ಲೆಯಾ – ನೀ ಹೊರಗೆ
ಹರಿದು ರಸ್ತೆಗಳಲ್ಲಿ
ಬರೆದು ಆಫೀಸಿನಲ್ಲಿ
ನೋಡಿ ಥೇಟರಿನಲ್ಲಿ
ತಿಂದು ಹೋಟೆಲಿನಲ್ಲಿ
ದಿನಪತ್ರಿಕೆ ರೇಡಿಯೋಗುಂಟ ವಿಶ್ವದಲ್ಲಿ

ತುಂಬುವಾಗ ನಿನ್ನಾಕೆ
ಪರದ ಗಂಡನ ಕೂಡ ಹಗಲುಹಾದರ ಮಾಡಿ, – ನೀ ಬಂದಿ,
ಅವಾಗ, – ತಿಳಿಜೊಲ್ಲ ಚಿಮುಕಿಸಿ ನಕ್ಕುದ
ಏ ಬೋಳೀಮಗನೆ ಬಲ್ಲೆಯೇನೊ –
ಸೂಳೆಮನೆಯಲ್ಲ ಸರ್ಕಾರೀ ಆಸ್ಪತ್ರೆಯಲ್ಲಿ ನಾವಿದ್ದದ್ದು,
ಆದ್ದರಿಂದ ಕ್ಯಾನ್ಸರೇ ನಮಗಾದದ್ದೆಂದು ತೀರ್ಮಾನಿಸಲ್ಪಟ್ಟಿದ್ದು?

ಕೋಲೆಬಸವ ಕತ್ತನಾದರು ಹಾಕು,
ಹೌದಪ್ಪ ಹೌದೆಂದರೆ ಬಲಹೂ ಕೊಡು.
ಕಾ ನನ್ನ ನೋಡು:
ಇಟ್ಟವಗೆ ಶೆಗಣಿಯಾದೆ, ತಟ್ಟಿದವಗೆ ಕುರುಳಾದೆ
ನೀನಾರಿಗಾದೆಯೊ ಎಲೆ ಮಾನವಾ?
ತಂದೆಗೋ? ಊರ ಮಂದಿಗೊ?

ನನ್ನಲ್ಲೆಂಥ ಮತ್ಸರ ಹುಟ್ಟುವುದು ಬಲ್ಲೆಯಾ –
ನನ್ನ ನಂಬಿಸಿದ್ದಕ್ಕೆ, –
ನೀನಿಂಥ ಅತಿಶಯದ ಫೋಜು ಕೊಟ್ಟು ಸತ್ತದ್ದಕ್ಕೆ

೧೯೬೭

# ತಕರಾರಿನವರು: ಪ್ರಭು

೧

ಮಳೆ ಬೀಳುತ್ತಿದೆ
ನೆಲದೆದೆಯ ತೀಡಿ ತಾಡನೆ ಕೊಟ್ಟು ಉಜ್ಜಿ ಕೆಳಗಾಳ –
ಆಳಕ್ಕೆ ನೀರಿಳಿಯುತ್ತಿದೆ.
ನಿಟ್ಟುಸಿರ ಉಗಿಯಾಡಿ ಬೆದೆಯವಾಸನೆ ಮೂಗಿನಿಡಿ ತುಂಬಿ
ಅರೆಗಣ್ಣ ತುದಿಗೆ ಬೆರಗಿನ ಲೋಕ ತೆರಕೊಂಡು
ಕೈಮಾಡಿ ಕರೆಯುತ್ತಿದೆ,
ಎಲ್ಲ ನೆನಪಾಗುತ್ತಿದೆ:

ಹೀಗೆಯೇ ಮಳೆ ಜಡಿಯುತಿತ್ತು ಆಗಲು ಕೂಡ
ಹನಿಗೊಂದು ಕುಣಿ ತೋಡಿ, ಕುಣಿಗೊಂದು ಕೆರೆಕಟ್ಟಿ,
ಬದಿಯ ಹಸಿರಿಗೆ ಹೂವಿನರಿಷಿಣ ಬಳಿದೆರೆದು
ತಲೆ ತೊಯ್ದು, ತುರುಬು ಸಡಿಲಾಗಿ ಬೆನ್ನಿಗೆ ಇಳಿದು,
ಅಂಕೆ ಮೀರಿದ ಕುರುಳು ಹಣೆಗೆ ಕೆನ್ನೆಗೆ ಅಂಟಿ,
ಕಣ್ಣ ಕಾಡಿಗೆ ಕೆನ್ನೆಗಿಳಿದು ಹೂವೆದೆ ಮುದುಡಿ,
ಉಬ್ಬಹಾ! ತಗ್ಗಹಾ! ಮಿದುವಹಾ!
ಸಿಂಪುದುಟಿ ಬೆಸೆದಾಡಿ ಮುತ್ತು ಗಳಸ್ವರವಾಗಿ
ಗರುಡನೆದೆ ತೊಡೆಗಳಲ್ಲಿ ತೊಡರಿ ರೇಗಿತು ಹಾವು
ಹೆಡೆ ಬಿಚ್ಚಿತು!

ಪುಟ್ಟ ಮುಖ ಇಷ್ಟೆ ತುಟಿ, ನನ್ನ ಚಿಟಗುಬ್ಬಿಯೇ,
ರುಚಿಯಾದ ಕ್ರೌರ್ಯವೇ,
ಮಣ್ಣ ಹದದಲ್ಲಿ ಬೆಳೆದ ಕಾಮಲತೆಯೇ
ತೆರೆಕಣ್ಣು, ಇಕಾ ಹೌದಾ? ಉರಿಯತೊಡಗಿತು ಜ್ಯೋತಿ,
ರೋಮರೋಮವು ಹೊತ್ತಿ ಉರಿವ ಪಣತಿಯ ಬತ್ತಿ,
ಜ್ಯೋತಿರ್ಲಿಂಗ!
ಹೊರಗನ್ನು ಹುರಪಳಿಸಲೆಂದೆ ಬತ್ತಲೆಯಾಗಿ,
ಮತ್ತೆ ಕಪ್ಪುರವಾಗಿ, ಮತ್ತೆ ಹಸಿನುಲಿಯಾಗಿ ಹೊಣಿಹೊಕ್ಕೆ,
ಕಣ್ಣಿನೀ ಸೊನ್ನೆಗಳ ಶೂನ್ಯಸಿಂಹಾಸನದ ಸುತ್ತ
ಮಂಡಲ ಕೊರೆದು ಮಂಡಿಸಿದೆ.
ಅದ್ದುರಿಯ ದಿನದ ಐಸಿರಿಯ ಕೊಳ್ಳೇ ಹೊಡೆದು
ಗದ್ದಿಗೆಯ ಮೇಲೆ ಝಣಝಣಿಸಿ ಎಣಿಸಿದೆ, ಮತ್ತು
ಪ್ರತಿಯೊಂದು ದುಡ್ಡನ್ನು ಅಂಗಾಂಗಕಂಟಿಸಿದೆ.

ಬೆನ್ನುಹುರಿ ಬಣ್ಣಗಳ ವೈಭವವ ತೆರೆದು
ಕೇಕೆಯ ಹಾಕಿ ನವಿಲಾಗಿ ಕುಣಿದಾಡಿದೆ!
ಎಲ್ಲಿ ಅವಿತಿದ್ದವೋ ಈ ನೆರಳುಗಳು,
ಸುತ್ತರಿದರೋ, ಸುತ್ತಿ ಮುತ್ತಿದ್ದರೋ,
ಮುತ್ತಿ ಮೆತ್ತಿದ್ದರೋ ಅಯ್ಯೊ
ಹಾಳು ರಂಡೇರೆಲ್ಲ ಮಿಂಡನನು ಕಂಡಂತೆ
ಹರಿತ ದೃಷ್ಟಿಗಳಿಂದ ಮೈತುಂಬ ಚುಚ್ಚಿದರು,
ಮೈತುಂಬ ಕಣ್ಣಹಾ!
ಇಂದ್ರನಾದೆ!
ಶೂನ್ಯ ಸಿಂಹಾಸನಕೆ ಜಾರುಗುಂಡಿಯ ಏಣಿ
ಜರಿದು ಬಿದ್ದೆ.
ಬಿರುಗಾಳಿ ಬಿಟ್ಟ ಮರದಂತೆ ಸುಮ್ಮನೆ ನಿಂತೆ,
ಕ್ಷಿತಿಜದಂಚಲಿ ನದರ ನೆಟ್ಟು ಕಿವಿಯಾಡಿಸುತ
ಒಳಲೊಟ್ಟೆ ಮೆಲುಕುತ್ತಿದೆ;
ಎಲ್ಲ ನೆನಪಾಗುತ್ತಿದೆ.

೨

ನಡೆಯಿನ್ನು. ನೆರಳ ಕಳಚಿ ಬತ್ತಲಾಗು.
ಕೆದರು ಎದುರಿನ ಎರೆಯ ಮಣ್ಣ; ಸಿಕ್ಕುವದೊಂದು ಸ್ವರ್ಣಗುಡಿ,
ಅಲ್ಲ; ಸ್ವರ್ಣದ ಕಳಸ. ಬಂಗಾರದಿಟ್ಟಿಗೆಯ ಗೋಡೆ,
ಮೂಡಣ ಬದಿಗೆ ಮುಚ್ಚಿರುವ ಬಾಗಿಲು. ಕೈ
ಇಲ್ಲದಿದ್ದರೊದೆ, ಕುವ್ವತ್ತಿದ್ದರೆ ಮುರಿ. ಮುಂದೆ ಹತ್ತಡಿತನಕ
ಕತ್ತಲಿದೆ, ಆಮೇಲೆ ಹೊಳೆಯುವುದು ಮಾಣಿಕ್ಯದಂಥಾದ್ದೊಂದು
ದೀಪ್ತಿ. ಆಗ ಭೂಮಿಗೆ ಲಂಬವಾಗಿ ನೆಟ್ಟಗೆ ನಿಂತು
ಮೂಗ ತುದಿಯಲ್ಲಿ ನದರ ನೆಟ್ಟು, ಆನಂತರವೆ
ತುಂಬು ಇಡಿ ಗುಡಿಯನು, ಇಡಿಯಾಗಿ ಆವರಿಸು, ಆಮೇಲೆ
ಅದಮೀರಿ ಹತ್ತಂಗುಲಕ್ಕೆ ಹಬ್ಬು. ಸುಸ್ವಾಗತ.

೩

ಕಾಲಿಟ್ಟ ಕಡೆಗೆ ಹಾವಸೆ ಬೆಳೆದ ಜವುಗುನೆಲ.
ನನ್ನ ನೆರಳುಗಳೆಲ್ಲ ಗೂಢ ಕತ್ತಲೆಯಾಗಿ ತಗ್ಗು
ಕಂದಕಗಳನ್ನು ನೀರು ಎಂತೋ ಅಂತೆ ತುಂಬಿರುವವಿಡಿ ಮನೆಯ.
ಕಾರಣಕ್ಕೊಗ್ಗಲಾರದೆ ರೂಪದಿತಿಮಿತಿಯ ತೆಕ್ಕೆಯಲಿ
ಸಿಕ್ಕಲಾರದೆ ಸುತ್ತಮುತ್ತ ಅಡ್ಡಾಡುವವು, ಥಿಕ್ಕಿ ಹೊಡೆದಾಡುವವು
ಮುದ್ದೆ ಮುದ್ದೆ. ಕಟ್ಟುವವು ಮುಕ್ಕಟ್ಟು ಕೊರೆಬೇಲಿಯಾಗಿ,
ರೋಮ ರೋಮದ ಕಣ್ಣಿ ಬೇರು ಬಿಳಲುಗಳನ್ನು
ಜಗ್ಗಿ ಎಳೆದಾಡುವವು ಅತ್ತಿತ್ತ.

ಎಳದೆಲ್ಲ ಸೆಳೆತಗಳು ತೆಕ್ಕಯೊಳಗಡೆ ಸಿಲುಕಿ
ಹರಳುಪ್ಪಿನಂತೆನ್ನ ಕ್ರೀಯೆವರ್ತನೆಗಳನು ನೀರಿಗರ್ಪಿಸಿ ನಿಂತೆ.

ಅವನ ಮಾತಿನ ಶೈಲಿ, ಇವನ ನಡಿಗೆಯ ಶೈಲಿ
ಅವನಿವನ ಧ್ವನಿ ಮತ್ತು ಕಣ್ಣ ಹೊಳಪುಗಳೆನಗೆ
ಇದ್ದಿದ್ದರೆಷ್ಟೊಂದು ಚೆನ್ನಾಗುತಿತ್ತು!

ತಿರಸುಗಣ್ಣಿಲೆ ನೋಡಿ ಮೂಡಿದ್ದ ಮುದ್ದೆಗಳ
ದಾರದಾಧಾರದಲ್ಲಿ ಪವಣಿಸಲೆ? ಧರಿಸಲೆ
ತೆವಿಯ ಮಸಿಯಿಂದ ಮೈತುಂಬ ಕಣ್ಣನು ಬರೆದು
ಅಲಾಬಿ ಹುಲಿಯಾಗಿ ಕುಣಿಯಲೆ?
ಬಚ್ಚಲದ ತೂತನ್ನು ಮುಚ್ಚಿ ನೀರನು ತುಂಬಿ
ಅಕ್ಷಿಯಂಥಾ ಮೀನ ಬಿಟ್ಟು ಗಾಳಾ ಹಾಕಿ ಹಿಡಿಯಲೆ?
ಒಡೆದ ಹರವಿಗೆ ನೂರು ತೂತುಗಳ ಮಾಡಿ
ತೂತಿನಲ್ಲೊಂದೊಂದು ರೋಮಾಂಚನವ ನೆಟ್ಟು
ಸುತ್ತಲು ಪ್ರದಕ್ಷಿಣೆ ಹಾಕಲೆ?
ಧರಿಸಲೇ? ಕುಣಿಯಲೇ? ಹಿಡಿಯಲೇ? ಹಾಕಲೇ? –
ಲೇ ಲೇ ಎಲೇ ನಿನ್ನ ಉಗುರು
ಬಂದೆರಗುವವು , ಒಳಗ ಗದಬಡಿಸುವವು, ಬಡ್ಡಿ ಬೇರುಗಳನ್ನು
ಹಿಡಿದು ಅಲುಗಾಡುವವು, ಮೇಲೆ ಸುತ್ತಾಡುವವು.

೪

ತಟ್ಟಿದಾಗೊಮ್ಮೊಮ್ಮೆ ಪಾತಾಳ ಗರುಡ
ಝುಮ್ಮುದಟ್ಟುವುದೆನಗೆ. ಮೈ ತೊಯ್ದು ಒದ್ದೆ.
ಅಪರೂಪ ಕ್ಷಣಗಳನು ಕಾಸುವಾಸೆ, ಕಾಸಿ ಸುಡುವ ಆಸೆ,
ಸುಟ್ಟು ಬೇಯುವಾಸೆ.
ಕಾರಹುಣ್ಣಿಮೆ ಹೋರಿ, ಹಾರು, ಮೀರು, ಕಾಲ್ಕೆದರು.
ಆಕಾಶದೆಳಬಿಸಿಲ ಮೈಸೋಂಕಿನಲ್ಲಿ ಧೂಳಿಕಣವೂ ಬಂಗಾರ!
ಮಣ್ಣ ಬಿಟ್ಟೆನೆಲ್ಲಿ ಹೊನ್ನು ಆಡಗಿದ್ದೀತು? ಮೀರು!

೧೯೭೫

# ತಕರಾರಿನವರು: ಮಾವೊತ್ಸೆ ತುಂಗನಿಗೆ

೧

ದುಷ್ಟಾ,
ನಿನಗ ಕೆತ್ತಿಸಿ ಬಡದೇನು ಗೂಟಾ,

ನಮ್ಮ ಭಾರತಾಂಬಿ, ರೂಪಾಯಗಲ ಕುಂಕುಮದಾಕಿ,
ಕೈತುಂಬ ಹಸಿರುಬಳೆ ಕುಪ್ಪಸದಾಕಿ,
ಒಬ್ಬರ ಕೈಬೆರಳಿಗೆ ಗುರಿಯಾಗದೆ ಮರ್ಯಾದೆಯೊಳಗೆ ಬಾಳಿದಾಕಿ,
ಮುಖದಗಲ ಪುರಾಣಗರತಿಯ ಸೆರಗು ತೂಗಿ ಕಣ್ಣು ಕಾಣಿಸದಾಕಿ,
ಎದೆಮಟಾ ಬೆಳೆದ ಮೀಸೆಮಿಂಡಾಳ ಕೋಟಿ ಕೋಟಿ
ಹೊಟ್ಟೆಗಳಿಂದ ಅವ್ವಾ ಅನ್ನಿಸಿಕೊಂಬಾಕಿ,
ಗಂಗೆ ಗೌರಿಗೆ ಅಕ್ಕ ಇಲ್ಲವೆ ತಂಗಿ.
ಬೆಂಕಿಗೆ ಖಾಸಾಪುತ್ರಿ
ಯ ಮೇಲೆ ಕಣ್ಣುಹಾಕಿ ಬಾಯೀ ಅಂದಿ.
ಬಂದಿ.
ಕುಂತಿ.
ಆಸುಪಾಸು ನೋಡಿ ಮುಸಿಮುಸೀ ನಕ್ಕಿ; ಮೀಸೆಯ
ಧಿಮಾಕಿನಲ್ಲಿ ದೇಶಕಾಣದೆ ಕೈಮಾಡಿ, ಹಾಡಾಹಗಲೆ
ಮೈಮ್ಯಾಲೆ ಏರಿಬಂದಿ.
ಕಾಸಾ ಗಂಧರ್ವಪತಿಗಳ ಸಿದ್ಧಿಪ್ರಸಿದ್ಧಿ ಮಿಂಡಭಂಡತನಗಳ
ಮರತಿ.
ಗರತಿಯ ಬಯಸಿದ ದುರುಳ ಕೀಚಕ
ಏನಾದ ಏನಾದ ಏನಾದನೋ
ಮೂಢಾ, ಗೊತ್ತಿದ್ದರ ಬಾಯಿ ಬಿಡತಿ;
ಇಲದಿರಕ ಹೇಳು, ಕಳಿಸುವೆನು
ಸಪ್ರೇಮ ಕಾಣಿಕೆಯಾಗಿ ಭಾರತ ದ ಕ್ಯಾಲಿಕೊ ಪ್ರತಿ.

೨
ತಡಿ, ಬರಲಿ ಅಮೆರಿಕದ ಯಾ ರಶಿಯದ ಬಿಳಿಗೋಧಿ
ವೃಕೋದರ ತುಂಬಿ ಮಾಡುತ್ತೇನೆ ಮದಿವಿ.
ನಿನ್ನದೊಂದು ಮೂವೀ ಮಾಡಿ, ಜರಿರುಮಾಲು ಧಡಿ
ದೋತರ, ಮುಂಗೈಗೆ ಮಲ್ಲಿಗೆ ಮಾಲೆ ಸುತ್ತಿ,
ಖಳವಿಟನಾಗಿಸಿ, ಸೂಳೆಗೇರಿಯ ಹೋಳಿಹುಣ್ಣಿಮೆಯಲ್ಲಿ
ನಿಂದ, ನೆರೆದ, ಬಂದ, ಬರುವ ಗರತಿಯರ ಮುಂಗೈಗೆ
ನಿನ್ನ ಮಸಡಿಯನೊಡ್ಡಿಸಿದರೇ ಹೌದೆನ್ನು.
ನಿನ್ನ ಪ್ರತಿಮೆಯ ಮಾಡಿ
ಕತ್ತೆಯ ಬಾಲಕ್ಕೆ ಡಬಡಬ ಡಬ್ಬಿ
ಗೆ ನಿನ್ನ ಕಟ್ಟಿ ನಾವು ಹುಡುಗರು ಯೂನಿಫಾರ್ಮಿನಲ್ಲಿ
ಧಿಕ್ಕಾರ ಮೆರವಣಿಗೆ ಹೊರಟು, ಲಬೊಲಬೋ ಹೊಯ್ಕೊಂಡು
ಊರು ಕೇರೀ ತಿರುಗಿ, ಹೊಲಗೇರಿಯಲ್ಲಿ ಸುಟ್ಟು, ಬೂದಿಯ
ನದಿಗೆರಚಿ, ಈ ದೇಶದ ನೀರು ನೆಲ ಹಳದಿಯಾಗಿಸಿದರೇ ಹೌದೆನ್ನೋ

ಮೂಢಾ –
ನನಗಿಂತ ಧಡ್ಡಾ.

೩

ಕುಶಲದ ನಾಲ್ಕು ಮಳೆಬೆಳೆ ಮಾತಿವೆ ನನಗು ನಿನಗು.
ಕೈಕೈ ಮಿಲಾಯಿಸಿ ಇಕಾ ಮಾತು ಕೊಟ್ಟಿದ್ದೇನೆ ನಂಬು;
ಇದ್ದಾರೆ ನಮ್ಮಲ್ಲೂ ಹಾಲುಮತದ ಹುಂಬರು
ನಿನ್ನ ನಾಮದ ಬಲದಿಂದಲೇ ತಗ್ಗುದಿನ್ನೆಗಳ ಪಿಡಬ್ಲ್ಯೂಡಿ ಮಾಡಿ
ಹಾಲು ಹರಿಸಿ ಸಮನಾಗಿಸೇವೆಂಬ ನಂಬಿಕೆಯವರು.
ಸಮನಾದರೆ ಬರುವ ಮಳೆ ಬಂದಾವು ಹೆಂಗ?
ಹಸಿರು ಬೆಳೆದಾವು ಹೆಂಗ?
ಸರ್ಕಾರಿ ಕೋಗಿಲೆ ಹಾಡ್ಯಾವು ಹೆಂಗ?
ಈ ಹೆಂಗದ ಹಂಗಿರಲಯ್ಯ –
ಛತ್ತಿಸಕೋಟಿ ದೇವರು ತಿಣುಕಿ ಬಾರದ ಬಲ ನಿನ್ನ
ನಾಮಕ್ಕಿದೆಯೇ? ಅದಕ್ಕೇ ಹೇಳುತ್ತೇನೆ ಬಚ್ಚಾ
ನೀ ಇನ್ನೂ ಅಕ್ಕಲ್ ಕಾ ಕಚ್ಚಾ

ನೀ ಬರುವ ಮೊದಲೇ ಠರಾವು ಪಾಸುಮಾಡಿ
ತೆಗೆದುಹಾಕಿದ್ದೇವೆ ಊರುಹೊಲಗೇರಿಗಳ ನಡುವಿನಂತರ.
ಪತ್ರಿಕೆಯಲ್ಲಿ ಸುಪ್ರಸಿದ್ಧವಾಗಿದೆ ಹೊಲಗೇರಿ ಗುಡಿಸುವ ನನ್ನ ಚಿತ್ರ.
ನನ್ನ ಉರ್ಫ್‌ನಾಮೆಯೇ ಸಮನ್ವಯಸಿದ್ಧ.
ಇಷ್ಟೆಲ್ಲಾ ಯಾಕೆಲಾ? ಹೊಲ ನೋಡು:
ಬೆಳೆದಿದೆ ಭರ್ತಿ ಗರಿಗರಿಹಾರಿ ಹೈಬ್ರಿಡ್ ಜೋಳ!
ಹುಡುಕಿದರೆ ಗ್ಯಾರಂಟಿ ಸಿಕ್ಕುವವು ನಿನ್ನ ಬೀಜಕ್ಕೂ ಬೆಳೆದ ಕಾಳು.
ದಿನನಿತ್ಯ ಕಸಿಮಾಡಿ ಹುಟ್ಟಿವವಿಲ್ಲಿ ಅಸಲುಕಲಮಿನ
ತಾಜಾತಳಿ: ಏಕಕ್ಕೆ ಅನೇಕ, ಅನೇಕಕ್ಕೆ ಏಕ;
ಭಾವಾನುಭಾವ ಸಂಚಾರಿ ವಿಭಾವಾದಿಗಳ ಭಾವೈಕ್ಯ; ಬಿಸಳಬಾಜಿ!
ಈಗಾದರು ತಿಳಿಯಿತಿಲ್ಲೋ ಏ,
ಹಳಸಿದ ಮಿಸಳಿಗೆ ಮೂಗಮುರಿಯುವ ಚೆದುರಾ,
ನನ್ನ ಹೆಸರಲ್ಲಿರುವ ನಿನ್ನ
ಹೆಸರಿನಕ್ಷರ ಗುರುತಿಸದ ನಿರಕ್ಷರಾ.

೪

ನಜರಿನ ಹುಜುರಿನಲ್ಲಿ ಎಲಿಯಡಿಕೆ ಹಿಡಿ, ಸೆಡ್ಡು ಹೊಡಿ,
ಕಾಲು ಕೆದರು; ವೀರರೊಪ್ಪೋ ಮಾತು, ಹೌದಂದೇನು.
ಅಡಿಕೆ ಹಿಡಿಯೋದು ಬಿಡೋದು ನನ್ನ ಜವಾಬ್ದಾರಿ.

ಏನು ಮಾಡೋದಪ್ಪಾ ಗುಂಡಿನೊಂದಿಗೆ ಸಂಭಾಷಿಸಿದವ.
ಕಲಿಕಾಲ, ಅಜ್ಞಾತವಾಸದ ಅವಧಿ,
ಬನ್ನೀಮರದ ಹೆಣದ ಕಾವಲಿನಲ್ಲಿ ಗದೆ ಭದ್ರವೆನ್ನಲೇ
ಹೆಣವೆದ್ದು ತಪ್ಪಿಸಿಕೊಂಡೋಡಿ, ಹಿಡಿದು ಕೊಟ್ಟವರಿಗೆ
ಬಹುಮಾನವೆಂದು ಜಾಹೀರಾತಿಸಿದರೆ, ಅದನೋಡಿ,
ಓದಿ ತಿಳಕೊಂಡವನು ನನ್ನ ಬಿಟ್ಟೆನ್ಯಾರಂದಿ?
ಮರೆತುಹೋಗಿದೆ ಮರದ ಗುರುತು. ಅಂತೆಯೇ
ಗುಬ್ಬೀಕಂಪನಿಯ ಗಂಧರ್ವನ ಹೆಸರು ಕದ್ದದ್ದು,
ಹೆಂಡರ ಮಿಂಡರಾಗುವುದಕ್ಕೆ ಕಲಿತದ್ದು, ಅದಕ್ಕೇ
'ನಿಮ್ಮ ಹೆಂಗಸರ ಹಣೆಯ ಕುಂಕುಮದರ್ಥವೇನೆಂದೂ'
ಯಾ ವಿದೇಶಿ, – ನೀ ಬಿಡು ನಮ್ಮ ಪೈಕಿ, – ಕೇಳಿದರೂ,
ನಾ ಯಾಕೆ – ಹುಡುಗರಿಗೂ ಸಿಟ್ಟು ಬಾರದೆ ಇದ್ದದ್ದು.
ಇದ ತಿಳಿದು ನೆರಳಿನೊಂದಿಗೆ ಹೋರುವ ಛಲ
ಬಿಟ್ಟೆಯೋ – ಗೆದ್ದೆ.
ಇಲ್ಲವೋ ನಾ ಅಲ್ಲ; ನೀ ನೀನೆ ಮೂರು ಬರೆ ಕೆಟ್ಟೆ.

೧೯೬೯

# ತಕರಾರಿನವರು: 'ಋಷ್ಯಶೃಂಗ' ನಾಟಕದ ಹಾಡುಗಳು

## ಒಂದು

ನಾ ಕುಣೀಬೇಕ ಮೈಮಣೀಬೇಕ ಕಾಲ್ದಣೀಬೇಕ ತಾಯಿ!
ನವಿಲಿನ್ಹಾಂಗ, ಎಳಿ ಮಣಿಕಿನ್ಹಾಂಗ, ತಿರತಿರಗಿಧಾಂಗ ಬಗರಿ!
ತೊಡೀ ತೆರೆದು ತಲಿ ಬಿಚ್ಚಿ ಕೈಯ ಎದಿ ಮಿದುವಿನಾಗ ಹುಗದು,
ಬಗಲ ಬೆವತು ಅಹ ನಾರಬೇಕ ಗಿಜಗಳಿಕಿ ಸಿಂದಿಹಣ್ಣು.

ಕಾದ ತಗಡ ಈ ತೊಗಲಿನಾಗ ಹೊತ್ತೇತಿ ಕಾಡಬೆಂಕಿ
ಸಂದಿಗೊಂದಿ ಬುಗುಬುಗು ಅಂದು ತಲಿಗೂದಲುರಿಯ ಜ್ವಾಲಿ
ಸುಡಸುಡಃ ಇಂಥ ಈ ಸಪ್ಪ ಬಾಳಿ ನಿಂತೇನ ದೀಪಕಂಬ!
ಬಣ್ಣಬಣ್ಣದ ನೆರಳ ತಿರಗತಾವ ಊರ ಕೇರಿ ತುಂಬ.

ಕಣ್ಣ ಕಾಡಿಗೀ ಕೆನ್ನಿಗಿಳಿಧಾಂಗ ಮೂಡತಾವ ನೆನಪ.
ಕೌದಿಯೊಳಗ ಹುಡಿಕ್ಯಾಡತೇನ ಹೊಳ್ಯಾಡತೇನ ಮತ್ತ
ಜೋಡನಾಗರಾ ತಿಡೀ ಬೀಳತಾವ ಕನಸಿನಾಗ ಬಂದಾ;
ಏನಾಡತಾವ ತಳಕ್ಯಾಡತಾವ ರೆಂಟೀಯ ಸಾಲ ಹಿಡದಾ.

ಬೆವರ ಆಗಿ ಹರಿದಾಡತೇನು ಇಡಿ ಹೊಲಾ ತುಂಬಿಕೊಂಡಾ
ಹಸಿಗೆ ಹಸೀ ಬೆರೆತಾಗ ಅಯ್ ಶಿವನ ಏಳತಾವ ನವಿರಾ!
ಬೆಳಿ ಏಳತೈತಿ ತೆನಿಗೊಂದ ಹಕ್ಕಿ ನಗತಾವ ಒಂದಸವನಾ
ಕಣ್ಣ ತೆರೆದರೇನೈತಿ ಹಾಳು ಮುದಿರಾತ್ರಿ ಮಗ್ಗುಲಾಗ!

ಕಡೀಬೇಕ ಅಹ ಕಚ್ಚಬೇಕ ಹಿಂಗಪ್ಪಬೇಕೊ ನಾನಾ
ಗಿಣಿ ಹಣ್ಣಿಗೀ ಜೋತು ಬಿದ್ಧಾಂಗ ಎಳೀಬೇಕೊ ನಿನ್ನಾ
ತೆಕ್ಕಿಮುಕ್ಯಾಗ ನೆಗ್ಗಬೇಕೊ ಮೀಸಲದ ಮಿಂಡ ಬಾರೊ
ಮಿಂಡಿ ಬಿದಿರ ನಿಂತೇನೊ ತೆರದು ಬಿರುಗಾಳಿಯಾಗಿ ಸೇರೋ

ನಿನ್ನ ಬಸವಿ ಬಸವಳಿಯತೇನೊ ಬಾ ಮೀಸೆ ಹೊತ್ತ ಧೊರಿಯೆ
ಎಲ್ಲೆಲ್ಲಿ ಹಿಡದರಲ್ಲಲ್ಲಿ ಬೆಣ್ಣೆ ಕರಗುವೆನೊ ತೋಳಿನೊಳಗೆ
ಕೋಳಿ ಒಣಗೀಯ ಹೋಳಿನಂಥ ತುಟಿಗಲ್ಲ ಕಡಿಯೊ ಗೆಣಿಯಾ
ಘಾಸಿಯಾಗಿ ಕನಸಿನಲಿ 'ಮಾವಾ' ಅನ್ನುವೆನೋ ಮೀಸಲೊಡೆಯ!

ಹಾಳಬಾಂವ್ಯಾಗ ನೀರ ಸೆಲೆ ಝುಮ್ಮಂತ ಒಡೆದು ಬರಲಿ
ಕೆಳಗ ಹಾಕಿ ನೀ ಕುಟ್ಟೊ ನನ್ನ!
ಏ ನಾದೊ ನನ್ನ
ಲೇ ಮಾಡೊ ಜಿಬ್ಬಿಜಿಬ್ಬಿ!
ಅಲ್ಲಿತನಕ, ತೊಡಿ ಬೆವರುತನಕ ನವಿರೇಳುತನಕ, ತೆನಿ ಮೂಡುತನಕ
ನಾ ಕುಣೀಬೇಕ ಮೈ ಮಣೀಬೇಕ ಕಾಲ್ ದಣೀಬೇಕ ತಾಯಿ
ಹುಚ್ಚಿಯ್ಹಾಂಗ, ಮೈ ತುಂಬಿಧಾಂಗ ಬೆದಿಮಣಿಕಿನ್ಹಾಂಗ ಆಗಿ!

## ಎರಡು

ಅಪ್ಪಾ ಸೂತ್ರಧಾರ ಕೇಳೊ ಕನಸ ಕಂಡಿನೆ
ಸುಖದ ನೋವ ಸದ್ದಮಾಡಿ ಹೆಂಗ ಹೇಳಲೆ ||ಪ||

ಬೆಳ್ಳಿ ತೊಡಿಯ ಬಿಳಿಯ ಕುದುರಿ ಬೆರಗ ಕಂಡಿನೆ
ಬೆನ್ನನೇರಿ ಚಿನ್ನದುರಿಯ ಕಾಡ ಕಂಡಿನೆ ||

ಅಯ್ ನನ ಶಿವನ ಆರ್ಯಾಣದಾಗ ಅರಳಿ ಶಿರಸಲ
ಎಲ್ಲಿ ಕೈಯ ಹಾಕಲಲ್ಲಿ ಗೊಂಚಲ ಗೊಂಚಲ ||

ಹಿಂದ ಮುಂದ ತಂಪಗಾಳಿ ತೀಡಿ ಸಳಸಳ
ಚಿನ್ನ ತೊಡಿಯನೂರಿ ಸುರಿಸೇನ ಹೂವ ಬಳಬಳ ||

ಹೂವ ಕರಗಿ ಕೆಂಪ ನೀರ ಕೆರಿಯ ಕಂಡಿನೆ
ಯೋಳ ಹೆಡಿಯ ಕಾಳ ನಾಗ ದೊರೆಯ ಕಂಡಿನೆ ||

ಸಂದಿಗೊಂದಿ ಬೆಂಕಿ ಹಚ್ಚಿ ಹೆಡಿಯ ಚುಚ್ಚಿದಾ
ಮೈಯನೊಟ್ಟಿ ಮೆಟ್ಟಿ ತುಳಿದು ಮುದ್ದಿ ಮಾಡಿದಾ ||

ಬಳಸಿ ಆಗುಮಾಡಿ ಸಾಗಿ ಸಂದು ಹೋದನೋ
ಸುಖದ ನೋವ ಎದಿಗಿ ನಟ್ಟು ದಾಟಿ ಹೋದನೋ ||

## ಮೂರು

ಬಿಟ್ಟಂಥ ಬೇರ ಹರಿದಾವ | ಕೂಸ ಚೀರ್ಯಾವ
ಮುಗಲ ನೋಡ್ಯಾವ | ಮಣ್ಣ ಬಗದಾವ |
ಖೂನ ಗುರುತ | ಎಲ್ಲಾಪಾಕ ಮರತ ತಿರಗ್ಯಾವ ಸುತ್ತಮುತ್ತಾ ||

ಮೈಮ್ಯಾಗ ಬರಿಯಲೇನ ಗೆರಿ | ಯೋಳಪಟ್ಟಿ ಕರಿ
ಗೆರಿಗೊಂದ ಗಂಟ | ಗಂಟೆಗೊಂದ ತೂತ |
ತೂತಿಗೊಂದ | ಕಣ್ಣಮಾಡಿ ನೋಡಲೇನ ಬಿಳಿ ಮೋಡಾ ||

ದೂರ ದೂರ ಹಸರ ಹಾರೇತಿ | ಹಸಿ ಸರದೈತಿ
ಬಾವಲಿ ಜೋತಾವ | ಹದ್ದ ಹಾರ್ಯಾವ
ಕಣ್ಣ ಮುಚ್ಚಿ | ದಾನೊ ಒಳಗ ದೊರಿ ಜರಾ ಕಣ್ಣ ತೆರಿ ||

## ನಾಲ್ಕು

ಏ ಕುರುಬರಣ್ಣಾ | ಸತ್ಯುಳ್ಳ ಶರಣಾ
ಕಾಪಾಡೊ ಕುರಿಗಳನಾ |
ಮಾಡುವೆ ನಮನಾ ||ಪ||

ಅರಿಯಬಾರದ ಅರಸ ಒಳಗೆ ಬಾರದೆ ಕುಳಿತ
ಒಳಹೊರಗ ಆದಾವೊ ಹೊರತ
ಹೊಳಿದ ಹೊಲಿಗಿಯ ಭೇದ ಗೊತ್ತಿಲ್ಲದಾದೆವೊ
ಮರತೇವು ದೊಡ್ಡಿಯ ಗುರುತ
ಕಳಕೊಂಡು ಹಳಹಳಿಸಿ ತಿಳಿಯದೆ ತಿರಿಗೇವ
ಮತಿಗೆಟ್ಟು ಮರುಳಾದೆವಣ್ಣಾ ||

ಒಳಗ ಗದ್ದಿಗಿ ಮ್ಯಾಲ ಹುಲಿ ಬಂದ ಕುಂತಾವ
ತಳಕಿತ್ತು ಓಡದಿರೊ ಧೀರಾ
ಪ್ರಳಯಕ್ಕೆ ಹೊರತಾಗಿ ಹೊರಗ ಹೆಂಗರೆ ಉಳಿವಿ
ಕಾರ್ಯಕಾರಣಕಾದ ವೀರಾ
ನಮ್ಮೊಳಗ ನೀನಡಕ ನಿನ್ನೊಳಗ ನಾವಡಕ
ಬಿಟ್ಟರೇನಿದೆ ಬರಿಯ ಬಣ್ಣ ||

ಕಂಡ ಕಂಡವರಿಗಿ ಕೈಮುಗದ ಕೇಳೇವ
ಕಂಡೀರೇನರಿ ನಮ್ಮ ದೊರಿಯ?
ಬಿಳಿಯ ಹೊಳಪಿನ ಯಕ್ಷಿ ಕ್ಷಿತಿಜದಂಚಿನ ಬೆಳಕ
ಕಣ್ಣೊಳಗ ಕುಕ್ಕಿದಳಯ್ಯ
ಅಕ್ಷಿಯೊಳಗಡಗಿರುವ ನಿಕ್ಷೇಪವೇ ಬಾರ
ಅಳಿಸೊ ಉಳಿಸುವ ಹಕ್ಕಿನಣ್ಣ ||

## ಐದು

ಹೊಯ್ಯೊ ಹೊಯ್ಯೊ ಮಳಿರಾಯ
ಹೊಯ್ಯೊ ಹೊಯ್ಯೊ ರೇ ||ಪ||

ಈಗ ಬರತೇನಂತ ಹೇಳಿ ಹೋದವನೆಲ್ಲಿ
ನೀ ಎಲ್ಲಿ ನಿನ್ನ ಹಾದೆಲ್ಲಿ |
ನೆಲ ಬಿರಿತು ಪಾತಾಳ ಬಿಸಿಯುಸಿರ ಹಾಕೀತು
ಹಸಿರೆಂಬೊ ಶಬುದ ಮರೆಯಾಗಿ |
ಮರುಗುವ ಮಣ್ಣಿನ ಮೈಯಾನ ಹಸಿ ಆರಿ
ತೊಡಿಯ ಬೆಂಕಿಯ ಮರೆತಿ ಮಳೆರಾಯಾ
ಸುರಿಯೊ | ಪಾತಾಳ ತುಳುಕಲಿ ಮಳೆರಾಯಾ ||

ಕೆರಿ ಬಾವಿ ತಳ ಒಣಗಿ ಬರಿ ಮೂರ ಹನಿ ನೀರ
ಒಂಟಿ ತಾರಿಯ ನೆರಳ ಮೂಡ್ಯಾವ |
ಹೆಚ್ಚೀನ ಹೊಳಿಗsಳು ಬರಿ ಬಚ್ಚಲಾದಾವ
ಮರಿಮೀನ ಹೊಟ್ಟೀಯ ಹೊಸದಾವ |
ಮೈ ತೊಗಲ ಕಪ್ಪಾನ ಕಂಬಳಿ ಮಾಡೇವ
ಗುರಚೀಯ ತಿರಿಗೇವ ಮಳಿರಾಯ
ಸುರಿಯೊ | ಪಾತಾಳ ತುಳುಕಲಿ ಮಳೆರಾಯಾ

ಆರು

ಹಾರಿ ಹಾರೈಸುವೆ
ಹಲವ ಹಂಬಲಿಸುವೆ
ತೋರೆಲೊ ಕರುಣಾ | ಬಾರೊ ಮೋಹನಾ ||ಪ||

ಹೊಕ್ಕು ಹೊರಬಂದಂಥಾ ಅರಳು ಮಲ್ಲಿಗಿ ಹೂವ
ಮದಾ ಮೂಸಿ ಕೈ ತುರಿಸಿ ಉರುಪ ಹೆಚ್ಚಿಸದಾವ
ನನ್ನ | ನುಡುವ ತೊಡುವಂಥ ಶ್ರೀಮಂತ |
ಏ ಧೀಮಂತಾ | ಹಾ ದೊರೆಯೆ

ಲಜ್ಜಿ ನಾಚಿಕಿ ಮಾನಾ ಕಳಚಿ ಬರಿಮೈಯಾದೆ
ನೆನಪಾಗಿ ಸರ್ವಾಂಗ ಗುಡಿಗಟ್ಟಿ ನಿಲ್ಲುವೆ
ಹೊಟ್ಟಿ | ಬಗಿದು ಒಳಗಿಟ್ಟುಕೊಳ್ಳುವೆನೊ
ನವಿರೇಳುವೆನೊ | ಹಾ ದೊರೆಯೆ

ಎಸಗುವ ಎಸಕದ ಹೆಸರ ಗೊತ್ತಿರದಾವ
ಉಲಿದುಲಿದು ನಿಂತಲ್ಲಿ ಸಂತೀಯ ಮಾಡಾವ
ಇಂಥಾ | ಮಾತಿನ ಪಾತಕವ್ಯಾಕೊ |
ಎಂಜಲ ಬದುಕೊ | ಹಾ ದೊರೆಯೆ

ಎಡವೀದಂಥಾ ಗೊತ್ತ ಮರೆತು ಅರಸುವಿಯತ್ತ
ವಾಕಿನಿಂದಲೆ ವಸ್ತು ಹಿಡಿವೆನೆಂಬುವುದೆತ್ತ
ನಿನ್ನ | ಸಂದೇಹದೊಳು ದೇಹಾ ಮರತಿ |
ದೇಹಾ ಮರತಿ | ಹಾ ದೊರೆಯೆ

ಚರ್ಮ ಸ್ಪರ್ಶಕೆ ಒಳಗೊ ಸ್ಪರ್ಶ ಜರ್ಮಕೆ ಒಳಗೊ
ಚಕಮಕಿ ಕಿಡಿಯೊಳಗ ನನ್ನ ನಿನ್ನಯ ಅರಿವೊ
ಹುಟ್ಟಿ | ಹೊಂದಿ ಬಂದೇವೊ ಈ ಶಾಪ |
ಬಿಡದ ಶಾಪ | ಹಾ ದೊರೆಯೆ

## ತಕರಾರಿನವರು: ಗಂಗಾಮಾಯಿ

ಕೆಂಪಾನ ಕೆಂಪುಗುಡ್ಡ, ಬೆಳ್ಳಾನ ಬಿಳಿಗುಡ್ಡ ಒಡಮುರಿದು ಕೂಡಿದ
ಒಡ್ಡಿನಲ್ಲೇ ನಮ್ಮೂರ ಕೆರೆ; ಹೆಸರು ಗಂಗಾಮಾಯಿ.
ಮೂರು ಬದಿ ಮರಗಿಡ ಕಂಟಿ ಸಸ್ಯಕೋಟಿಯ, ಹೊಕ್ಕವನು
ಹೊರಬರದ ಏಳುಸುತ್ತಿನ ಕೋಟೆ. ಒಳಗಡೆಯಲ್ಲಿ ನಾಯಿ ನರಿ
ಹಂದಿ ಶುಕಪಿಕಾದಿಯ ಚೌರ್ಯಾಂಸಿ ಲಕ್ಷ ಕೀಚು ಕಿರಚು.

ಅದಕದಕ್ಕೆ ಅದರದರ ಪಾಲಿನ ಗಾಳಿ ಮಳೆ ಬೆಳಕು, ಮೆಳೆ
ಪೊದೆ ಹಸಿರು ಆಹಾರ ಭಯ ನಿದ್ರೆ ಮೈಥುನಾದಿಗಳು.
ದಡದ ಗಿಡಗಳ ನೆತ್ತಿ ಜೋತ ಬಾವಲಿಹಿಂಡು
ನೀರಿನೆದೆಯಲ್ಲದರ ವಕ್ರ ನೆರಳು.
ತಲೆತಲಾಂತರದ ಹೊಲೆತೆಪ್ಪ ನೊಣ ನೊರಜು ಕೀಟಗಳ ಸದಾ
ಸಂಚಾರ, ಕೊಡುಕೊಲ್ಲು ವ್ಯವಹಾರ, ದರ, ನಿರಾತಂಕ.
ತಂಗಾಳಿ ಸುಳಿಯದ, ದೊಡ್ಡ ತೆರೆ ಮೂಡಿ ಮುಳುಗದ,
ಹರಿಯುವುದಕ್ಕೆ ದಿಕ್ಕಿಲ್ಲದ ನೀರು ಹಳೆಮರದ ಬೇರುಗಳಲ್ಲಿ,
ಊರಿನ ಗಟಾರು ಮೋರಿಗಳಲ್ಲಿ,
ಏಡಿಮಣ್ಣಿನ ಗೋಲ ಬಿಳಿಗುದ್ದಿನಲ್ಲಿ ಪಿಸುನುಡಿಯುವದು.

ಮೂಡಣದ ಮುದಿಕುರುವೊಡೆದು ನೆತ್ತರು ಕೀವು ಸೋರಿತೋ, –
ಸುರುವಾಯ್ತಿಲ್ಲಿ ಚಲನೆ: ತೆರೆಯ ಮಿಡಿನಾಗರಗಳೆದ್ದು
ಮುರಿದಾಡಿ, ಮಣಿದು ಹೊಡಮರಳಿ, ತಳಕು ಬಿದ್ದಾಡಿ ಮೂಡಿದ್ದ
ಬಾವಲಿಹಿಂಡು ಗೆರೆಗೆರೆಯಾಗಿ ಹಂಚಿ ಹಲವಾರಾಗಿ, ಸುಕ್ಕುಗಟ್ಟಿ
ಸುತ್ತುವವು. ರಾಡಿ ಗಿಜಿಗಿಜಿ ಕೆಸರು ನೀರಿನಲ್ಲಿ ಅಂಗಾತಾಗಿ
ತೇಲುವ ಚೆಳಿಮಿಳಿ ಮೀನ ಹೆಕ್ಕಿ ತಿನ್ನುತ್ತ ತಿರುಗುವವು
ಒಂಟಿಗಾಲಿನ ನೂರೆಂಟು ಬಕ. ತೊಡಗುವರು ಮಂದಿ ಈ
ನೀರ ಬಳಸುವುದಕ್ಕೆ: ಕುಡಿಯುವುದಕ್ಕೆ, ಮೀಯಲಿಕ್ಕೆ, ದನದ
ಸೆಗಣಿ ಮೈಗಂಜಳ ತೊಳೆಯಲಿಕ್ಕೆ, ನಮ್ಮಪ್ಪ ಬೀರಪ್ಪನ ಪಾದ
ಪಡಕೊಳ್ಳಲಿಕ್ಕೆ, ಹಡದವ್ವ ಕರ್ರೆವ್ವನ ಕರಿಮೈ ಎರೆಯಲಿಕ್ಕೆ,
ಹೊರಕಡೆಗೆ, ಹೇಲುಚ್ಚೆಗೆ, ಬೋಳಿಯರ ಮಡಿ ಒದ್ದೆಗೆ,
ಭಟ್ಟರಾಚಮನಕ್ಕೆ, ಅದಕ್ಕೆ ಇದಕ್ಕೆ ಎದಕ್ಕು.
ಒಟ್ಟು ಖರ್ಚಾದ ಕೆರೆನೀರು ಬಚ್ಚಲದಿಳಿಜಾರಿನಗುಂಟ ಹರಿದು
ಕೆರೆಗೇ ಸೇರುವ ದಿನನಿತ್ಯದ ವ್ಯವಹಾರ, ಈ ಕೆರೆಯ ಚಮತ್ಕಾರ.

ಇದಕ್ಕೂ ಇವೆ ಹಳ್ಳಿ ಹಾರುವರು ಚಂಡಿಕೆಯಂತೆ ಹೊಸೆದ
ಗಂಗಾಷ್ಟಕ, ಶತಕ, ಲಹರಿ, ಸಹಸ್ರನಾಮಾವಳಿ, ಸ್ಥಳಪುರಾಣಗಳು:
ಹಳೆದೇವರ ಜಡೆಯ ಜಿಡ್ಡು, ಮುನಿತೊಡೆಯ ಕಿಲುಬು,
ಕಿವಿಯ ಪಿಸುರು ತೊಳೆದು ಮಡುಗೊಂಡವಳೀ ಗಂಗಾಮಾಯಿ.
ಅಂತೆಯೇ ಬರುವಾಗ ಉಡಿತುಂಬ ತಂದಳು ತಾಯಿ: ಆ
ಸೀಮೆಯ ಪವಿತ್ರ ಕೆಸರುಸುಕು ರೋಗಾಣು,
ಹಗ್ಗಕ್ಕೆ ಹಾವೆಂಬ ಭಯ,
ಕಾಂಬ ಕಣ್ಣಿಗೆ ಮಾಯದ ಕನ್ನಡಿಯ.
ಘನಮಹಿಮಳು ತಾಯಿ, – ತಾಮ್ರದ ದುಡ್ಡನದ್ದಿದ ತಕ್ಷಣವೆ
ಕಿಲುಬಿಸುವಾಕೆ; ಬೆಳಗಿದರೆ ಬಂಗಾರ ಇಲ್ಲವೆ ಅಂಥ ಭ್ರಮೆಯ
ಹುಟ್ಟಿಸುವಾಕೆ. ಬಂಗಾಲದ ಜಾದುಗಾರರಿಗೆ ಬಾಣಂತಿಯ ಕೈ

ಒದಗಿಸಿದಾಕೆ; ಮೂರೇ ಗುಟುಕಿಗೆ ಬಂಜೆಯರ ಗರ್ಭ
ಗಟ್ಟಿಗೊಳಿಸಿದಾಕೆ
ಕಲಿವ ಹುಡುಗರನ್ನು ಸೈಕಲ್ ಸಮೇತ ಹೊಟ್ಟೆಯೊಳಗೆ
ಅಟ್ಟಿಸಿಕೊಂಡಾಕೆ. 'ಏಸು ನಡೆದದ್ದು ಇದೇ ನೀರಿನ ಮೇಲೆಂದ'
ಪಾದ್ರಿಗೆ ಹೊಲತಿಯ ಮೈತುಂಬಿ ಹೌದೆಂದಾಕೆ.

ಇದರಾಳ ನಿರಾಳ ಅತಳವಿತಳ ಪಾತಾಳ ರಸಾತಳದ
ಒಳಗಿನೊಳಗಿನ ತಳ. ಕಲ್ಲುಮಣ್ಣಿಲ್ಲ – ಹಾಗಂದವನ ಬಾಯಿಗೆ
ಬುಚು ಬುಚು ಹುಳ ಬೀಳ – ಮುತ್ತುರತ್ನದ ಹೇರಳ ರಾಶಿ
ಇದರ ತಳ. ಇಲ್ಲಿಗೂ ಇಳಿದವರು, ನಾಗಿನಿಯರ ಬಳಸಿದವರೆಂಬ
ಖ್ಯಾತಿಯವರು, ನಾಕೈದಾರು ಜನ, ನಮ್ಮೂರವರೆ, ಕಲ್ಲುದೇವರಾಗಿ,
ಲಾವಣಿಗೆ ಕಥೆಯಾಗಿ, ಹಬ್ಬ ಹುಣ್ಣಿಮೆಗೊಮ್ಮೆ ಪೂಜೆಗೊಳ್ಳುತ್ತಾರೆ.
ಕಂಠಮಟ ಮುತ್ತುರತ್ನಾದಿಗಳನೊತ್ತೊತ್ತಿ ತಿಂದ ಪಾಪ
ಚಿಳಿಮಿಳಿ ಮೀನು, ದಕ್ಕಲಾರದೆ ಸತ್ತು ತೇಲುತ್ತವಂತೆ.
ಅಂತೇಯೇ ಒಂಟಿಗಾಲಿನ ಬಕವಾಗಿ, ಬಕದ ಬಾಯಾಗಿ,
ಬಾಯ ಜೊಲ್ಲಾಗಿ ಸುರಿಯುತ್ತಾರೆ ಜನ ಹಗಲು ರಾತ್ರಿ.

ಸದ್ಯ ಹಾದರದ ಕೂಸುಕರ್ಣರಿಗೆ, ಅದನೊಪ್ಪದ ಪುಕ್ಕರಿಗಿದು
ಆಶ್ರಯಸ್ಥಾನ, ಇದು ಖರೆ. ಇಂಥಾ ಮಂದಿ, ಇರುತ್ತಾರಲ್ಲ
ಗೋರಿಗೆ ದಿಕ್ಕಿರದವರು, ಬೆಂಕಿಯ ರಿಣವಿರದವರು
ಮೂರು ಹಗಲು, ಮೂರು ರಾತ್ರಿ ಕೆರೆಯಲ್ಲಿ ತೇಲಿದ ಮೇಲೆ
ಗಂಗಾಮಾಯಿ ಕಣ್ಣು ತೆರೆಯುತ್ತಾಳೆ. ಆಮೇಲೆ
ಸದರಿಯವರ ದೇಹ ಜಲಚರಗಳಿಗೆ, ಆತ್ಮ ಗಿಡಗಳಿಗೇರಿ,
ಜೋತು ಬಾವಲಿಯಾಗಿ ಮುತ್ತು ರತ್ನಗಳ ಕಾಯುವ
ಗಂಗವ್ವನ ಖಾಸಾಪೋಲೀಸು ಪಡೆಗೆ ಸೇರುತ್ತಾರಂತೆ.
ಈ ಮಾತಿಗೆ ಭಟ್ಟರ ಪುಸ್ತಕದಲ್ಲಿ, ಕುರುಬರ ಹಾಡಿನಲ್ಲಿ
ಆಧಾರವಿಲ್ಲ ಹೌದು; ಆದರೆ ಭಟ್ಟರು ತೋಂಡಿಯಲ್ಲಿ
ಹೀಗೆಂದು ಅಪ್ಪಣೆ ಕೊಡಿಸಿದ್ದುಂಟು.

೧೯೭೯

# ಸಾವಿರದ ನೆರಳು – ೧೯೭೯: ಕಲೆಗಾರಣ್ಣನ ಲಾವಣಿ

೧

*ಹಾಡು* ||
ಹುಸಿಯಲ್ಲ ಅಸಲ ಖರೆ ಸೋಸಿ ಹೇಳತೇವ್ರಿ
ಇದ್ದನೊಬ್ಬ ಕಲೆಗಾರ |

ಭಾರಿ ಸಿಟಿಯ ಕಿರುರೂಮಿನೊಳಗ ರೂಮಿನಂಥಾ ಗೂಡಿನೊಳಗ
ಮರೆತ ಹಾಡಿನ ತುಂಡು ಸಾಲಿನ್ಹಾಂಗ | ಇದ್ದಾ
ಹೊರಗೆ ಬರಲು ರಹದಾರಿಯಿಲ್ಲದ
ಆಳ ನೋವಿನ್ಹಾಂಗ ||

*ವಚನ* | |
ಆತ ಖ್ಯಾತನಲ್ಲ, ಜರಿರುಮಾಲಿಲ್ಲ, ಕಾಶ್ಮೀರಿ ಶಾಲಿಲ್ಲ,
ಹುಟ್ಟಿ ಖಾನೆಸುಮಾರಿಗಿಲ್ಲ, ಸತ್ತು ಗೋರಿಗು ಇಲ್ಲ,
ಆದರೂ ಘಟ್ಟಿಕುಳ, ಚಿತ್ರ ಬರೆಯೋದನ್ನ ಬಿಡಲೇ ಇಲ್ಲ.
ಇನ್ನೇನಿಲ್ಲ, ರೂಮಿನ ಗೋಡೆಯ ಮೇಲೆ ತರತರದ ಗಿಡಮರ

ಮುರಿಮುರಿಗೆಯೆಳೆ ಬಳ್ಳಿ ಬರೀತಿದ್ದ,
ಎಲೆ ಮಾತ್ರ ಬರೆಯೋದು ಬರಲೆ ಇಲ್ಲ.

*ಹಾಡು* | |
ಬೊಡ್ಡಿ ಕಾಂಡ ಟೊಂಗಿ ಬರೆದಾ |
ಟಿಸಿಲು ಟಿಸಿಲಿನ
ದೇಟು ದೇಟಿನ ನೀಟ ಗೆರೆಯ ಬರೆದಾ |
ಅಗಿದು ಅಗಿದು ಒಳ
ಗುದ್ದಿ ಹೋಗುವ ನೆಲ
ದಾಳ ಬೇರು ಬರೆದಾ |
ಇಳಿಬಿದ್ದ ಬಿಳಲು ಬರೆದಾ |

ಗಿಡಕ ಮರಕ ಎಲೆ ಮೂಡಲಿಲ್ಲಾ
ತಲಿಯಮ್ಯಾಲ ಕೈ, ಕೂತನಲ್ಲಾ
ಮರೆತ ಹಾಡಿನ ತುಂಡು ಸಾಲಿನ್ಹಾಂಗಾ | ಇದ್ದಾ
ಹೊರಗ ಬರಲು ರಹದಾರಿಯಿಲ್ಲದ
ಆಳ ನೋವಿನ್ಹಾಂಗ ||

೨

*ವಚನ* | |
ಅವ ಬರೆದ ಬೊಡ್ಡಿಗೆ ರೆಂಬೆ ಕೊಂಬೆಯೊಡೆದು
ಮರವಾಗಿ, ಮರ ಬೆಳೆದು ಮಳೆಯಾಗಿ
ಒಂದಿದ್ದದ್ದು ಹಲವು ಹದಿನೆಂಟಾಗಿ, ರೂಮಿನ ಛಾವಣಿಯ ತುಂಬ
ಮೆಳೆಹೋದರು ಬೆಳಕಿಳಿಯದಂತೆ ಇಡಿಕಿರಿದು ಬಲೆ ಹೆಣೆದರೂ
ಬರೆದ ಕಾಡು ಒಡ್ಡೊಡ್ಡಾಗಿ ಹಬ್ಬಿ ರೂಮಿನ ನಾಲ್ಕೂ ಗೊಡೆಯಲಿ
ಬೆರಳೂರುವಷ್ಟು ಸ್ಥಳ ಉಳಿಯದಿದ್ದರೂ, ಸದರಿ ಕಲೆಗಾರನಿಗೆ
ಬಿಳಿದಾಡಿ ಬೆಳೆದರೂ

ಕೈಯುಗುರು ಬೆಳೆದರೂ
ಬೋಳುಗಿಡಮರಕೆ ಎಲೆ ಬೆಳೆಯಲ್ಲಿಲ್ಲ,
ಹೊರಗೆ ಹಂಗಾಮ ಹದ ಬಂದರೂ ಹೋದರೂ
ಒಳಗೆ ಋತುಮಾನ ಕಾಲಿಡಲೇ ಇಲ್ಲ.

ಹೊರತಾದ ಹೊರಗಿಗೆ, ಮೈಮರೆತ ಕಾಡಿಗೆ
ದಾರಿತಪ್ಪಿಸಿಕೊಂಡು ಅಲೆದರೂ ಕರೆದರೂ
ಎಲೆಮಾತ್ರ ಮೂಡಲಿಲ್ಲ!

*ಹಾಡು* ||
ಎಲೆ ಮೂಡಲಿಲ್ಲಾ ||
ಕಣ್ಣಿನಂಚಿನ ಹಸಿರು ಕುಂಚಿನಲಿ
ಹೆಸರುಗೊಳ್ಳಲಿಲ್ಲಾ |

ಕಂಡ ಖರೆಗೆ ಹಸಿರೇರಲಿಲ್ಲ ಹಾ
ಉಸಿರು ಚಿಗುರಲಿಲ್ಲಾ ||

೩
*ವಚನ* ||
ಎಲೆ ಮೂಡಲಿಲ್ಲವೆಂಬುವ ನೋವು
ಒಳಗೊಳಗೇ ಬೆಳೆದು, ಬೆಳೆದ ನೋವು
ಬೋಳು ಗಿಡಮರದ ಗಂಟಲಲಿ
ಉಕ್ಕಲಾರದೆ ಸಿಕ್ಕಿ ಬಿಕ್ಕಾಗಿ
ಕಲೆಗಾರನ ಗಂಟಲುಬ್ಬಿತು.
ಗಂಟಲ ನೋವು ಉಬ್ಬಿ ಚೊಂಬಿನಷ್ಟಾಗಿ
ಕುರುವಾಗಿ, ನೋವು ತುಟಿ ಬಿಚ್ಚದೆ,
ಒದ್ದಾಡಿದಾ ಬಿದ್ದು ಒದ್ದಾಡಿದಾ | ಸ್ವಾಮಿ
ಹಗಲಾರು ಇರುಳಾರು ನರಳಾಡಿದಾ,
ಸಾಯಲಾರೇ ಶಿವನೆ ಬದುಕಲಾರೆ |

೪
*ವಚನ* ||
ಕೊನೆಗೂ ಮೌನದ ತುಟಿಗೆ ಮಾತು ಬಂತು ಕೋ
ಉಫೇ ಉಫೇ ಶಿವ ಎನ್ನಿರಿ ಸ್ವಾಮೀ,
ಶಿವಲಿಂಗ ಎನ್ನಿರಿ,
ಬಣ್ಣಕೆ ಎರವಾದ ಕನಸಿಗೆ ಕಣ್ಣು ಬಂತು ಕೋ
ತಟ್ಟಂತ ದನಿಯಾಗಿ ಚಟ್ಟಂತ ಮೇಲೆದ್ದಾಗ
ಗಂಟಲ ಕುರುವೊಡೆದು, –

ಹುಣ್ಣೊಳಗಿಂದ ಬಣ್ಣ ಬಣ್ಣದ ರೆಕ್ಕೆಯೊಡೆದು
ಇಷ್ಟೆ ಕಣ್ಣಿನ ಇಷ್ಟಿಷ್ಟೆ ಚುಂಚದ ಹಕ್ಕಿ
ಗಕ್ಕನೆ ಹಾರಿಬಂತು. ಮೇಲಕ್ಕೆ ಕೆಳಕ್ಕೆ!
ರೆಂಬೆ ರೆಂಬೆಗೆ ಕೊಂಬೆ ಕೊಂಬೆಗೆ ಸೋಂಕಿನ ಸೊಗಸ ಬೀರುತ,
ಹಾರಿ ನಿಬ್ಬೆರಗಿನಲಿ ಹಾಡತೊಡಗಿತು ಬೆಳಕು ಚಿಮ್ಮಿದ ಹಾಗೆ.
ದೇವರ ಮಹಿಮೆಗೆ ಶರಣೆನ್ನಿರಿ ಸ್ವಾಮೀ
ಕಲೆಗಾರನ ಕಲ್ಪನೆಗೆ ಶರಣೆನ್ನಿರಿ.

*ಹಾಡು* ||
ಹಕ್ಕಿ ಹಾಡಿತಣ್ಣಾ ||
ತುಂಬಿದೆದೆಯ ತಂಬುಲದ ಹಾಡುಗಳ
ಕಾಡಿಗಿಡಿಸಿತಣ್ಣಾ |
ರೆಂಬೆಕೊಂಬೆಗೂ ನೆಗೆದು ಹಸಿರು ಹೂ
ಹೆಡಿಗೆ ಮುಡಿಸಿತಣ್ಣಾ
ಹಾಡಿದಷ್ಟು ಹಸಿರುಕ್ಕಿತಣ್ಣಾ
ಉಕ್ಕಿದ ಹಸಿರೇ ಬಲೆಯಾಯ್ತಣ್ಣ
ಹೊರಗೆ ಬರಲು ರಹದಾರಿಯಿಲ್ಲದೇ
ಒಳಗೆ ಸಿಕ್ಕಿತಣ್ಣಾ | ಹಕ್ಕಿ
ತನ್ನ ಬಲೆಗೆ ತಾ ಬಲಿಯಾಯಿತಣ್ಣಾ ||

ಆಚೆ ಸೀಮೆಯ ರುಚಿ ಬೆರೆತ
ಹದವಿತ್ತು ಹಾಡಿನಲಿ
ಹರ್ಷದ ವರ್ಷಕ್ಕೆ ಹಸಿರೇರಿ ಮರಗಳ ಹೃದಯ
ಅರಳಿ ಪರಿಮಳಿಸಿದವು ಅಲ್ಲಿ ಇಲ್ಲಿ ||

# ಸಾವಿರದ ನೆರಳು – ೧೯೭೯: ಗುಡು ಗುಡು ಗುಮ್ಮ

ಹೊತ್ತಾಯಿತು ಮಲಗು ಮರಿ.
ಬಿಸಾಕು ನಿನ್ನ ಪ್ರಶ್ನೆಯ ಕೊಕ್ಕೆ, ವ್ಯವಹಾರಕ್ಕೆ ಸಲ್ಲದ
ಅಜ್ಜೀಕಥೆ, ಸತ್ಯ ಸುಳ್ಳಿನ ವ್ಯಥೆ.

ಬೊಗಳುವ ನಾಯಿ, ನಿನ್ನ ತಾಯಿ, ಅಕ್ಕ ಅಜ್ಜಿ ತಂಗಿ
ಮನೆ ಮನೆ ಮಂದಿ, ಈ ರಸ್ತೆಯ ಸಂದಿ ಗೊಂದಿ
ಕುಂಡದ ಬಳ್ಳಿ ಸಹ ಮಲಗಿವೆ ಹೌದ?

ಮಲಗು ಮತ್ತೆ;
ಆಗಲೇ ಕರಿ ಘೂರ್ಕ ಕೋಲು ಕುಟ್ಟೋ ಹೊತ್ತು

ಕನಸಿನಲ್ಲಿ ನೀನು ಕುಂಡದ ಬಳ್ಳಿಗೆ ಹೂವ ಕಂಡರಿಸಿ
ಕನವರಿಸುವ ಹೊತ್ತು; ಗೊತ್ತಲ್ಲ ಗುಮ್ಮ?
ಗುಡು ಗುಡು ಗುಮ್ಮ ಹೊರಡೋ ಹೊತ್ತು.

ಹೇಳಿದರೆ ಅಂಜಬೇಡ. ಹೇಳಲೇ?
ಅಲ್ಲಿ ಅಂಗೈಯಗಲ ಬೆಳಕಿನಲ್ಲಿ ಬೂತಾಕಾರ ನೆರಳ
ನಿಭಾಯಿಸುವ ದೀಪದ ಕಂಬ ಕಂಡೆಯಾ?
ಅದರಡಿ ನನ್ನ ನೆಗೆಟಿವ್ ಥರದ
ಬತ್ತಲೆಗೆ ಬತ್ತಲ ಮೊತ್ತ ಕಂಡೆಯಾ?
ಇಲ್ಲೆ ನಿಂತಿದೆ ನೋಡು ಸುಮ್ಮನೆ ಬಿಮ್ಮಗೆ ಅದೇ
ಗುಡು ಗುಡು ಗುಮ್ಮ. ರೋಡ್‌ರೋಲರ್ ಅಂತ
ಅಥವಾ ಇನ್ನೆಂಥದೋ ಸರ್ಕಾರಿ ಹೆಸರಿದೆ ಅದಕ್ಕೆ.

ನೋಡುವುದಕ್ಕೆ ಇಷ್ಟಿದೆಯಲ್ಲ – ನೋಡುತ್ತಿರು ಕೆಳಗೆ
ಆಳಕ್ಕೆ, ಮೇಲಕ್ಕೆ ಎತ್ತರಕ್ಕೆ ಬೆಳೆಯುತ್ತದೆ.
ಬೆಳೆಯುತ್ತದೆ ನನಗಿಂತ, ಮನೆಗಿಂತ, ಗುಡ್ಡಬೆಟ್ಟಕ್ಕಿಂತ
ದೊಡ್ಡದಾಗಿ ಅಡ್ಡಡ್ಡ ಉದ್ದೋ ಉದ್ದ ನೆಲಮುಗಿಲಿಗೇಕಾಗಿ,
ನಿನ್ನಜ್ಜಿ ಕಥೆ ರಾಕ್ಷಸನಂತೆ.
ಬೆಳೆಯುತ್ತವೆ ಅದಕ್ಕೆ ಬಿಳಿಯ ಕೋರೆಹಲ್ಲು, ಕೆಂಪು
ನಾಲಗೆಯೇನು, ನೆತ್ತಿಯ ಕೊಂಬು, ಕಾಂಬ ಕಣ್ಣು!

ಕಾರಿನ ಝಗ್ಗಂತ ಲೈಟಿನಲ್ಲಿ ಮುಚ್ಚಿದ ರಸ್ತೆ ಮುರಿದು
ತಂತಾನೆ ಅಣಕಿಸಿಕೊಂಡಿತೆ?
ಹಾಗಿದ್ದರದು ಬೆಳೆಯುತ್ತಿರಬೇಕು ಮರಿ,
ಬೆಳೆಯುತ್ತಿರಬೇಕು.

ಅಸ್ಪಷ್ಟ ಹೆಜ್ಜೆಗಳು, ಮುರಿದ ಪಿಸುದನಿ ಸಿಳ್ಳು
ತುಟಿ ಕಚ್ಚಿದ ಗೋಳು ಕೇಳಿಸಿತೆ?
ಹಾಗಿದ್ದರದು ಬರುತ್ತಿರಬೇಕು ಮರಿ,
ಬರುತ್ತಿರಬೇಕು – ಕೋರೆಹಲ್ಲು ಮಸೆಯುತ್ತ
ನಾಲಿಗೆ ಚಾಚುತ್ತ, ಕಣ್ಣಿನಲ್ಲಿ ಕಿಡಿ ಕಾರುತ್ತ
ಕಾ – ಹೌದಾ?
ಕಿಟಕಿಯ ಗಾಜು ಒಡೆಯುತ್ತಿವೆ, ಮುರಿಯುತ್ತಿವೆ
ಬಾಗಿಲು, ಗೋಡೆ ಬಿರಿಯುತ್ತಿವೆ ಬರುತ್ತಿದೆ
ಮನೆಯಲ್ಲೇ ನಮ್ಮ ಸದರಿನಲ್ಲೇ ಗುಮ್ಮ
ನುಗ್ಗುತ್ತಿದೆ! ಮನೆಯಲ್ಲೇ ಹಾಯುತ್ತಿದೆ
ಮನೆಯನ್ನೆಲ್ಲ ರಸ್ತೆ ಮಾಡುತ್ತದೆ, ಹೆಮ್ಮೆಪಡುತ್ತದೆ.

ಗುಮ್ಮ ಮನೆಯನ್ನೆಲ್ಲ ನಮ್ಮ
ನಾಳೆ ಬೆಳಿಗ್ಗೆ ನೀ, ನಿನ್ನಕ್ಕ ತಂಗಿ ತಾಯಿ ನಾಯಿ ಅಜ್ಜಿ ಎಲ್ಲ
ನೀವೆಲ್ಲ ರಸ್ತೆಯಲ್ಲೇ ಮಲಗಿರುತ್ತೀರ
ನಾಯಿ ಬೊಗಳುತ್ತದೆ, ಅಕ್ಕ ಹಾಲು ಕೇಳುತ್ತದೆ
ನೀ ಕುಂಡದ ಹೂ ಬಳ್ಳಿ ಕೇಳುತ್ತಿ. ತಾಯಿ ತುಟಿ ಕಚ್ಚಿ
ಅಳುತ್ತದೆ.
ನಾನು?
ಕಸದ ಗುಂಡಿಯಲ್ಲಿ ಕಳಕೊಂಡ ವಿಳಾಸದ
ಚೀಟಿ ಹುಡುಕುತ್ತ
ಹುಡುಕುತ್ತ
ಹುಡುಕುತ್ತಾ ಅಲೆದಾಡುತ್ತೇನೆ.

# ಸಾವಿರದ ನೆರಳು – ೧೯೭೯: ಮರತೇನಂದರ ಮರೆಯಲಿ ಹೆಂಗಾ

ಮರತೇನಂದರ ಮರೆಯಲಿ ಹೆಂಗಾ |
ಮಾವೋತ್ಸೆ ತುಂಗಾ ||

ಪಂಚಭೂತದಾಗ ವಂಚನೆ ಕಂಡಿ
ಕಣ್ಣಿನಂಚಿನಾಗ ಹೊಸ ಜಗ ಕಂಡಿ
ಸೊನ್ನಿಗೆ ಆಕಾರ ಬರದೇನಂದಿ
ಬಯಲಿಗೆ ಗೋಡೆ ಕಟ್ಟೇನಂದಿ
ಸಚರಾಚರಗಳ ರಚನೆ ಮಾಡುದಕ
ಬೇರೊಬ್ಬ ಸೂರ್ಯನ ತರತೇನಂದೀ |
ಮರತೇನಂದರ ಮರೆಯಲಿ ಹೆಂಗಾ ||

ಕಣ್ಣೀರಿನ ಹೊಳಿಗಡ್ಡ ಕಟ್ಟಿದಿ
ಹರಿವ ನೆತ್ತರಕ ಒಡ್ಡ ಕಟ್ಟಿದಿ
ಮಡುವಿನ ನಡುವ ಕಾಲನೂರಿಕೊಂಡ
ಬತ್ತಿಯಾಗಿ ತಲೆಹೊತ್ತಿಸಿಕೊಂಡಿ
ಮನಶೇರ ಮುರದಿ ತೇರ ಕಟ್ಟಿದಿ
ಹತ್ತವತಾರದ ಕುದರಿಯ ಜೋಡಿ
ಹತ್ತ ಕುದರಿಯ ಹಳದಿ ದೇವರೋ
ಸ್ವಯಂ ಸೂರ್ಯ ನಾ ಬಂದೇನಂದಿ |
ಮರತೇನಂದರ ಮರೆಯಲಿ ಹೆಂಗಾ ||

ಬೆಂಕಿ ಹಚ್ಚಿದಿ ಬೇಲ್ಯಾಗ ನಿಂತಿ
ಸಿದ್ಧ ಪ್ರಸಿದ್ಧರ ಗುದ್ದ ಹೊಗಿಸಿದಿ

ಹಂಗ ಬಿಟ್ಟ ಹಂಗಾಮದ ಬೆದಿಗಿ
ಕೈಯ ಬೀಸಿ ಕೈಲಾಸವ ಕರದಿ
ಹಳದಿ ಬಿತ್ತಿದಿ ಹಳದಿಯ ಬೆಳದಿ
ಮುಳ್ಳ ಬೇಲಿಗೂ ಹೂವಿನ ಹಳದಿ
ಬಣ್ಣದ ಹೆಸರು ಬದಲು ಮಾಡಿದಿ
ಕಣ್ಣ ಕಾಮಾಲೆ ತಿಳಿಯದೆ ಹೋದಿ |
ಮರತೇನಂದರ ಮರೆಯಲಿ ಹೆಂಗಾ ||

ಹರಕ ಹುಬ್ಬಿನ ತಿರುಕರ ಅರಸಾ
ಡೊಳ್ಳ ಹೊಟ್ಟಿಯ ಹಸಿದವರರಸಾ
ದಿನಾ ಹುಟ್ಟಿದಿ ದನಕೊಮ್ಮಿ ಸತ್ತಿ
ಸುದ್ದಿಯ ಕಣ್ಣ ಒದ್ದಿ ಮಾಡಿದಿ
ಗ್ಲೋಬಿನರ್ಧಕ ಸಾಯೋದ ಕಲಿಸಿ
ಸ್ವಥಾ ಸಾಯಲಿಕೆ ಬಾರದೆ ಹೋದಿ
ಕಟ್ಟಿದ ಗೋಡೆಗೆ ಕಳಸವೇರಿತೊ
ಬದುಕಿದ ಜೀವ ಕಥೆಯಾಗಿತ್ತೊ
ಬಟಾ ಬಯಲಿನಾಗ ಮಟಾ ಮಾಯಾಗಿ
ಬೆಂಕಿ ಆರಿ ಬರಿ ಬೆಳಕುಳಿದಿತ್ತೊ |

ಮರತೇನಂದರ ಮರೆಯಲಿ ಹೆಂಗಾ
ಮಾವೋತ್ಸೆ ತುಂಗಾ ||

## ಸಾವಿರದ ನೆರಳು – ೧೯೭೯: ಆ ಮಿಕ

ನನ್ನ ಹತ್ತಿರ
ಹಂದಿಯಂಥಾದ್ದೊಂದು ಅನಾಮಿಕ ಮಿಕವಿದೆ.
ಅದಕ್ಕೊಂದು ಹೊಟ್ಟೆಯಿದೆ. ಹೊಟ್ಟೆ ದೊಡ್ಡದೇ,
ಅಂದರೆ ನೀವು ಹೆದರಬೇಕಿಲ್ಲ;
ಸ್ಕೂಲಿನ ಗ್ಲೋಬಿನಷ್ಟೂ ಗೋಣಿಯ ಖಾಲಿಚೀಲದಷ್ಟೂ ಇಲ್ಲ,
ಬರೀ ಅಂಗೈಯಗಲ.

ಕಾಂಬ ಕಣ್ಣು ತಿಂಬ ಬಾಯಿ ಬಿಟ್ಟರೆ ಅದಕ್ಕೆ
ಬೇರೆ ಇಂದ್ರಯಗಳಿಲ್ಲ ನಿಜ.
ಆದರೂ ಮೂಸಲುಂಟು ಅದು ಮುಟ್ಟಲುಂಟು
ಹೊಟ್ಟೆಯಿಂದ.
ನೀವು ಜತೆ ಕೂತು ಸತ್ಯ ಶಿವ ಸುಂದರೂ
ಅದು ಇದು ಎಂದರೂ

ಕೇಳುವುದುಂಟು ಹೊಟ್ಟೆಯಿಂದ.
ಅದಕ್ಕೊಂದು ಮನಸ್ಸಿದೆ ಹೊಟ್ಟೆಗಂಟಿಕೊಂಡೇ.
ಅಂದರಿಷ್ಟೇ, –
ಅದು ಮೊದಲೇ ಹೊಟ್ಟೆ.

ನಿಮ್ಮ ನಗುಮುಖ ಮೋತಿ, ಗೋದಿಯ ಚಪಾತಿ;
ಶಿವಸತ್ಯದ ನುಡಿ, ಶಾವಿಗೆ ಪಾಯಸದ ಎಳಿ-
ಯಾಗಿ ಕಂಡರೆ ಆಶ್ಚರ್ಯವಿಲ್ಲ.

ಅದರ ನದರಿನಿರಿತಕ್ಕೆ, ಬಿಟ್ಟ ನಿಟ್ಟುಸಿರಿಗೆ
ನಿಮ್ಮೆದೆ ಗಾಯವಾದರೆ, ಪದ್ಯದ ಹಾಳೆ
ಹಾರಿ ಹೋದರೆ, ಅದರ ತಪ್ಪಲ್ಲ.

ಚಕಮಕಿಯ ಕಲ್ಲಿನಂತದರ ಕೋರೆಹಲ್ಲು –
ಹಲ್ಲಿಗೆ ಮಸೆದ ಸಪ್ಪಳ ಬಿಕ್ಕಿದಂತೆ, ಇಲ್ಲ
ನಕ್ಕಂತೆ ಕೇಳಿಸಿದರೆ ಅದರ ತಪ್ಪಲ್ಲ.

ಕಾಕು ಮಾಡಿ ಲೋಕಾಸುಲಿವ ಮಂದಿ
ಇದು ಹಸಿವೆಗೆ ಕೈಕಾಲು ಕಟ್ಟಿ ಹೇಳಿದ ಹರಿಕಥೆಯೆಂದಾರು.
ಭಾವುಕ ಮಂದಿ,
ಆಹಾಹಾ ಈ ಮಿಕದ ಮುಖಕ್ಕೇನು ಕಳೆಯೆಂದು
ವರಾಹಾವತಾರದ ಕಾರಣಿಕ ನುಡಿದಾರು.

ಅತಿಶಯ ಸುಲಿದ ಮೇಲೆ ನಿಲ್ಲುವ
ಮಿಕದಳತೆಯ ನಿಜ ಹೇಳಲೇ?

ಅದರ ಚಕಮಕಿಯ ಹಲ್ಲಿಂದ ಹಾರಿದ ಕಿಡಿ
ಉರಿಯಾಗಿ ಧಗಧಗ ಭುಗಲಿಗೆ
ಮಹಲುಗಳು ಭವನಗಳು ಸೌಧಗಳು ಸದನಗಳು
ಸಿಟಿಗಳು ಛಿಳಿಛಿಟಿಲೆಂದು ಒಣ ಸೌದೆಯಾಗಿ
ಹುರಿದು ಹುರಪಳಿಸಿ ಬೆಂಕಿಯ ಉಂಡೆ
ಮೊದಲಿನಂತೆ ಮತ್ತೆ ಸೂರ್ಯನ ಸುತ್ತ
ತಿರುಗುತ್ತಾ ತಿರುಗುತ್ತಾ. . . . . .

ಸಚರಾಚರದ ರಚನೆಗೆ ತೊಡಗಬೇಕಿಲ್ಲ, –
ಆ ಮಿಕ ನೀವೇ, ನಿಮ್ಮದೇ ಮೈಯೆಂಬರಿವು
ಈಗಲೇ ಈ ಕ್ಷಣವೆ ಮೂಡಿದರೆ;
ಇಲ್ಲದಿದ್ದರೆ. . . . . .

# ಸಾವಿರದ ನೆರಳು – ೧೯೭೯: ನೆರಳಿನ ಜೋಡಿ

ಅವ ಸತ್ತ ಬಗೆ ಪೋಲಿಸರಿಗೆ, ಅವರ ನಾಯಿಗೆ
ಪತ್ರಿಕೆಗೂ ಬಗೆಯರಿಯದೆ ಹಾಗೇ ಇದೆ.
ಫೈಲುಗಳಲ್ಲಿ ಸಿಳ್ಳುಹಾಕುವ ಮಾಮೂಲಿ ಕೇಸು
ಬಲ್ಲವರಿಗೆ ಈ ದಿಗಿಲು ದಕ್ಕುವುದು ಸುಲಭವಲ್ಲ.
ಹೇಳಬಾರದ್ದೇನಲ್ಲ, –
ಈತ ತನ್ನ ನೆರಳಿನ ಜೋಡಿ ಹಾದರ ಮಾಡಿದ್ದು
ಅದು ಸುತ್ತಿ ಉಸಿರುಗಟ್ಟಿ ಸತ್ತದ್ದು

ನಗುವ ಬಾಬತ್ತಲ್ಲ. ಚಿಕ್ಕಂದಿನಿಂದ ಹೀಗೆಯೇ ಇದ್ದನಾತ

ನೆರಳ ಕಂಡರೆ ಪ್ರೇಮದ ಗುಟುರು ಹಾಕುವ ಹೋತ:

ಒಬ್ಬಂಟಿಯಾದಾಗ ಬೇಕೆಂದೆ ಬೆದೆನೆಗೆದು
ನೆರಳಿನ ಜೋಡಿ ತಿಳ್ಳೀ ಆಡಿ ಹೈಹಾರುವ ಪರಿಯೇ,
ಕಂದೀಲಿಗೆ ಕುಣಿವ ನೆರಳಿನಂಗಾಂಗ ಭಂಗಿಗೆ
ಕಂಗಳು ಕನಸು ಹೆರುವೈಸಿರಯೇ,
ನೆರಳಿನ ಕತ್ತಿಗೂ ತೋಳ ಸಂದಿಗೂ ಕೈತೂರಿ
ಫಕ್ಕನೆ ನಕ್ಕ ನಗೆಯೇ,
ಗೋಡೆಯ ಪಕ್ಕ ನಿಂತು ಡಿಕ್ಕೀಹೊಡೆದು
ಪಕ್ಕೆ ನೋಯಿಸಿಕೊಂಡ ಸುಖದ ನೋವೇ,
ಕತ್ತಲೆಯ ವಿರಹವೇ
ಬೆಳಕಿನ ಸರಸವೇ,
ಒಂದೇ ಎರಡೇ, ಆಹಾಹಾ ಇವ
ಕನ್ನಡಿಯ ಛಾಯೆಗೆ ಮಾಯೆ ಮಾಡಿ
ಹಾಡು ಹೇಳಿದಾಗ
ನೆರೆಹೊರೆ ಹುಡುಗಿ ಬಿಕ್ಕಿದ್ದು
ಹೆಚ್ಚಲ್ಲ ಬಿಡಿರಿ.

ಆಯ್ತಲ್ಲ,
ಮೊನ್ನೆ ಸಾವಿನ ಮುನ್ನ, ಸರಿರಾತ್ರೀಲಿ
ಏಕಾಂತಕೆಳಸಿ ಕಂದೀಲು ತಂದಿಟ್ಟ.
ಬಿದ್ದ ನೆರಳಿನಗುಂಟ ಕುಂಟಲಿಪಿ ಆಡುತ್ತಾ ಆಡುತ್ತಾ,

ಹೊಂಟಿರಲು, –
ದೂರದೆತ್ತರದಲ್ಲಿ,
ಆಧಾರವಿಲ್ಲದಾಕಾಶದಲ್ಲಿ ನೇತಾಡುವ ಸೂರ್ಯನ ಹಾಗೆ,
ನಗುವ ಚಂದ್ರನ ಹಾಗೆ,
ಪಾತಾಳ ಬಾವಿಯಲ್ಲಿ ಮೂಡುವ ಚಿಕ್ಕೆಯ ಹಾಗೆ,
ಹುಲ್ಲಿನೆಸಳಿನ ಮೇಲೆ ಮಿನುಗುವಿಬ್ಬನಿ ಹಾಗೆ,
ಸತ್ಯದ ಅತಿಶಯದ ಹಾಗೆ, ಹೊಳೆವ ಸುಳ್ಳಿನ ಹಾಗೆ
ತೂಗ್ಯಾಡುತ್ತಿತ್ತು ಇನ್ನೊಂದು ಕಂದೀಲು!
ಕಾದಿತ್ತು ಕತ್ತುಹಿಸುಕುವ ಕಪ್ಪು ದಿಗಿಲು
ಅಗೋ ತನ್ನ ಮೈಗೆ ಇನ್ನೊಂದು ನೆರಳು!

ಆ ನೆರಳು ಈ ನೆರಳು ಕ್ರಾಸಾಗಿ
ಕತ್ತರಿಗೆ ಸಿಕ್ಕು
ಅಳ್ಳಳ್ಳಾಗಿ ಹುಡುಗ ತಳ್ಳಂಕಗೊಂಡ.
ಬೆದರಿ ವೇದನೆಯೊದರಿ ರೂಮಿಗೆ ಬಂದ.

ರೂಮಿನ ತೂಗುವ ದೀಪದ ಗೋಡೆಯ ನೆರಳು
ಕುಣಿಕುಣಿದು ಗೋಣಿನ ಸುತ್ತ ನೇಣಾಗಿ ಸುತ್ತಿ ಸುತ್ತುವರಿದು
ಹೋರಾಡುತ್ತ ಹೋರಾಡುತ್ತ
ತೆರೆಬಾಯಿ ತೆರದಂತೇ
ಸೆಟೆದ ಮೈ ಸೆಟೆದಂತೇ
ಚಾಚಿದ್ದ ಕೈ ಚಾಚಿದ್ದಂತೇ

ಹಾರಿದವು, –
ಹುಡುಗನ ಹರಣ.
ಎರಡಳಿದವ ಆತನ ಆತ್ಮಕ್ಕೆ ಶಾಂತಿ ಕೊಡಲಿ, –

ಗೋಡೆಯಮೇಲೆ ಕ್ರಾಸಿನೇಸುವಿನಂತೆ
ಕೀಲಿಸಿದ್ದ ನೆರಳಿನ್ನೂ
ಪೋಲೀಸರಿಗೆ, ಅವರ ನಾಯಿಗೆ, ಪತ್ರಿಕೆಗೂ
ಬಗೆಹರಿಯದೆ ಹಾಗೇ ಇದೆ.

ಇದಕ್ಕೆ ಸಾಕ್ಷಿ ಬೇಕೆ?
ನೋಡಿರಿ, ಜೋಡಿ ನೆರಳಿದೆ ಈಗ ನನ್ನ ಮೈಗೆ!

# ಸಾವಿರದ ನೆರಳು – ೧೯೭೯: ಸ್ವಂತ ಚಿತ್ರ

ಸ್ವಂತ ಚಿತ್ರ ಬರೆಯೋದು ಕಷ್ಟವಲ್ಲ ಮಿತ್ರಾ:
ಚೂಪಂಚಿನ ಕುಂಚ ತಗೋ, ಬಳಿಯಿದ್ದಷ್ಟು ಬಣ್ಣ ತಗೋ,
ತಗೋ ಕಾಗದ ದಪ್ಪ, ಉತ್ತರಕ್ಕೆ ಮುಖಮಾಡಿ ಕೂತುಕೋ
ಕೆಳಗಿನೆರಡೂ ಮೂಲೆ ಹಸಿರು ನೀಲಿ ಬೆರಸಿ
ಸಾಗರದ ನೀರು ಬರೆ,
ಮಹಾಸಾಗರದ
ಕರಾವಳಿಗೆರಡು
ಮೇರೆಗಳ ಗೆರೆ ಗೆರೆ ಬರೆದರೆ
ಅದೇ ಜಂಬೂದ್ವೀಪ! ಹಾ ಭರತವರ್ಷ!

ತೆಂಕಣದ ಶ್ರೀರಾಮಕ್ಷೇತ್ರ ಬೊಡ್ಡಿಯಾಗೋ ಹಾಗೆ,
ಮೇಲಿನ ಬಡಗಣ ಹಿಮಾಚಲ, ಎಡ ಬಲ ಕಾಗದ –
ದಂಚಿನ ತನಕ
ಟೊಂಗಿ ಟಿಸಿಲು ರೆಂಬೆ ಕೊಂಬೆ ದಾಂಗುಡಿಯಿಡಲಿ,
ಪಾರಂಬಿಯಿಳಿಬಿದ್ದಿರಲಿ ನೇಣಿನ ಥರ
ಸಾವಿರ ವರ್ಷದ ಸನಾತನ ಮರವಯ್ಯಾ
ಹೆಸರಿನ ಗುಟ್ಟು ಗೊತ್ತಿಲ್ಲದೆ ಬೇರುಬಿಟ್ಟಿದೆ
ಕೆಳಗೆ ಪಾತಾಳಕ್ಕೆ!

ಮಧ್ಯದ ಅಯೋಧ್ಯಯೊಂದಿದೆಯಲ್ಲ –
ಅಲ್ಲೊಂದು ನರಮಂಡಲದ ತುದಿ ಮೊದಲು
ಹರಿಹರಿದು ಸೊರಗಿ ಮತ್ತೆ ಸೇರುವ ಹಾಗೆ;
ಅದೊಂದು
ಬಗೆ ಕಾವ್ಯದ ಕೇಂದ್ರ ಪ್ರಜ್ಞೆಯ ಹಾಗೆ –
ಕರಿಗೆರೆಯ ಕಬ್ಬಿಣಸಳಿಯ ಪಂಜರ ಬರೆ, ಆದರೆ
ತಿಳಿದಿರಲಯ್ಯ ಗೆರೆಯ ಕರ್ವುಗಳಲ್ಲಿ
ಲಿರಿಸಿಜಂ ಇರಲಿ,
ಪಂಜರದ ಬಾಗಿಲು ತೆರೆದಿರಲಿ –
ಈಗ ಬರಬೇಕಷ್ಟೆ ಹಕ್ಕಿ; ಕಾದಿರು ಸ್ವಲ್ಪ –
ಈಗ, ಇಂದಿಲ್ಲ ನಾಳೆ, ಯಾವಾಗ ಬೇಕಾದಾಗ
ಬರಬಹುದಯ್ಯ ಹಕ್ಕಿ –

ಬರೆ ಮತ್ತೆ ಈಗಷ್ಟೆ ಸೂರ್ಯಾಸ್ತವಾಗಿ
ಎಡಗಡೆ ಆಕಾಶಕ್ಕೆ ರಂಗೇರಿಸು ಒಂದಿಷ್ಟು:
ಹಕ್ಕಿ ಹಾರಿ ಬರುವ ಹೊತ್ತು.

ಹಕ್ಕಿ ಬರಬಹುದು, ಬರುತ್ತಲ್ಲ? – ಬಂದರೆ
ತೆಪ್ಪಗಿರು, ಒಳಹೋಗಲಿ ಹಕ್ಕಿ, ಹೊಕ್ಕೊಡನೆ
ಅವಸರದಲ್ಲಿ ಒಂದೆರಡು ಕರಿಗೆರೆಯೆಳೆದು
ಪಂಜರದ ಬಾಗಿಲು ಮುಚ್ಚು.
ನೆಪ್ಪಿರಲಯ್ಯ, ಹಕ್ಕಿಗೆ ನಿನ್ನ ಕುಂಚ ತಾಗದ ಹಾಗೆ
ನೋಡಿಕೊ,
ಆ ಮೇಲೆ –

ಲಯದ ಒಂದು ಬಗೆ ಖುಶಿಯ ಒಂದು ಥರ
ರಸಾನುಭಾವದ ಭಾವಾಭಿನಯದದೊಂದು ಬಗೆಯ
ತುಡಿವ ಮಿಡಿವ ಜೀವರಸಾಯನದ ಹಸಿರುಕ್ಕಿಸು
ಪಂಜರದ ಸುತ್ತ, ಹಕ್ಕಿ ಆಶಿಸುವಂಥ.
ಬಣ್ಣದ ಹೆಸರಿಗೇನಂತೆ ಬರ? ಬರೆ ಹಾಡನುಕ್ಕಿಸುವಂತೆ
ಹಕ್ಕಿ –

ಹಾಡಬಹುದು, ಹಾಡಿದರೆ –
ಸರಿ ನಿನ್ನ ಹೆಸರು ಆಚಂದ್ರಾರ್ಕ! ಹಾಡದಿದ್ದರೆ ನೋಡು
ಕೆಂಪು ಬಣ್ಣದಲದ್ದಿ ಅದರ ಚುಂಚದ ನಡುವೆ
ಕುಂಚವಿಡು, ಬಾಯ್ಬಿಡಿಸು –
ಬಾಯ್ದೆರೆದರೆ ಹುಣ್ಣಿನ ಹಾಗೆ ಕಾಣಿಸುವುದು ಸಹಜ
ಇಲ್ಲಾ ನಿನ್ನ ಕೈ ಅಲುಗಿ ಹುಣ್ಣಾಗಿರಬೇಕು.

ಈಗ ಹಕ್ಕಿಗೆ ಗೊತ್ತಾಗದಂತೆ ಮೆತ್ತಗೆ
ಬಯ ಹುಣ್ಣಿನಲ್ಲಿ ಕುಂಚ ಅದ್ದಿ
ಚಿತ್ರದ ಬಲಗಡೆ ಕೆಳಗೆ ಮೂಲೆಗೆ
ನಿನ್ನ ಹೆಸರು ಬರೆ –
ಅಷ್ಟೆ.

# ಸಾವಿರದ ನೆರಳು – ೧೯೭೯: ರಾಮಾಯಣವೂ ಗೋದೂ ತಾಯಿಯೂ

ಗೋದೂ ತಾಯಿ, ಸ್ವಲ್ಪ ವಿಸ್ತಾರ ಬಾಯಿ, ಸದಾ
ಹರಿರಾಮಾ, ಅಯ್ಯಮ್ಮಾ ಐವತ್ತರ ಈಯಮ್ಮ
ನ ಬಲಗೈ ಸವರಿದರೆ ರಾಮಾಯಣವ
ದೇಹದ ಎಲ್ಲೆಲ್ಲಲ್ಲೋ ರೋಮಾಂಚನದನುಭವ!

ಈಕೆಯ ಎದುರಿಗಿರಲೇಬೇಕು ರಾಮಾಯಣ, ಬತ್ತಿ
ಹೊಸೆವಾಗಲೂ, ಮಗನ ಬೈವಾಗಲೂ, ತರಕಾರಿಯ

ಪೈಪೈಸೆ ಚೌಕಾಶಿಗೂ, ತರಾಟೆಗೆ ತಗೊಂಡು ಸೊಸೆಯ
ಮಾಡಿ ತರಲೆಯ 'ಮದುವೆಯಾಗಿ ಮಗನ
ಹೆರುವ ತನಕ ನೋಡಿರಲಿಲ್ಲವೇ ನಾನವರ ಮುಸುಡಿಯ'
ಎಂದು ಹೇಳುವಾಗಲೂ, ಅಥವಾ ಯಾವಾಗಲೂ.

ಕಸಗುಡಿಸುತ್ತ ಸೊಸೆ ಮುಟ್ಟಿದರೆ, ಶರ್ಟು ಕಳಚುತ್ತ
ಮಗ ಕಣ್ಣಾಡಿದರೆ, ಪಕ್ಕದ ಮನೆಯ ಸೊಕ್ಕಿನ ಹುಡುಗರು
ಆಟದ ಗತ್ತಿನಲ್ಲಿ ತಟ್ಟಿದರೆ – ಏನು? ರಾಮಾಯಣವ, –
ಗೊತ್ತಲ್ಲ ಗೋದೂ ತಾಯಿಗೆ ಸ್ವಲ್ಪ ವಿಸ್ತಾರ ಬಾಯಂತ,
ತೆರೆಬಾಯಿಂದ ಬೈಗುಳದ ಹೂಹೂಹೂ ಪೇರಿಸಿ,
ಸ್ವರ್ಗ ನರಕ ತಿಥಿಗತಿ ಪಿಂಡ, ಸತ್ತ ಗಂಡ
ಕಾಶಿ ಹರಿದ್ವಾರದ ಹೆಸರಿನಿಂದ ಹೆದರಿಸಿಯಾಳು.

ಇಲ್ಲಾ ಒಮ್ಮೊಮ್ಮೆ ಯಾರಿಲ್ಲದಾಗ ತಂತಾನೆ ಬೆರಳೆಣಿಸಿ
ತೂರಿ ರಾಮಾಯಣದಲ್ಲಿ ಮಾತಾಡಿಕೊಳ್ಳುತ್ತಾಳೆ ವಟವಟ.
ವಾದಿಸಿ ಜಗಳಾಡಿ ಅಳುತ್ತಾಳೆ ಸಹ! ಬಹುಶಃ
ವ್ಯರ್ಥಗಳ ಸಮರ್ಥಿಸಿಕೊಳ್ಳುತ್ತ, ಅಪಾರ್ಥದಲ್ಲಿ
ಅರ್ಥಗಳ ಸೃಷ್ಟಿಸುತ್ತ, ಇಲ್ಲಾ
ರಾಮಾಯಣದ ಮಹಿಮೆ ಜಪಿಸುತ್ತ.

ಈಗೆಲ್ಲಿಯಾದರೂ ಅಪ್ಪಿತಪ್ಪಿ ಸೊಸೆಯ ನೆರಳು
ಗೋಚರಿಸಲಿ – ಗೊತ್ತಲ್ಲ ಗೋದೂ ತಾಯಿಗೆ
ಸ್ವಲ್ಪ ವಿಸ್ತಾರ ಬಾಯಂತ –
'ಲೇ ಹಾದರಗಿತ್ತಿ, ನೋಡು ರಾಮಾಯಣದ ಸೀತೆ
ನಿನ್ನಂತಲ್ಲ, ಅತ್ತೆಯ ಉಗುಳು ದಾಟಿದವಳಲ್ಲ
ಗರತಿ, ಪತಿವರತಿ'. . . . . ಇತ್ಯಾದಿ.

ಹಾಗಂತ ರಾಕ್ಷಸಿಯಲ್ಲ, ಮಗ ಸ್ನಾನಕ್ಕಿಳಿಯಲಿ
ಬೆನ್ನಿಗೆ ಸೋಪುಜ್ಜುತ್ತ, ಊಟಕ್ಕೆ ಕೂರಲಿ
ತೆರೆದೆದೆ ಗಮನಿಸದೆ ಸೀರೆ ಸೆರಗಿಂದ
ಗಾಳಿ ಬೀಸುತ್ತ ಹೇಳುತ್ತಾಳೆ: ಮಗಾ ಕಂಡೆಯಾ
ನಿನ್ನ ಹೆಂಡತಿಯ ಮೊಂಡು ಮೋಟು ಜಡೆಯ?
ಸೊಟ್ಟ ಸೌಟೆದೆಯಾ; ಆಗಿನಕಾಲ; ಈಗೆಲ್ಲಿದೆ ಎಲ್ಲಾ:

ಚಿಕ್ಕಂದಿನಲ್ಲಿ, ಯಾಕೆ, ದೊಡ್ಡವನಾದರು ಈಗ –
ಮದುವೆಯಾದರೂ
ಮಗ ಮಲಗಬೇಕು ತನ್ನೆದರಲ್ಲೆ, ಸೊಸೆ ಅಡಿಗೆಮನೆಯಲ್ಲಿ.

ಮೊದಮೊದಲು ಅಕುಂಚನವಾಗಿ ಸಂಕೋಚದಲ್ಲಿ
ಆಮೇಲೆ ಅಡ್ಡಾದಿಡ್ಡಿ ದೊಡ್ಡ ದೇಹದಲ್ಲಿ ಗೊರಕೆಯ

ತುರೀಯಾವಸ್ಥೆಗೆ ತಲುಪಿದನೋ –
ಗೊದು ತಾಯಿ, ವಿಸ್ತಾರ ಬಾಯಿಮುಚ್ಚಿ, ಮೈಯೆಲ್ಲ ಕಣ್ಣಾಗಿ
ಕಣ್ಣೆಲ್ಲ ಕೈಯಾಗಿ, ರಾಮಾಯಣದ ರಹಸ್ಯ ಪುಟದಲ್ಲಾಡಿಸುತ್ತ
ಆಡುತ್ತ ಆಡಿಸುತ್ತ ಬೆರಳ,
ಕಂಪಿಸುವ ಮೂಗಿನ ಕೆಂಪು ಮುಖದಲ್ಲಿ
ತಿಳಿ ಬೆವರೊಡೆದು ಮಲಗುತ್ತಾಳೆ. ಬೆಳಿಗ್ಗೆದ್ದು
ಹೇಳುತ್ತಾಳೆ: ಮಗಾ,
ಕನಸಿನಲ್ಲಿ ನಿಮ್ಮಪ್ಪ ಬಂದಿದ್ದ
ರಾಮಾಯಣವೇನು ಸಾಮಾನ್ಯವೇನೊ?

ನಿಜ ಹೇಳಲೆ? ಅವಳಿಗೆ ರಾಮಾಯಣ ತಿಳಿಯುವುದಿಲ್ಲ
ಯಾಕೆಂದರೆ ಓದು ಬರಹ ಬಲ್ಲವಳಲ್ಲ.
ಇದ್ದಿರಬಹುದು ಅಭಿಮಾನ
ಯಾಕೆಂದರೆ ಅದು ಗಂಡನ ರಾಮಾಯಣ.

ದಡ್ಡಮಗ ಇಂದ್ರಿಯದ ಕಳವಳಕೆ ಹಳಹಳಿಸಿ
ಹೆಂಡತಿಯ ಬೆನ್ನ ಹಿಂದೆ ಕದ್ದು ಸುಳಿದಾಡಿದನೊ –
ಈ ತಾಯಿಗೆ ಮಹಾಮಾಯಿಗೆ ಹ್ಯಾಗೆ ತಿಳಿಯುತ್ತದೋ?
ಹಂಗಾಮಿಗೆ ಹದವಾಗಿ ಸೊಸೆಯ ಮೈ ಬಾರಿಸಿ ಚರ್ಮ
ಸುಲಿದು ಮಡಿಬಟ್ಟೆಯ ಹಾಗೆ ಒಣಗು ಹಾಕುತ್ತಾಳೆ.

ಚರ್ಮ ಹೀಗೆ ಒಣಗುತ್ತಿದ್ದಾಗಲೇ
ಮೊದಲಿನಿಬ್ಬರು ಸೊಸೆಯಂದಿರು ಗೊಟಕ್ಕೆಂದದ್ದು
ಗೋದೂ ತಾಯಿ ಬಕೆಟ್ಟು ಕಣ್ಣೀರು ಸುರಿಸಿದ್ದು
ಬಿಡು ಮಗಾ ಸಾವಿರ ಹೆಣ್ಣ ತಂದೇನಂದದ್ದು
ಮಗ ಯಾಕೆ ಊರಿಗೂರೇ ಮೂಗಿನಮೇಲೆ ಬೆರಳಿಟ್ಟದ್ದು
ಈಗಿದ್ದ ಸೊಸೆಗೆ ಬಿದ್ದ ಕನಸಿನ ಪ್ರಕಾರ – ಸುಳ್ಳೆಷ್ಟೋ ಖರೆ ಎಷ್ಟೋ!

ತನ್ನ ಗಂಡನ್ನ ಹೆಣ್ಣು ಹುಲಿಯೊಂದು ಅರ್ಧ ನುಂಗಿದ ಹಾಗೆ
ಕನಸಾಗಿ ಕರುಬಿದಳಂತೆ

ಕಿವಿಕಿವಿಗೆ ಹಬ್ಬಿ ಒಬ್ಬೊಬ್ಬರು ಒಂದೊಂದು ಥರ,
ಅವರವರ ಶಕ್ತ್ಯಾನುಸಾರ, ಸೊಸೆಯಂದಿರ ಸಾವಿಗೆ
ಭಾಷ್ಯ ಬರೆದು ತೃಪ್ತಿಪಟ್ಟರಂತೆ.

ವಯಸ್ಸಾದಂತೆ ಬುದ್ಧಿ ಬರುವುದಂತೆ
ಕತ್ತೆಯಂಥ ಕತ್ತೆಗೂ. ಬಂತು ಮಗನಿಗೂ,
ತಾಯಿ ಹೋಗಿದ್ದಳು ಮಡಿನೀರಿಗೆ, ಹೊಳೆಗೆ.
ಬಂದ ಬುದ್ಧಿ ಸರಿಯಿದ್ದರೆ ರಾಮನ ಭಾಗ ಬರಲಿ,
ಇಲ್ಲಾ, ರಾವಳನ ಭಾಗ ಬರಲೆಂದು ಅವಸರವಸರವಾಗಿ
ರಾಮಾಯಣದಲ್ಲಿ ಬೆರಳು ಸೇರಿಸಿದ್ದ – ಕೈಗೆ
ಮಿದು ಮಿದು ಉದ್ದುದ್ದ ಹತ್ತಿ, ಪುಟತೆಗದ,
ಬಿಳಿ ಬಿಳಿ ಗರಿ ಗರಿಯ ನಿರೋಧ ನೋಡಿ
ಬಿಸಿಯೇರಿ, ತಣ್ಣಗಾಗಿ, ಅಬ್ಬಬ್ಬಾ ಎಂದು
ಪುಟ ಮುಚ್ಚಿದ.

ಅದು ರಾಮನದೇ? ರಾವಳನದೆ? ಅಂತ ಶಾಸ್ತ್ರಿಗಳಲ್ಲಿ
ಹೊತ್ತಿಗೆ ತೆಗೆಸಿದರೆ – ಭೂತಬಾಧೆ ಮಗಾ, ಮನೆ
ಬಿಡೂಂತ ಬಂತು. ಮನೆಗೆ ಬಂದು
ಹೆಂಡತಿಯೊಂದಿಗೆ
ಮನೆ ಬಿಡುವುದಾಗಿ ಹೇಳಿದ. ಯಾರಿಗೆ? ತಾಯಿಗೆ.
ಗೋದೂ ತಾಯಿ ವಿಸ್ತಾರ ಬಾಯಿಂದ ಹೇಳಿದಳು:
ಆಯ್ತಲ್ಲ, ಈಗ ಯಮಗಂಡ ಕಾಲ ನಾಳೆ ಹೋದೀಯಂತೆ ಬಿಡು ಮಗಾ.
ಬೆಳಗ್ಗೆದ್ದು ಹೆಂಡತಿಯ ತಟ್ಟಿದ. ಹೆಣವಿತ್ತು; ಜೀವವಿಲ್ಲ.
ಬೆದರಿ ಬೆಕ್ಕಸ ಬೆರಗಾಗಿ ಹೊರಗೆ ಬಂದರೆ
ಗೋದೂ ತಾಯಿ – ಬಿಡು ಮಗಾ ಸಾವಿರ ಹೆಣ್ಣ ತಂದೇನೆಂದು
ವಿಸ್ತಾರ ಬಾಯಿ ತೆರೆದಾಗ – ಮಗ
ಅಯ್ಯಯ್ಯೋ ಹುಲಿ ಹುಲಿ ಎಂದು

ತಲೆಯ ಬುದ್ಧಿಯನ್ನು ಕಾಲಿಗೆ ಹೇಳಿದ.
ಈ ಕಥೆಯ ನೀತಿಯಿಷ್ಟೆ – ನಿಮ್ಮ ಮಗಳಿಗೆ
ಗೋದೂತಾಯಿ ಅಂತ ಹೆಸರಿಡಬೇಡಿ.

## ಸಾವಿರದ ನೆರಳು – ೧೯೭೯: ಹಳದಿ ಆಶೀರ್ವಾದ

ಹಿಮದಾಚೆ ಸೀಮೆಯಿಂದೀಗ ತಾನೇ ಬಂದೆ
ತಂದೆ ಹಬ್ಬದ ಸುದ್ದಿ; ಶರಣು ಸ್ವಾಮಿ.
ಆ ಕಡೆಯ ಜನ ಕುಶಲ, ಕ್ಷೇಮ, ಮಳೆ ಬೆಳೆ ಚೆನ್ನ
ಇನ್ನು ಪರವಾಯಿಲ್ಲ; ಖುಶಿಯಿಂದಿರಿ.

ಅಲ್ಲಿರುವ ನೆಲ, ನೀರು ಹಳದಿ, ಮುಗಿಲೂ ಹಳದಿ,
ಜನ ನಕ್ಕರೂ ಹಳದಿ, ಏನು ಮಂದಿ!

ಸುಳ್ಯಾಕೆ ಹೇಳೇನು, ಅವರು ನಕ್ಕಾಗೊಮ್ಮೆ
ಕಣ್ಣು ತುಳುಕುವ ನೀರು, ಅದೂ ಹಳದಿ!

ಕಂಡೆ ಮಾವರ ಮಾವ ಮಾವೋತ್ಸೆ-ತುಂಗರನು
ಕ್ಯಾಲೆಂಡರಿನ ಶಿವನ ಹಾಗೆ ತೇಜ!
ತೆರದ ಪುಸ್ತಕದೊಳಗೆ ಮುಖ ಹುಗಿದ ಧ್ಯಾನಸ್ಥ:
ಹಿನ್ನೆಲೆಗೆ ಹಳದಿ ಪ್ರಭೆ – ಎಷ್ಟು ಸಹಜ!

ಹರಿದ ಹುಬ್ಬಿನ ಕೆಳಗೆ ಹೊಳೆವ ನೀಲೀ ಕಣ್ಣು;
ಒಂದು ನಕ್ಕರೆ, ಒಂದು ಸುಮ್ಮನಿತ್ತು.
ಕೆನ್ನೆಗಳ ವಿನ್ಯಾಸ ಖರೆ ಹೇಳಲೇ ಸ್ವಾಮಿ? –
ನಮ್ಮ ಗ್ಲೋಬುಗಳೆಲ್ಲ ಯಃಕಶ್ಚಿತ!

ಮುಂದೊಡೆಯ ಮೇಲೊಂದು ಚೆಂದೊಳ್ಳೆ ಪಾರಿವಾಳ
ಬೆನ್ನಲಾಡುವ ದೊರೆಯ ಒರಟು ಬೆರಳು,
ಈಗಲೋ ಆಗಲೋ ಸೋ ಎನ್ನಲೋ, ಇಲ್ಲ
ಅದರ ಕಣ್ಣೊಳಗಿತ್ತು ನನ್ನ ನೆರಳು.

ತಲೆ ತುರಿಸಿ ಕಾಲಿಂದ ನೆಲ ಗೀಚಿ ಕೆಮ್ಮಿದೆನು
ಮೈಯೆಲ್ಲ ಕೈಯಾಗಿ ಮುಗಿದು ನಿಂತೆ.
ಏನ ಏವಚವೇದಗಾಂಧಿ ಸಂಸ್ಕೃತಿ ಅಂತ
ಭಾರತದ ಹರಿಕಥೆಯ ಹಾಡಿಬಿಟ್ಟೆ.

ಇಡೀ ಗ್ಲೋಬು ನಕ್ಕಂತೆ ಸೂಸಿದರು ಸ್ವಾಮಿ
ಬಲಹುಬ್ಬು ಹಣೆಗೇರಿ ಗಂಟಾಯಿತು.
ಕೆನ್ನೆ ಮುಷ್ಟಿಯ ಮೇಲೆ ಊರಿದರು, ನೋಡುತ್ತ
ಇಡಿ ಏಶಿಯಾ ಖಂಡ ಮುದುಡಿಯಾಯ್ತು.

ಪಾರಿವಾಲದ ಮೈಯ ತಟ್ಟಿ ನಕ್ಕರು ಸ್ವಾಮಿ
ಹಿಕ್ಕೆ ಹಾಕಿತು ಒಂದು ಎರಡು ಮೂರು,
ಇತ್ತ ಎಸೆದರು, ಸ್ವಾಮಿ ಹೈಹೈ ಹಸಾದವೆಂ-
ದುಡಿಯೊಡ್ಡಿ ಹಿಡಕೊಂಡೆ; ಹಿಕ್ಕೆಯೂ ಹಳದಿ!

ಹಿಕ್ಕೆ ಕೊಟ್ಟರು ನೋಡಿ; ಹೆಚ್ಚು ಬೆಳೆ ಗ್ಯಾರಂಟಿ
ಬೆಳ್ಳಿ ಬಟ್ಟಲ ಭಾಗ್ಯವುಂಟು ಖಾತ್ರಿ.
ತೂಗು ತೊಟ್ಟಿಲ ಭಾಗ್ಯ ಮೂರು ಮೀರುವುದುಂಟು
ಇನ್ನು ಪರಾವಯಿಲ್ಲ; ಖುಶಿಯಿಂದಿರಿ.

# ಸಾವಿರದ ನೆರಳು – ೧೯೭೯: ಕಾಡುಕುದುರೆ

ಕಾಡುಕುದರಿ ಓಡಿ ಬಂದಿತ್ತ ||

ಊರಿನಾಚೆ ದೂರ ದಾರಿ
ಸುರುವಾಗೊ ಜಾಗದಲ್ಲಿ |
ಮೂಡಬೆಟ್ಟ ಸೂರ್ಯಹುಟ್ಟಿ
ಹಸರಿನ ಗುಟ್ಟ ಒಡೆವಲ್ಲಿ |
ಮುಗಿವೇ ಇಲ್ಲದ |
ಮುಗಿಲಿನಿಂದ |
ಜಾರಿಬಿದ್ದ ಉಲ್ಕೀ ಹಾಂಗ |
ಕಾಡಿನಿಂದ ಚಂಗನೆ ನೆಗೆದಿತ್ತ ||

ಮೈಯಬೆಂಕಿ ಮಿರಗತಿತ್ತ
ಬ್ಯಾಸ್ಗಿ ಬಿಸಿಲ ಉಸಿರಾಡಿತ್ತ |
ಹೊತ್ತಿ ಉರಿಯೋ ಕೇಶರಾಶಿ
ಕತ್ತಿನಾಗ ಕುಣೀತಿತ್ತ |
ಧೂಮಕೇತು |
ಹಿಂಬಾಲಿತ್ತ |
ಹೌಹಾರಿತ್ತ ಹರಿದಾಡಿತ್ತ |
ಹೈಹೈ ಅಂತ ಹಾರಿ ಬಂದಿತ್ತ ||

ಕಣ್ಣಿನಾಗ ಸಣ್ಣ ಖಡ್ಗ
ಆಸುಪಾಸು ಝಳಪಿಸಿತ್ತ |
ಬೆನ್ನ ಹುರಿ ಬಿಗಿದಿತ್ತಣ್ಣ
ಸೊಂಟದ ಬುಗುರಿ ತಿರಗತಿತ್ತ |
ಬಿಗಿದ ಕಾಡ |
ಬಿಲ್ಲಿನಿಂದ |
ಬಿಟ್ಟ ಬಾಣಧಾಂಗ ಚಿಮ್ಮಿ |
ಹದ್ದ ಮೀರಿ ಹಾರಿ ಬಂದಿತ್ತ ||

ನೆಲ ಒದ್ದು ಗುದ್ದ ತೋಡಿ
ಗುದ್ದಿನ ಬುದ್ಧ ಒದ್ಧಿಯಾಗಿ
ಒರತಿ ನೀರು ಭರ್ತಿಯಾಗಿ
ಹರಿಯೋಹಾಂಗ ಹೆಜ್ಜೀ ಹಾಕಿ |
ಹತ್ತಿದವರ |
ಎತ್ತಿಕೊಂಡು |

ಏಳಕೊಳ್ಳ ತಿಳ್ಳೀ ಆಡಿ |
ಕಳ್ಳೆಮಳ್ಳೆ ಆಡಿಸಿ ಕೆಡವಿತ್ತ ||

**(ಕಾಡುಕುದುರೆ)**

# ಸಾವಿರದ ನೆರಳು – ೧೯೭೯: ಒಂದಾನೊಂದು ಕಾಲದಲ್ಲಿ

*ಒಂದನೆಯ ಚೌಕ:*
ಒಂದಾನೊಂದು ಕಾಲದಾಗ ಏಸೊಂದ ಮುದವಿತ್ತ
ಏಸೊಂದ ಮುದವಿತ್ತ
ಮುದಕೊಂದ ಹದವಿತ್ತ
ಹದಕ ಹಂಗಾಮಿತ್ತ | ಅದಕೊಂದ
ಶಿವನ ಲಗಾಮಿತ್ತ ||

ಏ ಒಂದಕೆಂಟ ಸಂಭವಿಸುತ್ತಿದ್ದವೋ
ಕುರುಹುಗೊಂಡವೆಲ್ಲ ಹೆಸರುಗೊಂಡವೋ
ಆಳದ ಹಳಿಗವಿ ಬೆಳಕನುಟ್ಟವೋ
ಹಾಳ ಬಾವಿಗೂ ಕಣ್ಣ ಬಂದವೋ
ಬೇಲಿಯ ಮ್ಯಾಲೆ ನೀಲಿಯ ಹೂವೋ
ಬೀಳುನೆಲದ ಎದಿ ಕಲ್ಲ ಕರಗಿ ಸೆಲಿ
ಚೆಲ್ಲನೆ ಚಿಮ್ಮಿತ್ತ |
ಬೆಲ್ಲದ ಕೆಸರಿಗಿ ಸಕ್ಕರಿ ಮಳಲಯ್ಯ
ಹಾಲಿನ ಹೊಳಿಯಿತ್ತ | ಹೊಳಿ ನೋಡ
ಭರ್ತಿ ಹರಿಯತಿತ್ತ ||

*ಎರಡನೆಯ ಚೌಕ:*
ಏನ ಹೇಳಲಿ ಕಾಲದ ಮಹಿಮಾ ತಪ್ಪಿದಾವ ತಾಳ
ಗಾಳಿಗಿ ಬೆದಿ ಬಂದ ಬೀಸ್ಯಾವ ಬಿರುಗಾಳಿ
ಉಸರ ಹಾಕತಾಳ | ಕೇಳವ
ರಿಲ್ಲ ನೆಲದ ಗೋಳಾ ||

ಇದ್ದುದೆಲ್ಲ ಹೋಗಿ ಇತ್ತೋ ಇಲ್ಲೊ ಆಗಿ
ಕರುಹುಗೆಟ್ಟುದಕ ಹೆಸರೇನಿಟ್ಟಿ?
ಸೀಮೆಯ ಕಲ್ಲಿಗಿ ಬೇಲಿಯ ಸಾಕ್ಷಿ
ಬೇಲಿ ಹೂವಿನಾಗ ಹನಿ ಹನಿ ಇಬ್ಬನಿ
ರಗತ ತಟಕತಾವ ಇಬ್ಬನಿ ಹನಿಗಿ
ಸಂಜಿ ಮುಂಜಾನೆ ಮಂಜು ಮೂಡಿದರ

ಮಂಜು ಕೆಂಪಗಿತ್ತು |
ಹಾಲಿನ ಹೊಳಿಗಿ ರಗತ ಬೆರಸಿದರ
ಎಳಿ ಮೀನಿಗಿ ಕುತ್ತು | ಹದ್ದಿನ
ನೆರಳು ಸುಳಿಯುತಿತ್ತು ||

*ಮೂರನೆಯ ಚೌಕ:*
ಏನಕೇನ ಸಂಭವಿಸದವಯ್ಯಾ ತಿಳಿಯಲಿಲ್ಲ ಮಾಯಾ
ಎಲ್ಲಿ ನೋಡಿದಲ್ಲಿ ವೀರಗಲ್ಲುಗಳು
ಕಲ್ಲಿಗೊಂದು ಕಥೆಯ | ಹೇಳ್ಯಾವ
ನೆನಪಿನ ಲಾವಣಿಯಾ ||

ಒಂದ ಹೋಗಿ ಮತ್ತೊಂದು ಆದುವೋ
ಗುರುತಿನ ಹೆಸರು ಬದಲಿಯಾದವೋ
ಕಾರಮೋಡಗಳು ಕಿಡಿಸುರದಾವೋ
ಹಸನು ಮಾಡಿ ಹರಗಿದ್ದ ಹೊಲದಾಗ
ಬಗಸಿಲೆ ಬಿತ್ತಿ ಸನಿಕಿಲೆ ಎಳದಾರ
ಎಲುವಿನ ಫಲರಾಶಿ |
ಹರಿಯುವ ಹೊಳಿಯಾಗ ವಿಷ ಹರಿಯತಾವ
ಜೀವರಸದ ಬದಲಿ | ಕಣ್ಣಾಗ
ಬಸದಾವ ರಗತ ಹನಿ ||

**(ಒಂದಾನೊಂದು ಕಾಲದಲ್ಲಿ)**

# ಸಾವಿರದ ನೆರಳು – ೧೯೭೯: ಬಿಚ್ಚಗತ್ತಿಯ ಬಂಟನ ಕತಿಯ

ಬಿಚ್ಚಗತ್ತಿಯ ಬಂಟನ ಕತಿಯ
ಬಲ್ಲಿರೇನ ಯಾರಾ ?
ಸುತ್ತ ದೈವದಾಗ ನಿಂತ ಕೇಳಿದರ
ಆದಾರ ಬೇಖಬರಾ
ಹೆಂಗರೆ | ತಿಳಿದಾವು ಮಜಕೂರಾ ||

ಅಡಗೂಲಜ್ಜಿಗಳ ಹಿಡದ ಕೇಳಿದರ
ತುಟೀ ಬಿಕ್ಕನಮುಕಿ
ಹಾಕ್ಯಾರ | ಹುಬ್ಬಿನ ತುದಿ ಕುಣಿಕಿ
ಹರೇ ಅಂಬುವ ಹಾಲಿನ ಗಡಿಗಿ
ಒಡೆದನೇನೊ ಬೆರಿಕಿ

ಹೇಳಾಕ ಒಲ್ಲರವನ ಖ್ಯಾತಿ
ನೆನದರ | ಬಾಡತಾವ ಮೋತಿ ||

ಬಯಲಿನ ಕಣ್ಣಿಗಿ ಬಣ್ಣ ಬರೆದವನ
ಕತಿಗಿ ಸಾಕ್ಷಿ ಯಾರಾ ?
ವೀರನ | ಕತಿಗಿ ಸಾಕ್ಷಿ ಯಾರಾ ?
ಕದನವಾಡಿದ ಬಟಾಬಯಲಿನಾಗ
ಕಾಡ ಬೆಳೆದಿತಲ್ಲ,
ಬಯಲಿನ | ಹೆಸರು ತಿಳಿಯದಲ್ಲಾ ||

ಕರುಳು ಇಲ್ಲದ ಕಲ್ಲೇನ ಬಲ್ಲುದೊ
ಕಲ್ಲಿಗಿ ಬಾಯಿಲ್ಲಾ
ಶಾಸನ | ಕಲ್ಲಿಗಿ ಬಾಯಿಲ್ಲಾ
ಕಾಲನ ಕಾಲಿನ ತೊತ್ತುಳದುಳಿತಕ
ಪುಡಿಪುಡಿಯಾಯ್ತುಲ್ಲಾ
ಶಾಸನ | ಧೂಳಿಯಾಯಿತಲ್ಲಾ ||

ಹಾದಿಹೋಕರ ಹಾದೀ ತಿರುವಿನಾಗ
ಭೂತವಾಗಿ ಕಂಡ
ಬಂಟ | ಭೂತವಾಗಿ ಕಂಡ
ಅಳೋ ಮಕ್ಕಳ ಗದರಿಸಿ ಕರದಾರ
ಅವನ ಹೆಸರುಗೊಂಡಾ
ಮಂದಿ | ಅವನ ಹೆಸರುಗೊಂಡಾ ||

ಹಳೀ ಹೆಳವರ ಹರಕ ದಪ್ತರಾ ಹಾಕತಾವ ಉಸರಾ:
ಬಿಚ್ಚಗತ್ತಿಯ ಬಂಟನ ಕತಿಯ
ಬಲ್ಲಿರೇನ ಯಾರಾ ?
ಹೆಂಗರೆ | ತಿಳದಾವು ಮಜಕೂರಾ ||

**(ಒಂದಾನೊಂದು ಕಾಲದಲ್ಲಿ)**

# ಸಾವಿರದ ನೆರಳು – ೧೯೭೯: ಹಾರಿ ಹಾರೈಸುತ

ಹಾರಿ ಹಾರೈಸುತ ಹಲವ ಹಂಬಲಿಸುತ
ಒಲವಿನಾಸರೆ ಬೇಡುತ | ಬಂದೆ
ನಿನ್ನ ಸ್ವಾಗತವಿಲ್ಲ ನಗೆಯ ಹೂ ಬಿಸಿಲಿಲ್ಲ
ಬೆಂಕಿ ಬಿದ್ದವು ಕನಸಿಗೆ ||

ಹೇಗೆ ಹೇಳಲಿ ಹೇಗೆ ಹೇಳಲಾರದೆ ಇರಲಿ
ಬತ್ತಿ ಹೋಗಿದೆ ನಾಲಿಗೆ
ಸಿಂಬೆ ಬಿಚ್ಚುವ ನೆನಪು ಬುಸುಗುಡುವ ಬಿಸಿಯುಸುರು
ಸಂದೇಹ ಸುಳಿದಾಡಿದೆ | ಒಳಗೆ
ಭಗ್ನ ಮಂದಿರ ಮೂಕ ಗೋರಿಯಾಗಿದೆ ಲೋಕ
ಹೀಗೇಕೆ ಬದಲಾಗಿದೆ ||

ಕಾಲನ ಗಡಿ ಮೀರಿ ಕಾಯುವೆ ನಿನಗಾಗಿ
ನನ್ನ ಬಿಡುಗಡೆ ಎಂದಿಗೆ
ಹರುಷ ಹಿಂದಿರುಗಿಸು ಜಡಕೆ ಚೇತನ ನೀಡು
ಸಫಲವಾಗಲಿ ಸಾಧನೆ |
ನನ್ನೆದೆಯ ಬಾನೊಳಗೆ ಮಳೆಬಿಲ್ಲ ಬರೆದವಳೆ
ಕನಸುಗಳ ಕೊಡುವವಳೆ
ತೋರಿಸು ದಯೆ ಕರುಣೆ ||

**(ಉಡುಗೊರೆ)**

# ಸಾವಿರದ ನೆರಳು – ೧೯೭೯: ಬ್ಯಾಟಿ ಬ್ಯಾಟಿಯನಾಡಿದಾ

ಬ್ಯಾಟಿ ಬ್ಯಾಟಿಯನಾಡಿದಾ |
ಬ್ಯಾಡರ ಹುಡುಗ |
ಕಾಡ ಬ್ಯಾಟಿಯನಾಡಿದಾ ||

ಕಾಡೀನ ಮೈಸವರಿ
ಸೂಸ್ಯಾವ ಬಿಸಿಗಾಳಿ
ತುಳುಕ್ಯಾವ ಖುಶಿ ಪುರಮಾಸಿ |
ಹವ್ವಲ್ಲೆ ಅಂದರ
ಅವ್ ನೋಡ ಹೂಚಿಗುರ
ಗಂಧ ಸೂಸ್ಯಾವ ಮಲ್ಲೀಗಿ | ಹಾ ಎವ್ವಾ |
ಬಾಯಿ ಬಂದಾವ ಸಂದಿಗೊಂದೀಗಿ ಹಾ ತಾಯಿ ||

ನದರ ನದರಿಗಿ ತಳಕ
ಹಾಕಿದರ ಮೈಪುಳಕ
ಒಳಗ ಒಡದಾವ ತಿಳಿಬೆವರಾ |
ಹಿಂಡನಗಲಿದ ಜಿಂಕಿ
ಹೌಹಾರಿ ಯಾಕ ನಿಂತಿ

ಹಾರಿ ಬಂದಾನ ಹುಲಿರಾಯಾ: ಹಾ ಎವ್ವಾ
ಎಲ್ಲಿ ಹೋದೀಯೆ ನನ್ನ ಹುಲ್ಲೇಯ ಮರಿಯೆಂದಾ ||

ಮಾತನಾಡುತ ಬಂದಾ
ಮೈಮ್ಯಾಲ ಕೈ ತಂದಾ
ಬಸವಳಿದಾವ ಹಸಿ ದಿಗರಾ |
ಜೋಲಿ ತಪ್ಪಿದ ಪೋರಿ
ಬಿದ್ದಾಳ ತೆಕ್ಕೀಗಿ
ಕರಗಿ ಹರಿದಾವ ನಾಚೀಕಿ | ಹಾ ಎವ್ವಾ |
ಸಂದ ಉಳಿಯದ ಹಾಂಗ ಒಂದಾಗಿ ಮೈಮುರಿದಾ ||

**(ಕರಿಮಾಯಿ)**

# ಸಾವಿರದ ನೆರಳು – ೧೯೭೯: ಹಾಡು

ಆಳ ಆಳ ಪಾತಾಳದಾಗಿನ
ಮೋಸದಾಗಿನ ಕಸಾ ಸೋಸಿ ನಾ
ಅಸಲ ಹಾಡ ಹೇಳಿದರೂ
ನಂಬಾಣಿಲ್ಲ ನನ್ನ ನಚ್ಚಾಣಿಲ್ಲ ಹುಸಿ
ಹುಸೀ ಎಂಬರವರು.

ದೊಡ್ಡದಲ್ಲ ಘನಸಣ್ಣದಲ್ಲ ಹಾ-
ಡಿತ್ತು ಒಡಲಿನಷ್ಟ.
ಬಣ್ಣ ಇಲ್ಲ ಖರೆ, ಕರ್ರಗಿತ್ತು ಅಮ-
ವಾಸೆ ರಾತ್ರಿಯಷ್ಟ.
ತಣ್ಣಗಲ್ಲ ಬಿಸಿಯಲ್ಲ ಇತ್ತು ಶೀ-
ತೋಷ್ಣ ರಕ್ತದಷ್ಟ.
ನಂಬಲಿಲ್ಲವರು ನೆಚ್ಚಲಿಲ್ಲವರು ತಮ
ತುದೀ ಮೂಗಿನಷ್ಟ.

ಸಹಜವಾಗಿತ್ತು ಹಾಡು ಮರದ ಗಂಟಲಿನ ಚಿಗುರಿನಂತೆ
ಮೂರ್ತವಿತ್ತು ಮುದಿಸೂಳೆ ಆಳುವ ಮೈಮನದ ನೋವಿನಂತೆ
ನಾಡಿಬಡಿತಗಳ ಪ್ರಾಸವಿತ್ತು ನಿಜವಿತ್ತು ನಿಜದ ಹಾಗೆ
ಹೊಟ್ಟೆಕಿಚ್ಚಿನಲಿ ಸುಟ್ಟ ಹಸಿವೆಯ ಕಪ್ಪು ತರ್ಕದಂತೆ
ಕಾರಮೋಡ ಭೋರ್ಗರೆದು ಗುಡುಗುವ ಮಿಂಚಿನೆಳೆಯ ಹೋಲಿದರೂ
ನಂಬಲಿಲ್ಲವರು ನಚ್ಚಲಿಲ್ಲ ಹುಸೀ ಹುಸೀ ಎಂದು ಕೂಗಿದರು.

ಕರುಳಿನಾಳದ ಖರೇದೊಳಗಿಂದ
ಹೊರಗ ಬರುವ ಅವಸರಕ
ತುಸ ರಕ್ತ ಬಂತು ಕಣ್ಣುರಿಯುತಿತ್ತು
ಕಡುನೀಲಿ ಫಾಸ್ಫರಸ್‌ಧಾಂಗ

ತುಟೀ ಕಚ್ಚಿ ನಿಂತಿತ್ತು ಉಕ್ಕುವ
ಬಿಕ್ಕ ತಡಿಯೊ ಹಾಂಗ
ಆದರೇನು ಅದ ಕಂಡ ಒಡನೆ
ಮೈ ಬಿಳಿಚಿ ಕಿರಿಚಿದರು
ಒದರಿ ಕೂಗಿದರು
ಹುಸೀ ಎಂದರವರು.

# ಸಾವಿರದ ನೆರಳು – ೧೯೭೯: ಆಮೇಲೆ ಮರುಗಬೇಡ

ನಡುನೀರಿನೊಳಗೆನ್ನ ಕೈಯ ಬಿಡಬೇಡ
ಆಮೇಲೆ ಮರುಗಬೇಡ ||

ಕಣ್ಣೊಳಗೆ ಬೆರಳಿಟ್ಟು ಸರಸವಾಡುವರೇನ?
ಸೋತವನ ತಿರುತಿರುಗಿ ಇರಿವರೇನ?
ಹುಲ್ಲು ನೆತ್ತಿಯಲಿಟ್ಟು ಶರಣಾಗಿ ಬಂದವನ;
ಕಲ್ಲದೆಯ ಶೂಲದಲಿ ಕೊಲುವರೇನ?

ನೀನಿರದ ಹಾಸಿಗೆ ಸುಡುಸುಡುವ ಬೇಸಿಗೆ
ತಾಳಲಾರೆ, ಹುಡುಗಿ ಬಾಳಲಾರೆ.
ಕಿಚ್ಚಿನೊಳಗಿನ ಕೀಡೆ ಹುರಪಳಿಸಿ ಸಾಯುವೆ;
ಬೂದಿಯಾಗುವ ಮುನ್ನ ಒದಗಿ ಬಾರೆ.

ಜೀವಜೀವದ ಜೊತೆಗೆ ಅದು ಯಾವ ಸರಸವೇ?
ನಿಂತೆ ಜೀವದ ಆಸೆ ಹಂಗ ಹರಿದು
ಬದುಕಿಸಲು ಆಗದಿರೆ ಜೀವ ಬೇಕೆ? ತಗೊ:
ಸಾವಿನಲ್ಲೂ ನನಗೆ ನೀನೆ ಬೇಕು.

**(ಪ್ರೇಮ ಕಾಮ)**